# ಯೋಜನಾ

ಡಿಸೆಂಬರ್ 2014 | ಅಭಿವೃದ್ಧಿ ಮಾಸಪತ್ರಿಕೆ | ₹ 10/-

## ವಿದೇಶಿ ನೇರ ಬಂಡವಾಳ ಹೂಡಿಕೆ ಮತ್ತು ಅಂತಾರಾಷ್ಟ್ರೀಯ ವ್ಯಾಪಾರ




**ಭಾರತದ ಉದ್ಯಮಿಗಳ ವಿದೇಶಿ ಹೂಡಿಕೆ ಏಕೆ ?**
ವಿ.ಎನ್. ಬಾಲಸುಬ್ರಹ್ಮಣ್ಯಂ ಮತ್ತು ನಿಕೋಲಸ್ ಫಾರ್ಸಾನ್ಸ್

**ಹರಿವು : ನೀತಿ ಬದಲಾವಣೆ ಮತ್ತು ಸ್ಥಿತ್ಯಂತರ**
ಸೊಜಿನ್ ಶಿನ್

**ಬಂಡವಾಳ ಹೂಡಿಕೆಯಲ್ಲಿ ಪ್ರಾದೇಶಿಕ ಅಸಮತೆ**
ಡಾ ಎಸ್.ಆರ್. ಕೇಶವ

**ವಿಶೇಷ ಲೇಖನ**
**ಕಾನೂನು – ಸಂದಿಗ್ಧದಲ್ಲಿ ಅನಿವಾಸಿ ಭಾರತೀಯರು**
ಅನಿಲ್ ಮಲ್ಹೋತ್ರಾ

Yojana (Kannada) December 2014
"Registered" Reg.No.RNP/KA/BGS/2024/2013-2015
Date of Publication 3rd December, Posted at Bengaluru GPO on 10th December
Total No. of Pages : 52 + 4 Cover Pages
ISSN 0971-8737
Regd.No. RNI 43034/85

# ಹರಿಪ್ರಸಾದ್

## ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

# KAS (Prelims cum Mains - as per New Syllabus)

★ ರಾಜ್ಯದಲ್ಲೇ ಅತೀ ಹೆಚ್ಚು **KAS** ಫಲಿತಾಂಶಗಳನ್ನು ನೀಡಿದ ಅನುಭವಿ ಬೋಧಕರ ತಂಡ

★ ವಾರಂತ್ಯದಲ್ಲಿ ಕಿರುಪರೀಕ್ಷೆ (ಪೂರ್ವಬಾವಿ ಮತ್ತು ಮುಖ್ಯ ಪರೀಕ್ಷೆ) ಮತ್ತು ಚರ್ಚೆ.

★ ಒಂದೊಂದು ವಿಷಯಕ್ಕೂ ಪ್ರತ್ಯೇಕ ತರಬೇತಿ ನೀಡಲಾಗುವುದು.

## OPTIONAL SUBJECTS

★ ಕನ್ನಡ ಸಾಹಿತ್ಯ (ಖ್ಯಾತಸಾಹಿತಿ ಮತ್ತು ವಿಮರ್ಶಕರಿಂದ) ★ ಇತಿಹಾಸ

★ ಮಾನವ ಶಾಸ್ತ್ರ (Anthropology) ★ ಸಾರ್ವಜನಿಕ ಆಡಳಿತ

★ ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ (Rural Development & Cooperation)



G. HARIPRASAD
DIRECTOR

"ವಿಜ್ಞಾನ ಮತ್ತು ತಂತ್ರಜ್ಞಾನ", "ಪರಿಸರ ಅಧ್ಯಯನ" ವಿಷಯಗಳನ್ನು ಕನ್ನಡದಲ್ಲಿ ಬೋಧಿಸಲಾಗುತ್ತದೆ.

FREE UPDATES ON CURRENT EVENTS @
**www.ambitionias.com**

# 6, 4th Cross, 5th Main, B/h. Hampinagar Post Office, (Next to SBM), Vijayanagar 2nd Stage, Bangalore-104

**Ph: 080-23354445, 9740472728, 9482013522**

Printed & Published by Dr. (Ms) Sadhana Rout, Additional Director General and Head on behalf of Publications Division Soochna Bhawan, C.G.O. Complex, Lodhi Road, New Delhi - 110 003. & Printed at Omkar Offset Printers, 3/3, 1st Main Road, New Tharagupet, Bengaluru - 560 002. Ph. : 080-26708186/7 and Published at 1st Floor, 'F' Wing, Kendriya Sadana, Koramangala, Bengaluru - 560 034. Ph : 080 2553 7244 Chief Editor : Rajesh K. Jha, Senior Editor : B.S. Meenakshi.

ಡಿಸೆಂಬರ್ 2014 ಸಂಚಿಕೆ – 5 ಸಂಪುಟ – 30

# ಯೋಜನಾ

ವಿಳಾಸ

ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : yojanakannada@yahoo.com

ಮುಖ್ಯ ಸಂಪಾದಕ
**ರಾಜೇಶ್ ಕೆ. ಝಾ**

ಹಿರಿಯ ಸಂಪಾದಕಿ
**ಬಿ.ಎಸ್. ಮೀನಾಕ್ಷಿ**

ಸಂಪಾದಕಿ
**ಬಿ.ಕೆ. ಕಿರಣ್ಮಯಿ**

## ಈ ಸಂಚಿಕೆಯಲ್ಲಿ ..........

ಸಂಪಾದಕೀಯ .......... 2

ಭಾರತದ ಉದ್ಯಮಿಗಳ ವಿದೇಶಿ ಹೂಡಿಕೆ ಏಕೆ? .......... 3
**– ವಿ. ಎನ್. ಬಾಲಸುಬ್ರಹ್ಮಣ್ಯಂ ಮತ್ತು ನಿಕೋಲಸ್ ಫಾರ್ಸ್ಸಾನ್ಸ್**

ಅಮೆರಿಕ–ಭಾರತ ವಹಿವಾಟು ಉಪಕ್ರಮಗಳು .......... 8

ಹರಿವು; ನೀತಿ ಬದಲಾವಣೆ ಮತ್ತು ಸ್ಥಿತ್ಯಂತರ .......... 10
**– ಸೊಜಿನ್ ಶಿನ್**

ಬಂಡವಾಳ ಹೂಡಿಕೆಯಲ್ಲಿ ಪ್ರಾದೇಶಿಕ ಅಸಮತೆ .......... 13
– ಡಾ. ಎಸ್ ಆರ್. ಕೇಶವ

ಚಿಲ್ಲರೆ ವಲಯದಲ್ಲಿ ಹೂಡಿಕೆ .......... 22
**– ಲೀನಾ ಅಜಿತ್ ಕೌಶಲ್**

ಕೇಂದ್ರ ಸಚಿವ ಸಂಪುಟ .......... 26

ಹೊರ ಜಗತ್ತಿನೊಂದಿಗೆ ಆರ್ಥಿಕ ಸಂಬಂಧ .......... 28
**– ತ್ರಿದೇವ ಸಿಂಗ್ ಮೈನಿ**

ಕಾನೂನು – ಸಂದಿಗ್ಧದಲ್ಲಿ ಅನಿವಾಸಿ ಭಾರತೀಯರು .......... 32
**– ಅನಿಲ್ ಮಲ್ಹೋತ್ರಾ**

ಸಾಫ್ಟ್‌ವೇರ್ ರಫ್ತು : ಕರ್ನಾಟಕದ ಸಾಧನೆ .......... 36
**– ಮಾಧವ**

ಹಣ್ಣು ಮತ್ತು ತರಕಾರಿ ರಫ್ತು – ಸವಾಲು .......... 39
**– ಡಾ. ಎಸ್.ಬಿ. ಹೊಸಮನಿ ಮತ್ತು ವಿನಾಯಕ ಹೊಸಮನಿ**

ಅಂತಾರಾಷ್ಟ್ರೀಯ ವ್ಯಾಪಾರ .......... 45
**– ಡಾ. ಆರ್. ಶಂಕರಪ್ಪ**

ಸ್ವಚ್ಛತಾ ಆಂದೋಲನ .......... 49
**– ಹೆಚ್. ಶ್ರೀನಿವಾಸ**

ನಿಮಗಿದು ತಿಳಿದಿದೆಯೇ? .......... 51

ವಾರ್ತಾ ವಿಶೇಷ .......... 52

ಮುಖಪುಟ ವಿನ್ಯಾಸ : ಗಜಾನನ ಪಿ. ಧೋಪೆ

ಯೋಜನೆಯ ಸಂದೇಶವನ್ನು ಎಲ್ಲ ಜನಗಳಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಲಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.

**ಚಂದಾ ವಿವರ**

| | |
|---|---|
| ಒಂದು ವರ್ಷಕ್ಕೆ | 100.00 |
| ಎರಡು ವರ್ಷಗಳಿಗೆ | 180.00 |
| ಮೂರು ವರ್ಷಗಳಿಗೆ | 250.00 |

**ಚಂದಾ ಹಣವನ್ನು ಮನಿಯಾರ್ಡರ್ ಮೂಲಕವೇ ನಮ್ಮ ವಿಳಾಸಕ್ಕೆ ಕಳಿಸಿರಿ.**

**ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ವಿಳಾಸಕ್ಕೆ ಕಳುಹಿಸಬೇಕು.**

**ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ. ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತದೆ.**

ಮುಖ್ಯ ಸಂಪಾದಕರ ಲೇಖನಿಯಿಂದ

# ರಾಜಕೀಯ ಆರ್ಥಿಕತೆ – ವಿದೇಶಿ ನೇರ ಬಂಡವಾಳ ಹೂಡಿಕೆ




ಭಾರತಕ್ಕೆ ಸ್ವಾತಂತ್ರ್ಯ ಬಂದು ಆರು ದಶಕಗಳೇ ಕಳೆದಿವೆ. ಆನಂತರ ಗಂಗೆ, ಮಿಸಿಸಿಪ್ಪಿ, ಯಾಂಗ್‌ಟೆ, ದನೂಬೆ ನೈಲ್ ಮತ್ತು ಅಮೆಜಾನ್ ನದಿಗಳಲ್ಲಿ ನೀರು ಹರಿದಂತೆ ಅನೇಕ ವಿದ್ಯಮಾನಗಳೇ ನಡೆದಿವೆ. ಜಗತ್ತಿನ ಆರ್ಥಿಕ ವಾಸ್ತವಿಕತೆ ಅಪಾರ ಬದಲಾವಣೆ ಕಂಡಿದೆ. ಒಂದು ಕಾಲದಲ್ಲಿ ಏಶಿಯಾ ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಗಳಲ್ಲಿ ಪರಕೀಯ ಆಳ್ವಿಕೆ ವಿರುದ್ಧದ ಹೋರಾಟ ಸಂದರ್ಭದಲ್ಲಿ ಮುಂಚೂಣಿಯಲ್ಲಿದ್ದ ರಾಷ್ಟ್ರೀಯತೆ ಪ್ರತಿಪಾದನೆಯ ಭರಾಟೆ ವಿಭಿನ್ನ ಆಯಾಮ ಪಡೆದಿದೆ. ವಿಶ್ವ, ಅರ್ಧಶತಮಾನಗಳ ಹಿಂದಿಗಿಂತಲೂ ಈಗ ಅತಿ ಹೆಚ್ಚಿನ ಸಂಖ್ಯೆ ಪರಿಮಾಣಾತ್ಮಕ ಹಾಗೂ ಗುಣಾತ್ಮಕವಾಗಿ ಸಂಪರ್ಕಭರಿತವಾಗಿದೆ.

ಪ್ರಸಿದ್ಧ ಇತಿಹಾಸಜ್ಞ ಎರಿಕ್ ಹಾಬ್ಸ್‌ಬಾಮ್ ಅವರ ಮಾತುಗಳನ್ನು ಉಲ್ಲೇಖಿಸುವುದಾದರೆ, ಸಾಮ್ರಾಜ್ಯದ ಆಳ್ವಿಕೆ ಯುಗ, ಕ್ರಾಂತಿಯ ಯುಗದ ನಂತರ ಈಗ ಬಂಡವಾಳ ಹೂಡಿಕೆ ಯುಗ ಪ್ರವೇಶಿಸುತ್ತಿದ್ದೇವೆ. ವಿಶ್ವದ ಒಂದು ಭಾಗದಿಂದ ಮತ್ತೊಂದು, ಮಗದೊಂದು ಭಾಗಕ್ಕೆ ಬಂಡವಾಳ ಹರಿದು ಬರುತ್ತಿದ್ದು ವಿಶ್ವ ಆರ್ಥಿಕತೆ ದಿನದಿಂದ ದಿನಕ್ಕೆ ಬಲಗೊಳ್ಳುತ್ತಿದೆ.

ಭಾರತದ ವಿಚಾರವನ್ನೇ ತೆಗೆದುಕೊಂಡರೆ, ಮೊದ ಮೊದಲು ಆಮದು ಬದಲಿ ಔದ್ಯಮೀಕರಣದ ಮಾದರಿ ಇತ್ತು. ವಿದೇಶಿ ನೇರ ಬಂಡವಾಳ ಹೂಡಿಕೆಗೆ ಸಂಬಂಧಿಸಿದಂತೆ ಭಾರತದ ಆರ್ಥಿಕ ಚೌಕಟ್ಟಿನಲ್ಲಿ ವಿವಿಧ ಸ್ಪಷ್ಟ ಕಾಲಘಟ್ಟಗಳನ್ನು ಗುರುತಿಸಬಹುದಾಗಿದೆ. ಭಾರತದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ ವಿರೋಧಿ ಅವಧಿ (1969–75) ಆಯ್ದ ಕ್ಷೇತ್ರಗಳಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ (1975–91) ಹಾಗೂ ನಂತರ 1991ರ ಆರ್ಥಿಕ ಸುಧಾರಣೆಯ ಅವಧಿಯ ವಿದೇಶಿ ನೇರ ಬಂಡವಾಳ ಹೂಡಿಕೆ ಪರವಾದ ಅವಧಿಯನ್ನು ಗುರುತಿಸಬಹುದಾಗಿದೆ. ರಾಜಕೀಯ ಸ್ಥಿತ್ಯಂತರಗಳಿಗೆ ಹೋಲಿಸಿ ಈ ಹಂತಗಳನ್ನು ಗುರುತಿಸಬಹುದಾಗಿದೆ.

ವಿದೇಶಿ ನೇರ ಬಂಡವಾಳ ಹೂಡಿಕೆ ಆಕರ್ಷಿಸಲು ಸಾಂಸ್ಥಿಕ ಸುಧಾರಣೆ ಅವಶ್ಯಕ ಹೆಜ್ಜೆಯಾಗಿದೆ. ಭಾರತಕ್ಕೆ ವಿದೇಶಿ ನೇರ ಬಂಡವಾಳ ಹೂಡಿಕೆ ಸೆಳೆಯಲು ಸರ್ಕಾರ ಅನೇಕ ಕ್ರಮಗಳಿಗೆ ಮುಂದಾಗುತ್ತಿದೆ. ರಕ್ಷಣಾ ಸಾಮಗ್ರಿ ಉತ್ಪಾದನೆ, ನಿರ್ಮಾಣ ಕಾಮಗಾರಿ, ಚಿಲ್ಲರೆ ಮಾರುಕಟ್ಟೆ ಕ್ಷೇತ್ರಗಳನ್ನು ವಿದೇಶಿ ನೇರ ಬಂಡವಾಳ ಹೂಡಿಕೆಗೆ ತೆರೆದಿಡಲಾಗಿದೆ. ಭಾರತವನ್ನು ಉತ್ಪಾದನಾ ನೆಲೆಯನ್ನಾಗಿಸಲು ಮೇಕ್ ಇನ್ ಇಂಡಿಯಾಗೆ ಕ್ರಮಗಳನ್ನು ಆರಂಭಿಸಿದೆ. ಭಾರತದಲ್ಲಿ ಬಂಡವಾಳ ಹೂಡುವಂತೆ ವಿದೇಶಿ ಕಂಪನಿಗಳನ್ನು ಆಹ್ವಾನಿಸಲಾಗುತ್ತಿದೆ. 1992ರಲ್ಲಿ ಒಟ್ಟು ದೇಶೀಯ ಉತ್ಪನ್ನ ಜಿಡಿಪಿಯ ಸೇ. 0.1 ರಷ್ಟಿದ್ದ ವಿದೇಶಿ ನೇರ ಬಂಡವಾಳ ಹರಿವು 2011ರಲ್ಲಿ 1.7ಕ್ಕೇರಿದ್ದು, ಏರಿಕೆಯ ಗತಿಯಲ್ಲಿದೆ. ವಿದೇಶಿ ನೇರ ಬಂಡವಾಳ ಹೂಡಿಕೆ, ಭಾರತದ ಒಟ್ಟು ನಿಗದಿತ ಬಂಡವಾಳ ನಿರ್ಮಿತಿಯ ಬಹುಮುಖ್ಯ ಘಟಕವಾಗಿ ಹೊರಹೊಮ್ಮುತ್ತಿದ್ದು, ಇದು 2011ರಲ್ಲಿ ಶೇ. 6.4ರಷ್ಟಿತ್ತು. ಈಗ ನಮ್ಮ ಮುಂದಿರುವ ಸವಾಲು, ಜಾಗತೀಕರಣ ತೆರೆದಿಟ್ಟಿರುವ ಅವಕಾಶಗಳನ್ನು ನಾವು ಎಷ್ಟು ಕಡಿಮೆ ಅವಧಿಯಲ್ಲಿ ಯಾವ ಪ್ರಮಾಣದಲ್ಲಿ ಬಳಸಿಕೊಳ್ಳುತ್ತೇವೆ ಎಂಬುದಾಗಿದೆ.

ಈ ಪ್ರಕ್ರಿಯೆಗೆ ಸಾಮಾಜಿಕ, ಪಾರಿಸರಿಕ ಮತ್ತು ರಾಜಕೀಯ ಅಂಶಗಳಿಂದ ಅಡೆತಡೆಯಾಗದೆ, ಅನುಕೂಲವಾದರೆ, ಯಶಸ್ಸಿನ ದಾರಿ ಸುಗಮ. ಈ ಮಾರ್ಗದಲ್ಲಿ ಜೀವನೋಪಾಯದ ಸ್ಥಾನಪಲ್ಲಟದ ಆತಂಕ ಎದುರಿಸುವ ವರ್ಗದ ಹಿತಾಸಕ್ತಿ ರಕ್ಷಣೆಯೊಂದಿಗೆ ಒಮ್ಮತಾಭಿಪ್ರಾಯದ ಕಾರ್ಯನಿರ್ವಹಣೆ ಅವಶ್ಯಕ. ಈ ದೂರದೃಷ್ಟಿಯಿಂದ ನೇರ ಬಂಡವಾಳ ಹೂಡಿಕೆಯನ್ನು ಬೇಡಿದ್ದನ್ನು ನೀಡುವ ಕಾಮಧೇನುವನ್ನಾಗಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ರಚನಾತ್ಮಕ ಹೆಜ್ಜೆಗಳನ್ನಿಡಬೇಕಾಗಿದೆ. ❑

# ಭಾರತದ ಉದ್ಯಮಿಗಳ ವಿದೇಶಿ ಹೂಡಿಕೆ ಏಕೆ?

* ವಿ. ಎನ್. ಬಾಲಸುಬ್ರಹ್ಮಣ್ಯಂ
** ನಿಕೋಲಸ್ ಫಾರ್ಸಾನ್ಸ್
ಕನ್ನಡಕ್ಕೆ : ಲಕ್ಷ್ಮಣ ಕೊಡಸೆ



**ವಿದೇಶಗಳಲ್ಲಿ ಭಾರತದ ನೇರ ಬಂಡವಾಳ ಹೂಡಿಕೆಗೆ ಐತಿಹಾಸಿಕ ಕಾರಣಗಳಿವೆ. ಭಾರತದ ಆರ್ಥಿಕ ನೀತಿಯ ವಿಕಾಸದ ಹಂತಗಳಿವೆ. ಈ ಪ್ರಕ್ರಿಯೆ ಇತರ ದೇಶಗಳ ಆರ್ಥಿಕತೆಗೆ ಹೋಲಿಸಿದರೆ ಅನನ್ಯವಾದದ್ದು. ವಿದೇಶಗಳಲ್ಲಿ ಭಾರತದ ನೇರ ಬಂಡವಾಳ ಹೂಡಿಕೆಗೆ ಇಲ್ಲಿನ ಉದ್ಯಮಿಗಳ ಸಾಹಸಪ್ರವೃತ್ತಿಯೂ ಮಹತ್ವದ ಕಾರಣ.**

ಈಚಿನ ವರ್ಷಗಳಲ್ಲಿ ಭಾರತ ಮತ್ತು ಚೀನಾ ವಿದೇಶಿ ಬಂಡವಾಳ ಹೂಡಿಕೆಯ ನಿಯಮಗಳನ್ನು ಉದಾರಗೊಳಿಸಿವೆಯಷ್ಟೇ ಅಲ್ಲ, ವಿದೇಶಗಳಲ್ಲಿ ಹೂಡಿಕೆ ಮಾಡುತ್ತಿರುವ ಶಕ್ತಿಗಳಾಗಿಯೂ ಹೊರಹೊಮ್ಮಿವೆ. ವಿದೇಶಗಳಲ್ಲಿ ಭಾರತದ ಹೂಡಿಕೆ ಚೀನಕ್ಕೆ ಹೋಲಿಸಿದರೆ ಕಡಿಮೆ. ಅದು ತಯಾರಿಕೆ ಮತ್ತು ಸೇವಾ ಕ್ಷೇತ್ರಗಳಲ್ಲಿ ಕೇಂದ್ರೀಕೃತವಾಗಿದೆ. ಅದು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ವ್ಯಾಪಿಸಿದೆ. ಬ್ರಿಟನ್ ಮತ್ತು ಅಮೆರಿಕದಲ್ಲಿ ವಿಶೇಷವಾಗಿ ಕಂಡಿದೆ. ವಿದೇಶಗಳಲ್ಲಿ ಅಸ್ತಿತ್ವದಲ್ಲಿರುವ ಕಂಪೆನಿಗಳನ್ನು ಸ್ವಾಧೀನಪಡಿಸಿಕೊಂಡು ಅಲ್ಲಿ ಬಂಡವಾಳ ಹೂಡುವ ಭಾರತದ ಈ ಪ್ರವೃತ್ತಿ ವಿಶ್ಲೇಷಣೆಯೋಗ್ಯವಾಗಿದೆ. ಭಾರತೀಯ ಸಂಸ್ಥೆಗಳ ನಿರ್ವಹಣಾ ಕೌಶಲ್ಯವೇ ಈ ಬಗೆಯ ಹೂಡಿಕೆಗೆ ಕಾರಣವೆಂದು ಇಲ್ಲಿ ಪ್ರತಿಪಾದಿಸಲಾಗಿದೆ.

### ವಿದೇಶಗಳಲ್ಲಿ ಭಾರತದ ಹೂಡಿಕೆಯ ಗಾತ್ರ ಮತ್ತು ವಿಧಾನ

ಭಾರತದ ಒಟ್ಟು ವಿದೇಶಿ ಬಂಡವಾಳ ಹೂಡಿಕೆ 1990ರಲ್ಲಿ 124 ದಶಲಕ್ಷ ಡಾಲರ್‌ನಷ್ಟು ಇದ್ದುದು 2011ರ ವೇಳೆಗೆ 111, 257 ದಶಲಕ್ಷ ಡಾಲರ್‌ಗಳಿಗೆ ಏರಿರುವುದು ಗಮನಾರ್ಹ. ಇದು ಅಭಿವೃದ್ಧಿಶೀಲ ದೇಶಗಳ ಒಟ್ಟು ಹೂಡಿಕೆಯ ಶೇ 3ರಷ್ಟು ಪಾಲು ಆಗಿದೆ (ಕೋಷ್ಟಕ 1).

ಭಾರತದ ವಿದೇಶಿ ಹೂಡಿಕೆಯ ಸ್ವರೂಪ ಚೀನಕ್ಕಿಂತ ಭಿನ್ನವಾದದ್ದು. ಚೀನವು ತೈಲ ಮತ್ತು ಕಚ್ಚಾವಸ್ತುಗಳ ಕ್ಷೇತ್ರದಲ್ಲಿ ಬಂಡವಾಳ ತೊಡಗಿಸಿದ್ದರೆ, ಭಾರತದ ಬಂಡವಾಳ ಉತ್ಪಾದನೆ ಮತ್ತು ಸೇವಾ ಕ್ಷೇತ್ರಗಳಲ್ಲಿ ಹೂಡಿಕೆಯಾಗಿದೆ (ಕೋಷ್ಟಕ 2).

ಭಾರತದ ವಿದೇಶಿ ಹೂಡಿಕೆಯಲ್ಲಿ ಶೇ 50ಕ್ಕಿಂತಲೂ ಹೆಚ್ಚಿನ ಬಂಡವಾಳ ಅಭಿವೃದ್ಧಿ ಹೊಂದಿದ ದೇಶಗಳಲ್ಲಿದೆ. ಚೀನದ ಒಟ್ಟು ವಿದೇಶಿ ಹೂಡಿಕೆಯಲ್ಲಿ ಶೇ 75ಕ್ಕಿಂತಲೂ ಹೆಚ್ಚಿನ ಬಂಡವಾಳ ಅಭಿವೃದ್ಧಿಹೊಂದುತ್ತಿರುವ ದೇಶಗಳಲ್ಲಿದೆ. 2008ರಲ್ಲಿ ಭಾರತ ಬ್ರಿಟನ್ನಿನಲ್ಲಿ ತೊಡಗಿಸಿದ ಬಂಡವಾಳ ಅಲ್ಲಿನ ವಿದೇಶಿ ಹೂಡಿಕೆಯಲ್ಲಿ ಎರಡನೇ ಸ್ಥಾನದಲ್ಲಿತ್ತು. ಮೊದಲ ಸ್ಥಾನದ ಹೂಡಿಕೆ ಅಮೆರಿಕದ್ದಾಗಿತ್ತು. (ಚಿತ್ರ 2).

ಭಾರತದ ವಿದೇಶಿ ಹೂಡಿಕೆಯ ಬೆಳವಣಿಗೆ ಕಂಪೆನಿಗಳ ಸ್ವಾಧೀನ ಪ್ರಕ್ರಿಯೆಯಿಂದ ಆಗಿದ್ದು (ಚಿತ್ರ 3). 2010ರ ಪಟ್ಟಿಯಂತೆ ಕಂಪೆನಿಗಳ ಸ್ವಾಧೀನಪಡಿಸಿಕೊಂಡ ಹತ್ತು ದೇಶಗಳಲ್ಲಿ

**ಕೋಷ್ಟಕ–1 : ಭಾರತ ಮತ್ತು ಚೀನದ ವಿದೇಶಿ ಬಂಡವಾಳ ಹೂಡಿಕೆ (ದಶಲಕ್ಷ ಡಾಲರ್‌ಗಳಲ್ಲಿ)**

| ದೇಶಗಳು | 1981 | 1985 | 1990 | 1995 | 2000 | 2005 | 2006 | 2007 | 2008 | 2009 | 2010 | 2011 |
|---|---|---|---|---|---|---|---|---|---|---|---|---|
| ಚೀನ | 39 | 900 | 4,455 | 17,768 | 27,768 | 57,206 | 73,330 | 95,799 | 147,949 | 229,600 | 297,600 | 365,981 |
| ಭಾರತ | 80 | 93 | 124 | 495 | 1,733 | 9,741 | 27,036 | 44,080 | 62,451 | 77,207 | 92407 | 111257 |

ಆಕರ : ಯುಎನ್‌ಸಿಟಿಎಡಿ

* ಲ್ಯಾಂಕಸ್ಟರ್ ವಿಶ್ವವಿದ್ಯಾನಿಲಯ, ಮೇನೇಜ್‌ಮೆಂಟ್ ಸ್ಕೂಲ್, ಯುಕೆ. ** ಎಕ್ಸೆಟರ್ ಬಿಸಿನೆಸ್ ಸ್ಕೂಲ್
e-mail : V.balasubramanyam@lancaster.ac.uk. e-mail : n.forsans@exeter.ac.uk

| ಕೋಷ್ಟಕ–2 : ಚೀನ ಮತ್ತು ಭಾರತದ ವಿದೇಶಿ ಹೂಡಿಕೆ | | | | | | | | |
|---|---|---|---|---|---|---|---|---|
| (ದಶಲಕ್ಷ ಡಾಲರ್‌ಗಳಲ್ಲಿ) | | | | | | | | |
| | **2000/01 ರಿಂದ 2006/07** | **ಶೇ. ಪಾಲು** | **2008/09 ರಿಂದ 2011/12** | **ಶೇ. ಪಾಲು** | **2004 ರಿಂದ 2007** | **ಶೇ. ಪಾಲು** | **2008 ರಿಂದ 2010** | **ಶೇ. ಪಾಲು** |
| ಪ್ರಾಥಮಿಕ ಕ್ಷೇತ್ರ | 1.06 | 0.64 | 4.94 | 8.53 | 16.93 | 26.0 | 25.93 | 14.30 |
| ಮಧ್ಯಮ ಕ್ಷೇತ್ರ | 10.98 | 43.46 | 25.96 | 45.00 | 6.06 | 9.0 | 14.18 | 7.83 |
| ಮೂರನೇ ಕ್ಷೇತ್ರ | 13.22 | 52.00 | 26.93 | 46.54 | 42.34 | 65.0 | 141.14 | 77.87 |
| **ಒಟ್ಟು** | **25.26** | | **57.86** | | **65.43** | | **181.24** | |
| ಆಕರ : ಯುಎನ್‌ಸಿಟಿಎಡಿ | | | | | | | | |

ಭಾರತ ಎರಡನೆಯದಾಗಿತ್ತು. ಅದು ಒಟ್ಟು ಸ್ವಾಧೀನ ಪ್ರಕ್ರಿಯೆಯ ಶೇ 24ರ ಪ್ರಮಾಣದಲ್ಲಿತ್ತು. 2000–09ರ ಅವಧಿಯಲ್ಲಿ ಭಾರತದ ಕಂಪೆನಿಗಳು ಒಟ್ಟು 1347 ಕಂಪೆನಿಗಳನ್ನು ಒಟ್ಟು 72 ಶತಕೋಟಿ ಡಾಲರ್ ಹೂಡಿಕೆಯಲ್ಲಿ ಸ್ವಾಧೀನಪಡಿಸಿಕೊಂಡಿದ್ದವು (ಕೋಷ್ಟಕ 3).


ಟೆಟ್ಲಿ ಟೀ, ಜಾಗ್ವಾರ್ ಮತ್ತು ಲ್ಯಾಂಡ್ ರೋವರ್, ಕೋರಸ್ ಸ್ಟೀಲ್ (ಇವೆಲ್ಲವನ್ನೂ ಟಾಟಾ ಸಂಸ್ಥೆ ಸ್ವಾಧೀನಪಡಿಸಿಕೊಂಡಿತು). ಸ್ಕಾಟ್ಲೆಂಡ್‌ನ ಡಿಸ್ಟಿಲರಿ ವೈಟ್ ಮತ್ತು ಮ್ಯಾಕೆಯನ್ನು ಭಾರತದ ಉದ್ಯಮಿ ಮಲ್ಯ ಸ್ವಾಧೀನಪಡಿಸಿಕೊಂಡರು. ಇವುಗಳೊಂದಿಗೆ ಸಾಫ್ಟ್‌ವೇರ್ ಕಂಪೆನಿಗಳಲ್ಲಿ ಹೂಡಿಕೆಯೂ ಮಾಧ್ಯಮಗಳಲ್ಲಿ ಪ್ರಕಟವಾಗಿತ್ತು.

### ಸಾಂಪ್ರದಾಯಿಕ ವಿವರಣೆ

ವ್ಯವಹಾರತಜ್ಞ ಸ್ಟೀಫನ್ ಹೈಮರ್ (1976) ವಿದೇಶಗಳಲ್ಲಿ ಬಂಡವಾಳ ತೊಡಗಿಸುವ ಪ್ರವೃತ್ತಿಗೆ ಮೂರು ಕಾರಣಗಳನ್ನು ತರ್ಕಿಸುತ್ತಾರೆ. ಉತ್ಪನ್ನಗಳ ಆಮದನ್ನು ನಿರ್ಬಂಧಿಸಲು ವಿದೇಶಿ ಕಂಪೆನಿಗಳು ಹೊಂದಿರುವ ಏಕಸ್ವಾಮ್ಯವನ್ನು ಕೊನೆಗೊಳಿಸಲು, ಬೇಕಾದ ಪ್ರದೇಶದಲ್ಲಿ ವ್ಯವಹಾರವನ್ನು ವಿಸ್ತರಿಸಲು ಮತ್ತು ಪ್ರತಿಸ್ಪರ್ಧಿಗಳಿಂದ ಸ್ವಂತ ವ್ಯವಹಾರವನ್ನು ರಕ್ಷಿಸಿಕೊಳ್ಳಲು ಈ ಹೂಡಿಕೆ ನಡೆಯುತ್ತದೆ ಎಂಬುದು ಹೈಮರ್ ಪ್ರತಿಪಾದನೆ. ಈ ಅಂಶಗಳ ತಳಹದಿಯಲ್ಲಿ ಭಾರತ ಮತ್ತು ಚೀನದಿಂದ ಆಗಿರುವ ವಿದೇಶಿ ಹೂಡಿಕೆಯನ್ನು ಇನ್ನೊಬ್ಬ ವ್ಯವಹಾರತಜ್ಞ ಜಯಪ್ರಕಾಶ್ ಪ್ರಧಾನ್ ಇನ್ನಷ್ಟು ಕಾರಣಗಳನ್ನು ಅಧ್ಯಯನ ನಡೆಸಿ ಸೇರಿಸುತ್ತಾರೆ. ಅವರ ಪ್ರಕಾರ, ಪ್ರತಿ ವ್ಯಕ್ತಿಯ ಉತ್ಪಾದಕತೆಯಲ್ಲಿನ ಹೆಚ್ಚಳ, ಸಂಶೋಧನೆ ಮತ್ತು ಅಭಿವೃದ್ಧಿಯ ವೆಚ್ಚ ಹಾಗೂ ನಿರ್ವಹಣಾ ಕೌಶಲ್ಯಗಳ ಜೊತೆಗೆ 1991ರ ನಂತರ ತೆರೆದುಕೊಂಡ ಉದಾರೀಕರಣ ಕ್ರಮಗಳು ಭಾರತದ ಉತ್ಪಾದನಾ ಕಂಪೆನಿಗಳು ವಿದೇಶಗಳಲ್ಲಿ ಬಂಡವಾಳ ತೊಡಗಿಸಲು ಒತ್ತಾಸೆ ನೀಡಿರುವುದನ್ನು ಗುರುತಿಸುತ್ತಾರೆ. ಇದೇನೇ ಇದ್ದರೂ ವಿದೇಶಗಳಲ್ಲಿ ನೆಲೆ ಕಂಡ ಭಾರತೀಯ ಕಂಪೆನಿಗಳು ಬಂಡವಾಳ ಕೇಂದ್ರಿತವಾಗಿರುವುದು ಸ್ಪಷ್ಟ. ಇದಕ್ಕೆ ಭಗವತಿ ಮತ್ತು ದೇಸಾಯಿ ಅವರು 1970ರಲ್ಲಿ ಭಾರತೀಯ ಉತ್ಪಾದನಾ ಕ್ಷೇತ್ರಕ್ಕೆ ಸಂಬಂಧಿಸಿ ದಾಖಲಿಸಿರುವಂತೆ ಉದಾರೀಕರಣದ ಪೂರ್ವದಲ್ಲಿ ಇದ್ದ ಆಮದು ನಿರ್ಬಂಧಗಳು ಕಾರಣ. ಭಾರತದ ಉತ್ಪಾದನಾ ಕ್ಷೇತ್ರ ಚೀನದ ಈ ಕ್ಷೇತ್ರಕ್ಕಿಂತ ಹೆಚ್ಚು ಬಂಡವಾಳ ಕೇಂದ್ರಿತವಾಗಿರುವುದನ್ನು ವ್ಯವಹಾರ ತಜ್ಞ ಸ್ಯಾಪ್ಸ್‌ಫೋರ್ಡ್ ಅವರು 2007ರಲ್ಲಿಯೇ ಅಧ್ಯಯನವೊಂದರಲ್ಲಿ ಗುರುತಿಸಿದ್ದಾರೆ. ವಿದೇಶಗಳಲ್ಲಿ ಹೂಡಿಕೆಗೆ ಭಾರತೀಯ ಕಂಪೆನಿಗಳ ನಿರ್ವಹಣಾ ಕೌಶಲ್ಯ ಮುಖ್ಯ ಕಾರಣ. ಅವುಗಳಲ್ಲಿನ ವ್ಯವಸ್ಥಾಪನಾ ಪರಿಣತಿಯೂ ವಿದೇಶಗಳಲ್ಲಿ ಕಾರ್ಯಾಚರಣೆಗೆ ಒತ್ತಾಸೆ ನೀಡುತ್ತದೆ. ಆದರೆ, ವ್ಯವಸ್ಥಾಪನಾ ಪರಿಣತಿಗೆ ಸಂಕೀರ್ಣ ಆಯಾಮ ಇರುವುದರಿಂದ ಅದರ ಪ್ರಮಾಣವನ್ನು ಸುಲಭವಾಗಿ ಗುರುತಿಸಲಾಗುವುದಿಲ್ಲ. ಪ್ರಧಾನ್ ಅವರು ಕಂಪೆನಿಯ ಆಸ್ತಿಯ ಪ್ರತಿ ಘಟಕಕ್ಕೆ ಸಿಗುವ ಲಾಭ, ಅವಧಿ, ಗಾತ್ರ, ಸಂಶೋಧನೆ ಮತ್ತು ಅಭಿವೃದ್ಧಿ, ಆಮದು ಮಾಡಿಕೊಳ್ಳಲಾದ


**ಚೀನಾದ ವಲಯವಾರು ಓಡಿಐ ಸಂಗ್ರಹ ಶೇಕಡಾವಾರು**

**ಚಿತ್ರ 1**




**ಯುಕೆಗೆ ಶೇ. ವಿದೇಶಿ ನೇರಬಂಡವಾಳ ಹರಿವು ವಿತರಣೆ**


**ಚಿತ್ರ 2**




ಆಕರ : ದಿ ಎಕನಾಮಿಸ್ಟ್, 2009

ತಂತ್ರಜ್ಞಾನಕ್ಕೆ ಕೊಡುವ ಗೌರವಧನ, ಮಾರಾಟ ವೆಚ್ಚ ಹಾಗೂ ಕಂಪೆನಿಯ ಮಾಲಿಕತ್ವದ ಸ್ವರೂಪಗಳನ್ನು ಲಕ್ಷಿಸಿ ಈ ಪ್ರಮಾಣವನ್ನು ಗುರುತಿಸಲು ಯತ್ನಿಸುತ್ತಾರೆ. ವಾಸ್ತವ ಲಾಭದಲ್ಲಿ ನಿರೀಕ್ಷಿತ ಲಾಭಾಂಶವನ್ನು ಕಳೆದರೆ ಅದು ವ್ಯವಸ್ಥಾಪನಾ ತಜ್ಞತೆಗೆ ಸಿಕ್ಕ ಪ್ರತಿಫಲವೆಂದು ಗಣಿಸುತ್ತಾರೆ. ಇದು ನಿರ್ವಹಣಾ ತಜ್ಞತೆಯನ್ನು ಗುರುತಿಸುವ ಸರಳವಾದ ಲೆಕ್ಕಾಚಾರ. ಬಂಡವಾಳಕ್ಕೆ ಸಿಗುವ ಲಾಭ, ಒಟ್ಟು ವೇತನಕ್ಕೆ ಸಿಗುವ ಮೌಲ್ಯ ಎಂಬ ಲೆಕ್ಕವಷ್ಟೆ. ವೇತನ ದರ ಕಡಿಮೆ ಇದ್ದರೆ, ಉದ್ಯೋಗದ ಮಟ್ಟವೂ ಕಡಿಮೆ ಇದ್ದರೆ, ಅದನ್ನು ಕಳೆದು ಉಳಿಯುವ ಮೊತ್ತ ಹೆಚ್ಚೇ ಆಗಿರುತ್ತದೆ. ಹೆಚ್ಚಿನ ಲಾಭ ನಿರ್ವಹಣಾ ತಜ್ಞತೆಗೆ ಸಿಕ್ಕ ಪ್ರತಿಫಲ ಎಂದೇನೂ ಅಲ್ಲ; ಅದು ಮಾರ್ಕ್ಸಿಸ್ಟ್ ಸಿದ್ಧಾಂತದಂತೆ ಬಂಡವಾಳದ ಮಾಲಿಕತ್ವಕ್ಕೆ ಸಂದ ಗಳಿಕೆಯಲ್ಲದ ವರಮಾನ ಎಂದಾಗುತ್ತದೆ. ವ್ಯವಸ್ಥಾಪನಾ ಪರಿಣತಿಯಾಗಲೀ, ಸಾಂಸ್ಥಿಕ ಸಾಮರ್ಥ್ಯವಾಗಲೀ ಸತತ ಲಾಭವನ್ನು ತಂದುಕೊಡಲಾಗದು ಎಂಬುದು ಒಟ್ಟು ಉತ್ಪಾದನೆ ಕುರಿತ ಕಾಬ್-ಡುಗ್ಲಾಸ್ ಮಾದರಿ ಅಧ್ಯಯನದಲ್ಲಿ ಸ್ಪಷ್ಟವಾಗಿದೆ. ಭಾರತದ ಒಟ್ಟು ಉತ್ಪಾದನೆಯ ಬೆಳವಣಿಗೆ ಉದಾರೀಕರಣದ ನಂತರ ಗಮನಾರ್ಹ ಏರಿಕೆ ಕಂಡಿಲ್ಲ ಎಂಬುದು ದೇಬ್ ಕುಸುಮ್, ಗೊಲ್ಡಾರ್ ಮತ್ತು ಕುಮಾರ್ ಅವರ 2010, 2001, ಸೇನ್ ಅವರ 2007ರ ಅಧ್ಯಯನಗಳಿಂದ ಸ್ಪಷ್ಟವಾಗಿದೆ. ಉದಾರೀಕರಣ ಪೂರ್ವಕ್ಕಿಂತಲೂ ಉದಾರೀಕರಣ ನಂತರದ ಉತ್ಪಾದನಾ ಬೆಳವಣಿಗೆ ಕುಸಿತವಾಗಿರುವುದನ್ನು ಗೊಲ್ಡಾರ್ ಮತ್ತು ಕುಮಾರ್ ಅಧ್ಯಯನ ದಾಖಲಿಸಿದೆ. ಇದಕ್ಕೆ

**ಚಿತ್ರ-3 : ಭಾರತ ಮತ್ತು ಚೀನಗಳ ಸ್ವಾಧೀನ ಪ್ರಕ್ರಿಯೆ**




ಆಕರ : ಡಿಬ್ಯೂಲೆ ಮತ್ತು ಡ್ಯುನ್ಸು (2012)

ಸಾಮರ್ಥ್ಯ ಬಳಕೆಯಲ್ಲಿನ ವೈಫಲ್ಯ ಕಾರಣ ಎನ್ನಲಾಗಿದೆ. 1980ರಿಂದ 2000ವರೆಗಿನ ಭಾರತದ ಉತ್ಪಾದನಾ ಉದ್ಯಮದ ತಾಂತ್ರಿಕ ಬದಲಾವಣೆ ಕುರಿತು ಮುಖರ್ಜಿ ಮತ್ತು ಮಜುಂದಾರ್ ಮಾಡಿದ ಅಧ್ಯಯನವೂ ಇದೇ ತೀರ್ಮಾನಕ್ಕೆ ಬಂದಿದೆ.

ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ತಾಂತ್ರಿಕ ಸಾಮರ್ಥ್ಯದ ಕೊರತೆ ಇರುವುದನ್ನು ವ್ಯವಸ್ಥಾಪನಾ ಸಾಮರ್ಥ್ಯದ ಕೊರತೆ ಎಂದೇನೂ ಭಾವಿಸಬೇಕಿಲ್ಲ. ಕಠಿಣವಾದ ಕಾರ್ಮಿಕ ಕಾಯ್ದೆಗಳು ಮತ್ತು ನೌಕರಶಾಹಿ ಜಿಗುಟುತನದ ಕಾರಣ ಕಂಪೆನಿಗಳ ವ್ಯವಸ್ಥಾಪಕರು ಹೆಚ್ಚಿನ ಲಾಭಗಳಿಕೆಗೆ ಬಂಡವಾಳ ಆಧಾರಿತ ತಾಂತ್ರಿಕತೆಯನ್ನು ಅಳವಡಿಸಿಕೊಂಡಿರುವದು ಸ್ಪಷ್ಟವಾಗಿದೆ.

ಹೆಚ್ಚು ಲಾಭ ಗಳಿಸುತ್ತಿದ್ದ ಕಂಪೆನಿಗಳು ವಿದೇಶಗಳಲ್ಲಿ ಕಾರ್ಯಾಚರಣೆಗೆ ಮುಂದಾಗಿರುವುದನ್ನು ಹಿಂದೆ ಉಲ್ಲೇಖಿಸಿದ ಅಂಕಿ ಅಂಶಗಳು ತಿಳಿಸುತ್ತವೆ. ಲಾಭ ಗಳಿಸುತ್ತಿದ್ದ ಎಲ್ಲ ಕಂಪೆನಿಗಳೂ ವಿದೇಶಗಳಿಗೆ ಹಾರಿವೆ ಎಂದು ಹೇಳಲಾಗದು. ಕೆಲವು ಕಂಪೆನಿಗಳು ಅಂತಾರಾಷ್ಟ್ರೀಯ ಕ್ಯಾಪಿಟಲ್ ಮಾರುಕಟ್ಟೆಗಳಿಂದ ಕೂಡ ಬಂಡವಾಳ ಸಂಗ್ರಹಿಸಿವೆ. ಭಾರತದ ವಿದೇಶಿ ಕಂಪೆನಿಗಳಲ್ಲಿ ಬಂಡವಾಳ ತೊಡಗಿಸುವ ವಿದೇಶಿ ಹೂಡಿಕೆದಾರರು ಅದರಲ್ಲಿ ಪಾಲುದಾರಿಕೆ ಬಯಸುವುದಿಲ್ಲ; ಬದಲಾಗಿ ನಗದನ್ನು ತೊಡಗಿಸಲು ಇಚ್ಛಿಸುತ್ತಾರೆ ಎಂಬ ವರದಿಗಳಿವೆ. ವಿದೇಶಗಳಲ್ಲಿ ನೆಲೆಯೂರಿದ ಭಾರತೀಯ ಕಂಪೆನಿಗಳು ನಿರ್ವಹಣಾ ದಕ್ಷತೆ, ಅಪಾಯಗಳ ನಿರೀಕ್ಷೆ,

**ಕೋಷ್ಟಕ-3 : 2000-09ರ ಅವಧಿಯಲ್ಲಿ ಭಾರತದ ಕಂಪೆನಿಗಳು ಮಾಡಿದ ಸ್ವಾಧೀನ ಪ್ರಕ್ರಿಯೆ**

| ದೇಶಗಳು | 2000 | 2001 | 2002 | 2003 | 2004 | 2005 | 2006 | 2007 | 2008 | 2009 | ಒಟ್ಟು |
|---|---|---|---|---|---|---|---|---|---|---|---|
| ಅಮೆರಿಕ | 22 | 12 | 9 | 17 | 20 | 35 | 43 | 62 | 76 | 27 | 323 |
| ಬ್ರಿಟನ್ | 5 | 2 | 8 | 11 | 7 | 16 | 26 | 20 | 36 | 12 | 143 |
| ಅಮೆರಿಕ ಮತ್ತು ಬ್ರಿಟನ್ | 27 | 14 | 17 | 28 | 27 | 51 | 69 | 82 | 112 | 39 | 466 |
| ಕೆನಡ | 0 | 0 | 0 | 0 | 0 | 2 | 5 | 9 | 7 | 9 | 32 |
| ಇತರೆ | 34 | 29 | 34 | 52 | 47 | 91 | 111 | 112 | 198 | 141 | 849 |
| **ಒಟ್ಟು** | **61** | **43** | **51** | **80** | **74** | **144** | **185** | **203** | **317** | **189** | **1,347** |

ಆಕರ : ಥಾಮಸ್ ಒನ್ ಬ್ಯಾಂಕರ್ (2010)

ಭವಿಷ್ಯದ ಮುನ್ನೋಟ ಮತ್ತು ಹೊಸ ಮಾರುಕಟ್ಟೆಯ ಅನ್ವೇಷಣೆಯಂಥ ವಿಶಿಷ್ಟ ಲಕ್ಷಣಗಳಲ್ಲಿ ಅನನ್ಯವಾಗಿವೆ ಎನ್ನಲಾಗುತ್ತಿದೆ. ಇಂಥ ಅನನ್ಯತೆ ಅವರಿಗೆ ಎಲ್ಲಿಂದ ಮತ್ತು ಹೇಗೆ ಬಂದಿದೆ ಎಂಬುದು ಕುತೂಹಲಕಾರಿ ಸಂಗತಿ. ಕಂಪೆನಿಗಳ ವಿದೇಶಯಾತ್ರೆಗೆ ಸಾಮಾನ್ಯ ಕಾರಣಗಳನ್ನು ಹೇಳುವುದು ಅಸಾಧ್ಯ. ತಮ್ಮಲ್ಲಿರುವ ತಾಂತ್ರಿಕ ಕೌಶಲವನ್ನು ಉನ್ನತೀಕರಿಸುವುದು ಒಂದು ಕಾರಣ ಎಂದು ಗುರುತಿಸಲಾಗಿದೆ. ಈಗಾಗಲೇ ಅಸ್ತಿತ್ವದಲ್ಲಿರುವ ವಿದೇಶಿ ಕಂಪೆನಿಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವದಕ್ಕೆ ನಿರ್ವಹಣಾ ಸಾಮರ್ಥ್ಯ ಬೇಕಾಗುತ್ತದೆ. ಆದರೆ ಎಲ್ಲ ಸಂದರ್ಭಗಳಲ್ಲಿ ಇದೊಂದೇ ಕಾರಣ ಅಲ್ಲ. ಅವುಗಳ ಸ್ವರೂಪ, ಉತ್ಪಾದನೆ, ಮಾರುಕಟ್ಟೆ ವ್ಯಾಪ್ತಿ, ಪರದೇಶದಲ್ಲಿ ಎದುರಾಗುವ ಸವಾಲುಗಳು ಮತ್ತು ಅವುಗಳನ್ನು ನಿರ್ವಹಿಸಬಲ್ಲ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ಸ್ವಾಧೀನ ಪಡೆದ ಕಂಪೆನಿಗಳ ಪುನಶ್ಚೇತನ ಮಾಡಬೇಕಾಗಬಹುದು. ಅವುಗಳಿಗೆ ಉತ್ಪಾದನಾ ಸಾಮರ್ಥ್ಯವಿದ್ದರೂ ಮಾರುಕಟ್ಟೆ ನಿರ್ವಹಣೆಯ ಸಮಸ್ಯೆ ಇರಬಹುದು. ಈ ಸವಾಲನ್ನು ಭಾರತೀಯ ವ್ಯವಸ್ಥಾಪಕರು ಎದುರಿಸಬಲ್ಲವರು ಎಂಬುದು ಕೇನ್ಸ್ ಎಂಬ ವ್ಯವಹಾರತಜ್ಞರ ಅಭಿಪ್ರಾಯ. ಉದ್ಯಮಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಬೇಕಾದ ಪ್ರತಿಭೆ ಅನೇಕ ಭಾರತೀಯ ಕಂಪೆನಿಗಳಲ್ಲಿ, ವಿಶೇಷವಾಗಿ ಟಾಟಾ ಸಮೂಹಕ್ಕೆ ಇರುವುದನ್ನು ನಥೇನಿಯಲ್ ಲೆಫ್ (1979) ಗುರುತಿಸಿದ್ದಾರೆ. ಅಂತಾರಾಷ್ಟ್ರೀಯ ಬಂಡವಾಳ ಮಾರುಕಟ್ಟೆಯಲ್ಲಿ ತಮಗೆ ಅಗತ್ಯವಾದ ಹಣವನ್ನು ಎತ್ತುವ ಇವರ ಸಾಮರ್ಥ್ಯವೂ ಗಮನ ಸೆಳೆದಿದೆ. ಉದ್ಯಮಶೀಲತೆಯನ್ನು ಅತ್ಯವಶ್ಯಕ ಮತ್ತು ಅವಕಾಶ ಆಧರಿತ ಎಂಬ ಎರಡು ಗುಂಪುಗಳಲ್ಲಿ ಕೋಸ್ಟರ್ ಮತ್ತು ರಾಜ್ ಅಧ್ಯಯನ (2008) ಗುರುತಿಸಿದೆ. ಉದ್ಯೋಗ ಅವಕಾಶಗಳು ಕುಂಠಿತಗೊಂಡು, ನಿರುದ್ಯೋಗಿಗಳು ತಮ್ಮದೇ ಉತ್ಪಾದನಾ ಸೌಲಭ್ಯಗಳನ್ನು ಮಾಡಿಕೊಳ್ಳುವ ಪರಿಸ್ಥಿತಿಗೆ ಬಂದಾಗ ಅದು ಅವಶ್ಯಕತೆ ಆಧರಿಸಿದ ಉದ್ಯಮವಾಗುತ್ತದೆ. ಹೊಸ ಮಾರುಕಟ್ಟೆ ಮತ್ತು ಕ್ಷೇತ್ರಗಳನ್ನು ಶೋಧಿಸಿದಾಗ ಅದು ಅವಕಾಶವನ್ನು ಅವಲಂಬಿಸಿದ ಉದ್ಯಮವಾಗುತ್ತದೆ. ಉದಾರೀಕರಣದ ನಂತರ ವಿದೇಶಗಳಲ್ಲಿ ಉದ್ಯಮಗಳನ್ನು ವಿಸ್ತರಿಸಿದ ಭಾರತೀಯ ಕಂಪೆನಿಗಳು ಹೀಗೆ ಅವಕಾಶವನ್ನು ಆಧರಿಸಿವೆ. ಭಾರತೀಯ ಉದ್ಯಮ ಸಾಹಸಕ್ಕೆ ಅನೇಕ ಅನನ್ಯ ಲಕ್ಷಣಗಳಿವೆ. ಇತಿಹಾಸ ಪರಂಪರೆ ಇದೆ. ಅದು ಕೆಲವು ವಿಶಿಷ್ಟ ಜಾತಿ– ಸಮುದಾಯಗಳ ವ್ಯವಹಾರತಜ್ಞತೆಯನ್ನು ಅವಲಂಬಿಸಿದೆ. ಬನಿಯಾಗಳು ಮತ್ತು ಮಾರವಾಡಿಗಳು ಬ್ರಿಟಿಷರ ಕಾಲದಲ್ಲಿಯೇ ವಿದೇಶಗಳಲ್ಲಿ ವ್ಯವಹಾರಗಳನ್ನು ಇಟ್ಟುಕೊಂಡಿದ್ದವರು. ಹಿಂದೂ ಇಲ್ಲವೇ ಮುಸ್ಲಿಂ ಸಮುದಾಯದಿಂದ ಪ್ರತ್ಯೇಕವಾಗಿಯೇ ಗುರುತಿಸಿಕೊಂಡ ಫಾರ್ಸಿಗಳು ವ್ಯವಹಾರದಲ್ಲಿ ವಿಭಿನ್ನ ಗುಂಪು. ಈ ಗುಂಪು ಬ್ರಿಟಿಷ್ ಮತ್ತು ಭಾರತೀಯ ವ್ಯವಹಾರ ಜಗತ್ತಿನ ಸಂಪರ್ಕ ಕೊಂಡಿಯಂತೆ ಕಾರ್ಯನಿರ್ವಹಿಸುತ್ತಿತ್ತು. 'ರಾಜಕೀಯ ಮಹತ್ವಾಕಾಂಕ್ಷೆ ಇಲ್ಲದ, ಯಾವೊಂದು ಧಾರ್ಮಿಕ ಗುಂಪಿನ ಜೊತೆಯೂ ಸೇರಿಕೊಳ್ಳದ, ಆದರೆ, ಬಡೋಚ್, ಸೂರತ್, ದಮನ್ ಬಂದರುಗಳಲ್ಲಿ ತಮ್ಮದೇ ಪ್ರಭಾವ ಹೊಂದಿದ್ದ ಫಾರ್ಸಿಗಳು ವಿದೇಶಿ ಕಂಪೆನಿಗಳಿಗೆ ಸಹಜವಾಗಿಯೇ ಸ್ಥಳೀಯ ಏಜೆಂಟರುಗಳಾಗಿ ಪರಿಣಮಿಸಿದರು' ಎಂದು ದಾಮೋದರನ್ ಅಧ್ಯಯನ ತಿಳಿಸಿದೆ. ಫಾರ್ಸಿಗಳು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿಯಲ್ಲಿ ಹೊಂದಿದ್ದ ವ್ಯವಹಾರ ಸಂಬಂಧ ಹತ್ತೊಂಬತ್ತನೇ ಶತಮಾನದಲ್ಲಿ ಚೀನದೊಂದಿಗೆ ಅತ್ಯಂತ ಲಾಭಕರವಾಗಿದ್ದ ಅಫೀಮಿನ ಮಾರಾಟದಲ್ಲಿ ಭಾಗಿಯಾಗುವಂತೆ ಮಾಡಿತ್ತು. ಉತ್ತರ ಇಂಗ್ಲೆಂಡ್‌ನ ಬ್ಲ್ಯಾಕ್ ಬರ್ನ್ ರೋವರ್ಸ್ ಫುಟ್ ಬಾಲ್ ಕ್ಲಬ್ ಅನ್ನು ಭಾರತದಲ್ಲಿ ಕೋಳಿ ವ್ಯವಹಾರದಲ್ಲಿರುವ ಉದ್ಯಮ ವೆಂಕೀಸ್ ಕೊಂಡುಕೊಂಡಿದ್ದು ವ್ಯವಸ್ಥಾಪನಾ ಪರಿಣತಿಗೆ ನಿದರ್ಶನ. ವೆಂಕೀಸ್ ಗೆ ಫುಟ್‌ಬಾಲ್ ಕ್ರೀಡೆಯಲ್ಲಿ ಹೆಚ್ಚಿನ ಅರಿವು ಇತ್ತು ಎಂದೇನಲ್ಲ. ಹತ್ತಿ, ಚಹಾ, ರೇಷ್ಮೆ ಮತ್ತು ಇತರ ಕಚ್ಚಾ ವಸ್ತುಗಳಲ್ಲಿ ಪಾರ್ಸಿಗಳು ಮತ್ತು ಬನಿಯಾಗಳು ಹೊಂದಿದ್ದ ವ್ಯವಹಾರ ತಜ್ಞತೆ ಅವರನ್ನು ಜಾಗತಿಕ ಮಾರುಕಟ್ಟೆಯಲ್ಲಿ ಉಳಿಸಿದೆ. ಭಾರತದ ಜೊತೆ ಮಾತ್ರವಲ್ಲದೆ ಯೂರೋಪಿನ ಸಂಸ್ಕೃತಿಯೊಂದಿಗೆ ಸರಾಗವಾಗಿ ವ್ಯವಹರಿಸಬಲ್ಲ ಅವರ ವ್ಯವಹಾರ ಪರಿಣತಿ ವಸಾಹತುಶಾಹಿ ಆಡಳಿತಕಾಲದಲ್ಲಿಯೇ ಅನುಭವಕ್ಕೆ ಬಂದಿತ್ತು. ಇದನ್ನೇ 2011ರಲ್ಲಿ ತೀರ್ಥಂಕರ್ ರಾಯ್ 'ಈ ಉದ್ಯಮಿಗಳು, ಅನೌಪಚಾರಿಕವಾಗಿದ್ದ ಸಮುದಾಯ ಪದ್ಧತಿಗಳು ಮತ್ತು ಔಪಚಾರಿಕವಾಗಿದ್ದ




ಕಾರ್ಪೊರೇಟ್ ಕಾಯ್ದೆಗಳ ಪಾಲನೆಯಲ್ಲಿ ಯೂರೋಪಿನ ಉದ್ಯಮಿಗಳಿಗಿಂತ ಯಶಸ್ವಿಯಾಗಿದ್ದರು' ಎಂದು ಬಣ್ಣಿಸಿದ್ದಾರೆ. ಕೆಲವು ಭಾರತೀಯ ಉದ್ಯಮ ಕುಟುಂಬಗಳು ಈ ವ್ಯವಹಾರವನ್ನು ಪೀಳಿಗೆಗಳಿಂದ ನಡೆಸಿಕೊಂಡು ಬರುತ್ತಿರುವುದು ಕೂಡ ಈ ವಿದ್ಯಮಾನಕ್ಕೆ ಪೂರಕವಾದ ಅಂಶ. 2000–08ರ ಅವಧಿಯಲ್ಲಿ ಸ್ವಾಧೀನಪಡಿಸಿಕೊಂಡ ವಿದೇಶಿ ಕಂಪೆನಿಗಳ ಒಟ್ಟು ಸಂಖ್ಯೆಯಾದ 1347ರಲ್ಲಿ ಮುಕ್ಕಾಲು ಭಾಗದಷ್ಟು ಹೀಗೆ ವಂಶ ಪರಂಪರೆಯಿಂದ ವ್ಯವಹಾರ ನಡೆಸುತ್ತಿದ್ದ ಔದ್ಯಮಿಕ ಕುಟುಂಬಗಳಿಂದ ಸಂಭವಿಸಿದೆ. ಕಂಪೆನಿಗಳು ಒಂದು ಗುಂಪಾಗಿ ಕಾರ್ಯ ಮಾಡುತ್ತಿರುವುದು ಭಾರತಕ್ಕೆ ವಿಶೇಷವಾದದ್ದಲ್ಲ. ಇತರ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿಯೂ ಇವೆ. ಆದರೆ ವಂಶಪರಂಪರೆಯಿಂದ ವ್ಯವಹಾರ ನಿರ್ವಹಿಸುತ್ತಿರುವುದು ಭಾರತೀಯ ಉದ್ಯಮಗಳ ವಿಶೇಷ ಲಕ್ಷಣ. ವಿಭಿನ್ನ ಸೇವೆ ಮತ್ತು ಉತ್ಪನ್ನಗಳನ್ನು ನಿರ್ವಹಿಸುತ್ತಿದ್ದರೂ ಬಿಕ್ಕಟ್ಟು, ಬಂಡವಾಳ ಸಂಗ್ರಹ, ಮಾಹಿತಿ, ಕೌಶಲ್ಯ ತರಬೇತಿ ಮತ್ತು ವ್ಯವಸ್ಥಾಪನಾ ನಿರ್ವಹಣೆಯ ಅಂಶಗಳನ್ನು ಒಂದಾಗಿ ನೋಡಿಕೊಳ್ಳುತ್ತವೆ. ಈ ಗುಂಪು ವಿಧಾನ ಅಭಿವೃದ್ಧಿ ಹೊಂದಿದ ದೇಶಗಳಲ್ಲಿನ ಸುಭದ್ರ ಬಂಡವಾಳ ಮಾರುಕಟ್ಟೆ ಮತ್ತು ಅಪಾಯಗಳನ್ನು ನಿರೀಕ್ಷಿಸಿ ಯೋಜಿತ ರೀತಿಯಲ್ಲಿ ಪರಿಹಾರಕ್ರಮಗಳನ್ನು ರೂಪಿಸಿಕೊಳ್ಳುವುದಕ್ಕೆ ನೆರವಾಗುತ್ತದೆ.

ಭಾರತೀಯ ಔದ್ಯಮಿಕ ಕ್ಷೇತ್ರದ ವ್ಯವಹಾರ ಪರಿಣತಿಗೆ ಇಲ್ಲಿನ ಶಿಕ್ಷಣ ಪದ್ಧತಿಯ ಪಾತ್ರವೂ ಇದೆ. ಇದನ್ನೂ ತೀರ್ಥಂಕರ್ ರಾಯ್ ಗುರುತಿಸಿದ್ದಾರೆ. ವಸಾಹತುಶಾಹಿ ಆಡಳಿತಪೂರ್ವ ದಿನಗಳಲ್ಲಿ ಕೆಲವು ಜಾತಿಗಳಿಗಷ್ಟೇ ಸೀಮಿತವಾಗಿದ್ದ ಶೈಕ್ಷಣಿಕ ಅನುಕೂಲದ ಪರಿಣಾಮ ಅವು

ಬೌದ್ಧಿಕ ಪರಿಶ್ರಮದ ಹುದ್ದೆಗಳು, ವೈದ್ಯಕೀಯ, ಬೋಧನಾವೃತ್ತಿ ಮತ್ತು ಅರ್ಚಕರ ಕೆಲಸಗಳಲ್ಲಿ ಪಾರಮ್ಯವನ್ನು ಹೊಂದುವುದಕ್ಕೆ ಕಾರಣವಾಗಿತ್ತು. ಈ ಪಾರಮ್ಯ ಬ್ರಿಟಿಷರ ಆಳ್ವಿಕೆಯಲ್ಲಿಯೂ ಮುಂದುವರಿದಿತ್ತು. ಮೊದಲಿನಿಂದ ಶಿಕ್ಷಣಕ್ಕೆ ತೆರೆದುಕೊಂಡಿದ್ದ ಈ ನಿರ್ದಿಷ್ಟ ಸಮುದಾಯಗಳು ಬದಲಾದ ಆಡಳಿತ ವ್ಯವಸ್ಥೆಯಲ್ಲಿಯೂ ಅಧಿಕಾರ ಸ್ಥಾನಗಳನ್ನು ಗಳಿಸಿದವು. ಮುಂಬೈ, ಮದ್ರಾಸ್ ಮತ್ತು ಕೋಲ್ಕತ್ತಾ ಬಂದರು ನಗರಗಳಲ್ಲಿ ಇದು ವ್ಯಾಪಕವಾಗಿತ್ತು. ಶಿಕ್ಷಣ ವ್ಯವಸ್ಥೆ ಜಾತಿ ಆಧಾರಿತವಾಗಿದ್ದು ವ್ಯಾಪಾರೋದ್ಯಮಿಗಳ ಹಿಡಿತದಲ್ಲಿತ್ತು. ಈ ಪ್ರತಿಷ್ಠಿತ ಗುಂಪಿನ ಅಗತ್ಯಗಳಿಗೆ ತಕ್ಕ ಶಿಕ್ಷಣ ಕ್ರಮವೂ ಬದಲಾಯಿತು. ಸಾಮಾನ್ಯ ಜನವರ್ಗದ ಹಿತ ನಿರ್ಲಕ್ಷ್ಯಕ್ಕೀಡಾಗಿತ್ತು. ಕೆಲವೇ ವರ್ಗಗಳಿಗೆ ಸೀಮಿತವಾಗಿದ್ದ ಶಿಕ್ಷಣ ಅನುಕೂಲದಿಂದ ನಾಗರಿಕ ಸೇವೆ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ಸ್ಥಾನಗಳಿಕೆಗೆ ಆಸ್ಪದವಾಯಿತು. ಈ ವರ್ಗವೇ ಸಾಫ್ಟ್ ವೇರ್ ತಾಂತ್ರಿಕ ಪರಿಣತಿಯನ್ನೂ ಗಳಿಸಿ ವಿದೇಶಗಳಲ್ಲಿ ಭಾರತದ ಪ್ರಮುಖ ಬಂಡವಾಳ ಹೂಡಿಕೆ ಕ್ಷೇತ್ರವಾಗಿದೆ. ಮತ್ತೊಂದು ಪ್ರಮುಖ ಅಂಶ ಭಾರತೀಯ ಉದ್ಯಮಗಳಲ್ಲಿನ ವ್ಯವಸ್ಥಾಪನಾ ಪರಿಣತಿ. ಒಂದು ಸಮೀಕ್ಷೆಯಂತೆ ಬ್ರಿಟನ್‌ನಲ್ಲಿ 1.6 ದಶಲಕ್ಷ ಭಾರತೀಯರಿದ್ದು ಈ ಸಂಖ್ಯೆ ಅಲ್ಲಿನ ಒಟ್ಟು ಜನಸಂಖ್ಯೆಯ ಶೇ 1.8ರಷ್ಟಿದೆ. ಅಮೆರಿಕದಲ್ಲಿರುವ 2.8 ದಶಲಕ್ಷ ಭಾರತೀಯರು ಆ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ 0.9ರಷ್ಟಿದ್ದಾರೆ. ಈ ದೇಶಗಳಲ್ಲಿರುವ ಭಾರತೀಯ ವೃತ್ತಿಪರರು ದೇವೇಶ್ ಕಪೂರ್ ಬಣ್ಣಿಸಿದಂತೆ 'ಪ್ರತಿಷ್ಠಿತ ಸಂಧಾನಕಾರರು'. ವಿದೇಶಿ ಕಂಪೆನಿಗಳ ಜೊತೆ ಭಾರತೀಯ ಕಂಪೆನಿಗಳ ಪರವಾಗಿ ಮಧ್ಯಸ್ಥಿಕೆ ವಹಿಸುವಂಥವರು. ಹೋಗಿ ಬರುವ ವಲಸೆಗಾರರು ಎಂದು ಇವರನ್ನು ಜಗದೀಶ್ ಭಗವತಿ (1974ರಲ್ಲಿ) ಬಣ್ಣಿಸಿದ್ದಾರೆ. ಭಾರತ ಮತ್ತು ತಾವು ನೆಲೆಸಿದ ದೇಶಗಳ ಮಧ್ಯೆ ಸಂಚರಿಸುತ್ತಾ ಎರಡೂ ದೇಶಗಳಲ್ಲಿನ ತಮ್ಮ ವ್ಯವಹಾರ ಆಸಕ್ತಿಯನ್ನು ಕಾಯ್ದುಕೊಳ್ಳುತ್ತಾರೆ. ಈ ವಿದ್ಯಮಾನ ಭಾರತೀಯ ಉದ್ಯಮಗಳು ಹಣಕಾಸು, ಮಾರುಕಟ್ಟೆ ಜ್ಞಾನ ಮತ್ತು ಸಾಫ್ಟ್‌ವೇರ್ ಉದ್ಯಮಗಳಲ್ಲಿ ಪ್ರಬಲವಾಗಿದೆ.

ವಿದೇಶಗಳಲ್ಲಿ ಭಾರತದ ಹೂಡಿಕೆಯ ಬೆಳವಣಿಗೆಗೆ ಇನ್ನೂ ಕೆಲವು ಕಾರಣಗಳಿವೆ. ಭಾರತದಲ್ಲಿ ವ್ಯವಹರಿಸುವುದಕ್ಕಿಂತಲೂ ವಿದೇಶಗಳಲ್ಲಿ ವ್ಯವಹರಿಸುವುದು ಸುಗಮ ಎನ್ನುವ ಪರಿಸ್ಥಿತಿಇದೆ. ಭಾರತದಲ್ಲಿ ಸರ್ಕಾರದ ನಿಯಂತ್ರಣ ಮತ್ತು ಅಧಿಕಾರಶಾಹಿಯ ವಿಳಂಬ ನಡೆ ಯಾವುದೇ ಉದ್ಯಮಿಯನ್ನು ಹಿಂಜರಿಯುವಂತೆ ಮಾಡಬಲ್ಲದು. ವಿದೇಶಿ ಮಾರುಕಟ್ಟೆಗಳಲ್ಲಿನ ಆಕರ್ಷಣೆಯೂ ಇನ್ನೊಂದು ಕಾರಣ. 1914ರಲ್ಲಿ ಬ್ರಿಟನ್ ಸುಮಾರು 20 ಶತಕೋಟಿ ಮೌಲ್ಯದ ಕಚ್ಚಾವಸ್ತುಗಳನ್ನು ತನ್ನ ವಸಾಹತು ದೇಶಗಳಿಗೆ ರಫ್ತು ಮಾಡಿ ಅವುಗಳನ್ನು ಸಂಸ್ಕರಿಸಿ ಲಾಭ ಗಳಿಸಿದ್ದನ್ನು ವ್ಯವಹಾರ ತಜ್ಞರು ಗುರುತಿಸಿದ್ದಾರೆ. ಭಾರತದ ಉದ್ಯಮಿಗಳು ಹೊಂದಿರುವ ವ್ಯವಹಾರ ಪರಿಣತಿ ವಿದೇಶಗಳಲ್ಲಿ ನೆಲೆಗಳನ್ನು ಕಂಡುಕೊಳ್ಳಲು ನೆರವಾಗುತ್ತಿರುವುದು ಇತಿಹಾಸದಲ್ಲಿ ದಾಖಲಾಗಿದೆ. ವಸಾಹತುಶಾಹಿ ಆಡಳಿತದ ಕಾಲದಿಂದಲೂ ಇಲ್ಲಿನ ಉದ್ಯಮಿಗಳು ಹೊಂದಿದ್ದ ವ್ಯವಹಾರ ನಿಪುಣತೆ ಸ್ವಾತಂತ್ರ್ಯ ನಂತರದ ದಿನಗಳಲ್ಲಿಯೂ ಮುಂದುವರಿದುಕೊಂಡು ಬಂದಿದೆ. ಅರವತ್ತರ ದಶಕದಿಂದ 1991ರ ವರೆಗೆ ಇಲ್ಲಿ ನೆಲೆಯೂರಿದ್ದ ಕಟು ನಿರ್ಬಂಧಗಳ ಲೈಸನ್ಸ್ ರಾಜ್ ದಿನಗಳಲ್ಲಿ ಉದ್ಯಮಿಗಳ ಕೌಶಲ್ಯ ಮಂಕಾಗಿತ್ತು. ಆದರೆ, ಆರ್ಥಿಕ ಉದಾರೀಕರಣ ಪ್ರಕ್ರಿಯೆ ಆರಂಭವಾದ ನಂತರ ಕಾಯ್ದೆ ಕಟ್ಟಳೆಗಳ ನಿರ್ಬಂಧ ದಿನಗಳನ್ನು ದಾಟಿ ಸವಾಲನ್ನು ಎದುರಿಸುವ ಆತ್ಮಸ್ಥೈರ್ಯಕ್ಕೆ ಅವರನ್ನು ಸಜ್ಜುಗೊಳಿಸಿದೆ. ಜಾಗತಿಕ ಮಾರುಕಟ್ಟೆಯ ಸವಾಲನ್ನು



ಸ್ಪರ್ಧಾತ್ಮಕವಾಗಿ ಎದುರಿಸುವ ವಿಶ್ವಾಸವನ್ನು ಮೂಡಿಸಿದೆ.

**ಸಮಾರೋಪ**

ವಿದೇಶಗಳಲ್ಲಿ ಭಾರತದ ನೇರ ಬಂಡವಾಳ ಹೂಡಿಕೆಗೆ ಐತಿಹಾಸಿಕ ಕಾರಣಗಳಿವೆ. ಭಾರತದ ಆರ್ಥಿಕ ನೀತಿಯ ವಿಕಾಸದ ಹಂತಗಳಿವೆ. ಈ ಪ್ರಕ್ರಿಯೆ ಇತರ ದೇಶಗಳ ಆರ್ಥಿಕತೆಗೆ ಹೋಲಿಸಿದರೆ ಅನನ್ಯವಾದದ್ದು. ಅದನ್ನೇ ಇದುವರೆಗೆ ವಿಶ್ಲೇಷಿಸಲಾಗಿದೆ. ವಿದೇಶಗಳಲ್ಲಿ ಭಾರತದ ನೇರ ಬಂಡವಾಳ ಹೂಡಿಕೆಗೆ ಇಲ್ಲಿನ ಉದ್ಯಮಿಗಳ ಸಾಹಸಪ್ರವೃತ್ತಿಯೂ ಮಹತ್ವದ ಕಾರಣ. ಇತರ ದೇಶಗಳಿಗೆ ಹೋಲಿಸಿದರೆ ಭಾರತದ ಉದ್ಯಮಿಗಳಿಗೆ ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆ ಇರುವುದನ್ನೂ ದಾಖಲಿಸಲಾಯಿತು. ತೊಂಭತ್ತರ ದಶಕದಲ್ಲಿ ಜಾರಿಗೆ ಬಂದ ಆರ್ಥಿಕ ಉದಾರೀಕರಣ, ಹಿಂದಿನ ಲೈಸನ್ಸ್ ರಾಜ್ ಕಾಲದಲ್ಲಿದ್ದ ಕಟು ನಿಬಂಧನೆಗಳನ್ನು ನಿವಾರಿಸಿ ಜಾಗತಿಕ ಮಾರುಕಟ್ಟೆಯಲ್ಲಿ ಸ್ಪರ್ಧಿಸುವ ಸ್ಥೈರ್ಯವನ್ನು ನೀಡಿದ್ದನ್ನು ಗಮನಿಸಲಾಯಿತು. ಸ್ವಂತ ಮಾಲೀಕತ್ವ, ಎಲ್ಲಿ, ಯಾವುದರಲ್ಲಿ ಹೂಡಿಕೆ ಮಾಡಬೇಕೆಂಬ ಸ್ವಾತಂತ್ರ್ಯ, ಮಾರುಕಟ್ಟೆಯಲ್ಲಿ ಲಭ್ಯವಿರುವ ಅವಕಾಶಗಳು ಭಾರತದ ವಿದೇಶಿ ನೇರ ಹೂಡಿಕೆದಾರರು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಾರ್ಯಾಚರಣೆ ನಡೆಸುವ ವಿಶ್ವಾಸವನ್ನು ಮೂಡಿಸಿರುವುದನ್ನು ನೋಡಲಾಯಿತು. ಈ ಪ್ರಕ್ರಿಯೆಯ ಯಶಸ್ಸನ್ನು ನಿದರ್ಶನಗಳನ್ನು ಆಧರಿಸಿ ಅಧ್ಯಯನ ಮಾಡಬಹುದಾಗಿದೆ.❑


**ಯೋಜನಾ ಜನವರಿ 2015**

**ವಿಶೇಷ ಸಂಚಿಕೆಯ ವಿಷಯ**

**ನೈರ್ಮಲ್ಯೀಕರಣ, ಅಭಿವೃದ್ಧಿ ಮತ್ತು ಸಾಮಾಜಿಕ ಬದಲಾವಣೆ**

# ಅಮೆರಿಕ-ಭಾರತ ವಹಿವಾಟು ಉಪಕ್ರಮಗಳು




> ಭಾರತವು ಸರ್ವಾಂಗೀಣ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ತೆರೆದುಕೊಂಡಿದೆ. ಈ ಬದಲಾವಣೆಯ ಭಾಗವಾಗಲು ಮತ್ತು ನಮ್ಮ ಸಂಪತ್ತಿನಲ್ಲಿ ಪಾಲ್ಗೊಳ್ಳುವ ಪಾತ್ರ ವಹಿಸಲು ನಾನು ನಿಮ್ಮನ್ನು ಆಹ್ವಾನಿಸುತ್ತೇನೆ. ಸಹಜ ಮಿತ್ರರು ಎಂದು ಗುರುತಿಸಿಕೊಂಡಿರುವ ಭಾರತ ಮತ್ತು ಅಮೆರಿಕಗಳು ಹೊಸ ಶತಮಾನದಲ್ಲಿ ಈ ಬಂಧವನ್ನು ಇನ್ನಷ್ಟು ಬಿಗಿಗೊಳಿಸಿ ಅರ್ಥಪೂರ್ಣಗೊಳಿಸಬೇಕಿದೆ.

**ಕನ್ನಡಕ್ಕೆ : ಕೇಶವ ಮಳಗಿ**

ಅಮೆರಿಕದಲ್ಲಿ ದೀರ್ಘಕಾಲದಿಂದಲೂ ಆರ್ಥಿಕ ಕ್ಷೇತ್ರದಲ್ಲಿನ ಬಿರುಸಿನ ಏಳಿಗೆಯನ್ನು ನಾವೆಲ್ಲ ಅಚ್ಚರಿ-ಗೌರವಗಳಿಂದ ಗಮನಿಸಿದ್ದೇವೆ. ಮಾತ್ರವಲ್ಲ, ಭಾರತವೂ ಸೇರಿದಂತೆ ವಿಶ್ವದ ಉಳಿದೆಡೆ ಅದರ ಪ್ರಭಾವವನ್ನು ಎಚ್ಚರಿಕೆಯಿಂದ ಗ್ರಹಿಸಿದ್ದೇವೆ.

ಉಭಯ ದೇಶಗಳನ್ನು ಬೆಸೆದಿರುವುದು ಪ್ರಜಾಸತ್ತೆ, ಸ್ವಾತಂತ್ರ್ಯ ಮುಕ್ತತೆ ಮತ್ತು ವೈವಿಧ್ಯತೆಗಳ ಕುರಿತು ಅವುಗಳಿಗಿರುವ ಬದ್ಧತೆಗಳು ಮಾತ್ರವಲ್ಲ, ಬದಲಿಗೆ ಆರ್ಥಿಕ ಅಭಿವೃದ್ಧಿಯಲ್ಲಿ ಎರಡೂ ದೇಶಗಳಿಗಿರುವ ದೃಷ್ಟಿಕೋನವೂ ಆಗಿದೆ. ಖಾಸಗಿ ಉದ್ದಿಮೆದಾರರಿಗೆ ಗರಿಷ್ಠ ಉತ್ತೇಜನವನ್ನು ನೀಡಿ, ಸರ್ಕಾರವು ಎಲ್ಲವನ್ನೂ ಸುಗಮಗೊಳಿಸುವ ಹಾಗೂ ನಿಷ್ಪಕ್ಷಪಾತವಾದ ನಿಯಂತ್ರಕನ ಪಾತ್ರವನ್ನು ನಿರ್ವಹಿಸುವುದೇ ಆ ದೃಷ್ಟಿಕೋನವಾಗಿದೆ. ಐತಿಹಾಸಿಕ ಕಾರಣಗಳಿಂದ ಸ್ವಾತಂತ್ರ್ಯದ ಕೆಲವು ದಶಕಗಳವರೆಗೆ ಖಾಸಗಿ ವಲಯದ ಆರ್ಥಿಕತೆಗೆ ಬಯಸಿದಷ್ಟು ಉತ್ತೇಜನವನ್ನು ನೀಡಲಿಲ್ಲ. ತೊಂಭತ್ತರ ದಶಕದ ಬಳಿಕ ಉದಾರೀಕರಣದ ಮೂಲಕ ಆರ್ಥಿಕ ಕ್ಷೇತ್ರದಲ್ಲಿ ಭಾರೀಬದಲಾವಣೆಗಳನ್ನು ತರಲಾಗುತ್ತಿದೆ. ನನ್ನ ಸರ್ಕಾರವೂ ಸುಧಾರಣೆಯ ಪ್ರಕ್ರಿಯೆಯನ್ನು ಇನ್ನಷ್ಟು ವಿಶಾಲವೂ, ವ್ಯಾಪಕವೂ ಆಗಿ ವಿಸ್ತರಿಸುವುದಕ್ಕೆ ಬದ್ಧವಾಗಿದೆ. ಈ ಮೂಲಕ ದೇಶದ ಆರ್ಥಿಕ ಮತ್ತು ಸಾಮಾಜಿಕ ವಲಯದ ಸಾಮರ್ಥ್ಯವು ನೂರ್ಮಡಿಗೊಳ್ಳುವುದು ಎಂಬ ನಂಬಿಕೆ ನಮಗಿದೆ. ಭಾರತದಲ್ಲಿ ಆಗುತ್ತಿರುವ ಈ ಐತಿಹಾಸಿಕ ಬದಲಾವಣೆಗೆ ಅಮೆರಿಕದ ಉದ್ದಿಮೆದಾರರು ಸಕಾರಾತ್ಮಕಾಗಿ ಸ್ಪಂದಿಸಿದ್ದಾರೆಂಬುದು ನನಗೆ ಸಂತಸವನ್ನು ತಂದಿದೆ.

ಅಮೆರಿಕದೊಂದಿಗೆ ವಾಣಿಜ್ಯ ವಹಿವಾಟು ನಡೆಸುವ ರಾಷ್ಟ್ರಗಳಲ್ಲಿ ಭಾರತವು ಅತ್ಯಂತ ದೊಡ್ಡ ರಾಷ್ಟ್ರವಾಗಿದೆ. ಅಂತೆಯೇ, ಭಾರತದಲ್ಲಿ ಹೂಡಿಕೆ ಮಾಡಿರುವ ಸಂಸ್ಥೆಗಳಲ್ಲಿ ಅಮೆರಿಕದ ಸಂಸ್ಥೆಗಳೇ ಪ್ರಮುಖವಾಗಿವೆ. ಅಮೆರಿಕದ ದೊಡ್ಡ ಸಂಸ್ಥೆಗಳು, ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು ಭಾರತದಲ್ಲಿ ಹೂಡಿಕೆಯನ್ನು ಹೊಂದಿದ್ದು, ಆರ್ಥಿಕ ಪ್ರಗತಿಗೆ ಅವುಗಳ ಕೊಡುಗೆಯನ್ನು ನಾವು ಶ್ಲಾಘಿಸುತ್ತೇವೆ. ಅದೇ ರೀತಿ ಅಮೆರಿಕದ ವಹಿವಾಟನ್ನು ಲಾಭದಾಯಕವಾಗಿ ಮಾಡುವಲ್ಲಿನ ಭಾರತದ ಪಾತ್ರವನ್ನು ಅಮೆರಿಕವು ಮೆಚ್ಚಿಕೊಳ್ಳುತ್ತದೆ ಎಂದು ನಾನು ಭಾವಿಸುತ್ತೇನೆ. ಮುಂದಿನ ಮೂರು ವರ್ಷಗಳಲ್ಲಿ ಉಭಯ ದೇಶಗಳವಹಿವಾಟನ್ನು ತ್ರಿಗುಣಗೊಳಿಸಬಹುದಾಗಿದ್ದು, ಅದಕ್ಕೆ ಅವಕಾಶಗಳು ವಿಪುಲವಾಗಿವೆ. ವಹಿವಾಟಿಗೆ ಅಡೆತಡೆ ಸೃಷ್ಟಿಸುವ ಸಂಗತಿಗಳನ್ನುಬಗೆಹರಿಸಲು ಪ್ರಧಾನ ಮಂತ್ರಿಗಳ ಕಚೇರಿಯಲ್ಲಿ ತಾಂತ್ರಿಕ ನಿರ್ವಹಣಾ ಗುಂಪೊಂದನ್ನು ರಚಿಸಲಾಗುತ್ತಿದೆ. ಈ ಪ್ರಕ್ರಿಯೆ ತಡೆಗಳನ್ನು ನಿವಾರಿಸಲಿದೆ. ಈ ಕಾರಣವಾಗಿಯೇ ಇಲ್ಲಿನ ಹೂಡಿಕೆದಾರರು ದೀರ್ಘಕಾಲಿಕ ಸಂಬಂಧವನ್ನು ಗಮನದಲ್ಲಿಟ್ಟುಕೊಳ್ಳಿ ಎಂದು ಕೇಳಿಕೊಳ್ಳುವೆ. ಭಾರತ ಮತ್ತು ಅಮೆರಿಕದ ಹಿತಾಸಕ್ತಿಗಳು ಒಂದೇ ಆಗಿವೆ. ಭಾರತವು ಕ್ಷಿಪ್ರಗತಿಯಲ್ಲಿ ಆರ್ಥಿಕ ಪ್ರಗತಿ ಸಾಧಿಸುತ್ತಿರುವ ರಾಷ್ಟ್ರಗಳಲ್ಲಿ ಮುಂಚೂಣಿಯಲ್ಲಿದೆ. ತೊಂಭತ್ತರ

**ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿಯಾಗಿ ಸೆಪ್ಟೆಂಬರ್ 13, 2000 ಇಸವಿಯಲ್ಲಿ, ನ್ಯೂಯಾರ್ಕ್‌ನಲ್ಲಿ ಅಮೆರಿಕ – ಭಾರತ ವ್ಯಾಪಾರ ಶೃಂಗಸಭೆಯಲ್ಲಿ ಮಾಡಿದ ಭಾಷಣದ ಸಂಕ್ಷಿಪ್ತ ರೂಪ. ಪ್ರಕಾಶನ ವಿಭಾಗ ಹೊರತಂದ "ಟುವರ್ಡ್ಸ್ ಡೆವಲಪ್ಡ್ ಎಕಾನಮಿ" ಪುಸ್ತಕದಿಂದ ಈ ಭಾಷಣವನ್ನು ಆಯ್ದುಕೊಳ್ಳಲಾಗಿದೆ.**

ದಶಕದಲ್ಲಿ ನಮ್ಮ ವಾರ್ಷಿಕ ಪ್ರಗತಿಯು ಶೇಕಡ ಆರರಷ್ಟಿರುವುದು ನಮ್ಮನ್ನು ಮುಂಚೂಣಿಯಲ್ಲಿರುವಂತೆ ಮಾಡಿದೆ. ಮುಂದಿನ ದಶಕದಲ್ಲಿ ನಮ್ಮ ರಾಷ್ಟ್ರೀಯ ಸರಾಸರಿ ಉತ್ಪನ್ನವನ್ನು ದ್ವಿಗುಣಗೊಳಿಸಲು ನಾನು ಶಪಥ ಮಾಡಿದ್ದೇನೆ. ಇದರರ್ಥ ನಮ್ಮ ರಾಷ್ಟ್ರೀಯ ಸರಾಸರಿ ಉತ್ಪನ್ನವು ಶೇ. 9ರಷ್ಟು ಸಾಧನೆ ತೋರಬೇಕಿದೆ. ಇದು ಭಾರೀ ಬೇಡಿಕೆಯ ಕೆಲಸವೆಂದು ಬಲ್ಲೆ. ಆದರೂ ಭಾರತವು ಅದನ್ನು ಸಾಧಿಸಲಿದೆ. ದೇಶದಲ್ಲಾಗುತ್ತಿರುವ ಬದಲಾವಣೆಗಳು ಸಮಾಜದ ಬಡವರ್ಗಗಳಿಗೆ ತಲುಪಬೇಕೆಂಬ ಉದ್ದೇಶದಿಂದ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಸುಧಾರಣಾ ಪ್ರಕ್ರಿಯೆಯ ಕೆಳ ಹರಿವು ನಿಧಾನವಾಗಿರುತ್ತದೆ. ಆ ಕಾರಣವಾಗಿಯೇ, ಎಲ್ಲರಿಗೂ ಒಳಿತು ಮಾಡುವ ಅಭಿವೃದ್ಧಿಯ ಮಾದರಿ ಬೆಳೆಸಿ, ಆರ್ಥಿಕ ಪ್ರಗತಿಯ ವೇಗ ವರ್ಧಿಸಲು ಪ್ರಯತ್ನಿಸಲಾಗುತ್ತಿದೆ. ಆರ್ಥಿಕ ಸುಧಾರಣೆಯ ಲಾಭವು ಜನ ಸಾಮಾನ್ಯನಿಗೆ ತಲುಪುವಂತೆ ಮಾಡಲು ಉಪಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಒತ್ತು ನೀಡಲಾಗುತ್ತಿದೆ. ಗ್ರಾಮಾಂತರ ಪ್ರದೇಶಗಳಿಗೆ ಸಂಪರ್ಕ, ಶುದ್ಧ ಕುಡಿಯುವ ನೀರು, ಆಶ್ರಯ, ಶುಚಿತ್ವಗಳು ಆದ್ಯತೆಯ ಪಟ್ಟಿಯಲ್ಲಿವೆ. ಸಾಮಾಜಿಕ ಕ್ಷೇತ್ರದ ಅಭಿವೃದ್ಧಿಗೂ ಮಹತ್ವವನ್ನು ನೀಡಲಾಗಿದ್ದು ಪ್ರಾಥಮಿಕ ಆರೋಗ್ಯ ಮತ್ತು ಪ್ರಾಥಮಿಕ ಶಿಕ್ಷಣಗಳು ಆ ಪಟ್ಟಿಯಲ್ಲಿ ಮುಂಚೂಣಿಯಲ್ಲಿವೆ. ಸಾಕಾರಗೊಂಡ ಸಂಪನ್ಮೂಲಗಳನ್ನು ಸಾಮಾಜಿಕ ಕ್ಷೇತ್ರದ ಅಭಿವೃದ್ಧಿಗಾಗಿ ಬಳಕೆ ಮಾಡಲಾಗುತ್ತದೆ. ಆದಾಗ್ಯೂ, ಆರ್ಥಿಕ ಕೊರತೆಯ ಕ್ಷೇತ್ರದಲ್ಲಿ ದೀರ್ಘಕಾಲದ ಸವಾಲುಗಳು ಇದ್ದೇ ಇವೆ. ನಮ್ಮ ತೆರಿಗೆ ದರಗಳು ಅಂತಾರಾಷ್ಟ್ರೀಯ ನೆಲೆಯಲ್ಲಿ ಸ್ಪರ್ಧಾತ್ಮಕವಾಗಿವೆ. ತೆರಿಗೆ ನಿರ್ವಹಣೆಯಲ್ಲಿ ಗಮನಾರ್ಹವಾದ ಬದಲಾವಣೆಯನ್ನು ತರಬೇಕಿದೆ. ತೆರಿಗೆ ಸುಧಾರಣೆ ಕೂಡ ಆದ್ಯತೆಯ ಮೇಲೆ ಗಮನ ನೀಡಬೇಕಾದ ಕ್ಷೇತ್ರವಾಗಿದೆ. ದ್ವಿ–ತೆರಿಗೆ ಒಪ್ಪಂದದ ಮೇಲೆ ಇನ್ನೊಂದು ಕಣ್ಣು ಹಾಯಿಸಬೇಕಾದ ಅಗತ್ಯವಿದೆ. ಸರ್ಕಾರಿ ವೆಚ್ಚವನ್ನು ತಗ್ಗಿಸಬೇಕಿದೆ. ಈ ನಿಟ್ಟಿನಲ್ಲಿ ವೆಚ್ಚ ಆಯೋಗದ ಶಿಫಾರಸ್ಸುಗಳನ್ನು ಜಾರಿ ತರಲು ಕ್ರಮಗಳನ್ನು ಕೈಗೊಳ್ಳಲಾಗಿದೆ. ಆರ್ಥಿಕ ಹೊಣೆಗಾರಿಕೆ ಕಾಯಿದೆ ಸಂಸತ್ತಿನಲ್ಲಿ ಅಂಗೀಕಾರ ಪಡೆದರೆ ಈ ವಿಷಯಗಳು ಖಾತರಿಗೆ ಒಳಪಡುತ್ತವೆ.



**ನಾವು ಹೊಂದಿರುವ ಇತರ ಗುಣಗಳು**

* ಇಂಗ್ಲಿಷ್ ಭಾಷೆಯ ವ್ಯಾಪಕ ಬಳಕೆ * ಪಾರದರ್ಶಕ ಕಾನೂನು ವ್ಯವಸ್ಥೆ ಮತ್ತು ಕಾನೂನು ಪಾಲನೆಯ ಆಡಳಿತ * ಒಪ್ಪಂದದ ಪಾವಿತ್ರ್ಯತೆಯ ಕುರಿತು ಗೌರವ * ಎಲ್ಲಕ್ಕಿಂತ ಹೆಚ್ಚಾಗಿ ಎಲ್ಲ ಅಂತಾರಾಷ್ಟ್ರೀಯ ನಿಯಮಗಳನ್ನು ಪಾಲಿಸುವುದು

ಭಾರತವು ಸರ್ವಾಂಗೀಣ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ತೆರೆದುಕೊಂಡಿದೆ. ಈ ಬದಲಾವಣೆಯ ಭಾಗವಾಗಲು ಮತ್ತು ನಮ್ಮ ಸಂಪತ್ತಿನಲ್ಲಿ ಪಾಲ್ಗೊಳ್ಳುವ ಪಾತ್ರ ವಹಿಸಲು ನಾನು ನಿಮ್ಮನ್ನು ಆಹ್ವಾನಿಸುತ್ತೇನೆ. ಸಹಜ ಮಿತ್ರರು ಎಂದು ಗುರುತಿಸಿಕೊಂಡಿರುವ ಭಾರತ ಮತ್ತು ಅಮೆರಿಕಗಳು ಹೊಸ ಶತಮಾನದಲ್ಲಿ ಈ ಬಂಧವನ್ನು ಇನ್ನಷ್ಟು ಬಿಗಿಗೊಳಿಸಿ ಅರ್ಥಪೂರ್ಣಗೊಳಿಸಬೇಕಿದೆ. ಮಹಾ ಕವಿಯಾಗಿದ್ದ ರವೀಂದ್ರನಾಥ ಟಾಗೂರರ ಪದಗಳಿಂದ ಈ ಮಾತನ್ನು ಮುಗಿಸುತ್ತೇನೆ:

"ಹಿಂದೊಮ್ಮೆ ನಾವು ಅಪರಿಚಿತರು ಎಂಬಂತೆ ಕನಸಿದ್ದೆವು.ಆದರೆ ನಾವು ಎಚ್ಚರಗೊಂಡಾಗ ಒಬ್ಬರಿಗೊಬ್ಬರು ತುಂಬ ಆತ್ಮೀಯರು ಎಂಬುದನ್ನು ಕಂಡುಕೊಂಡೆವು.' ನಾನು ಮತ್ತು ಅಧ್ಯಕ್ಷ ಕ್ಲಿಂಟನ್ ಅವರು ಈ ವರ್ಷದ ಮಾರ್ಚ್‌ನಲ್ಲಿ ಹಸ್ತಾಕ್ಷರ ಹಾಕಿರುವ ಕಾಣ್ಕೆಯ ಘೋಷಣಾ ಪತ್ರವು ಈ ಹೊಸ ಅರಿವನ್ನು ಪ್ರತಿನಿಧಿಸುತ್ತದೆ. ನಮ್ಮ ಈ ಕನಸನ್ನು ಸಾಕಾರಗೊಳಿಸಲು ನಿಮ್ಮ ಪಾಲ್ಗೊಳ್ಳುವಿಕೆಯನ್ನು ಬಯಸುತ್ತೇನೆ". ❑


**ಯೋಜನಾ ಫೆಬ್ರವರಿ 2015**

**ಸಂಚಿಕೆಯ ವಿಷಯ**

**ಒಕ್ಕೂಟ ವ್ಯವಸ್ಥೆ ಮತ್ತು ಭಾರತದ ರಾಜಕೀಯ**

# ಹರಿವು; ನೀತಿ ಬದಲಾವಣೆ ಮತ್ತು ಸ್ಥಿತ್ಯಂತರ

ಸೋಜಿನ್ ಶಿನ್

ಕನ್ನಡಕ್ಕೆ : ಬಿ.ಆರ್. ರವೀಂದ್ರನಾಥ್



ವಿದೇಶಿ ಹೂಡಿಕೆ ಬಗ್ಗೆ ನಮ್ಮ ನೀತಿ ಸ್ಪಷ್ಟವಾಗಿದೆ. ನಾವು ನಮ್ಮ ಅನುಕೂಲಕ್ಕೆ ತಕ್ಕಂತೆ ವಿದೇಶಿ ಹೂಡಿಕೆಗಳನ್ನು ವಿದೇಶಿ ಬಂಡವಾಳವನ್ನು ಕೆಲವು ಮಿತಿಗಳ ಒಳಗೆ ಹಲವಾರು ಕ್ಷೇತ್ರಗಳಲ್ಲಿ ಅನುಮತಿಸುತ್ತೇವೆ. ಹೊರದೇಶಗಳಿಂದ ಪಡೆದ ಸಾಲಗಳು ಕಳೆದ ಹಲವಾರು ವರ್ಷಗಳಲ್ಲಿ ಹೆಚ್ಚಾಗಿವೆ. ಆದರೆ ನೇರ ಹೂಡಿಕೆಯ ಹರಿವು ಬಹಳ ಅಲ್ಪ ಪ್ರಮಾಣದಲ್ಲಿದೆ. ಆದರೂ ಸಾಲ ಪಡೆಯುವುದಕ್ಕಿಂತ ನೇರ ಹೂಡಿಕೆಗಳು ಹೆಚ್ಚು ಅನುಕೂಲಕರವಾಗಿರುತ್ತವೆ.

ವಿದೇಶಿ ನೇರ ಹೂಡಿಕೆ ಎಂದರೆ ಒಂದು ದೇಶದ ಸ್ಥಳೀಯ ಸಂಸ್ಥೆಯು ಇನ್ನೊಂದು ದೇಶದಲ್ಲಿನ ಸ್ಥಳೀಯ ಸಂಸ್ಥೆಯಲ್ಲಿ ದೀರ್ಘಕಾಲೀನ ವಾಣಿಜ್ಯ ಆಸಕ್ತಿ ಹೊಂದುವ ಉದ್ದೇಶದಿಂದ ಹೂಡಿಕೆ ಮಾಡುವುದು. ಭಾರತದಲ್ಲಿ ವಿದೇಶಿ ನೇರ ಹೂಡಿಕೆ ಎಂದರೆ ಅನಿವಾಸಿ ಭಾರತೀಯ ಸಂಸ್ಥೆ / ಬೇರೆ ದೇಶದಲ್ಲಿನ ಪ್ರಜೆಯು ಭಾರತೀಯ ಕಂಪೆನಿಯೊಂದರಲ್ಲಿ ಹೂಡಿಕೆ ಮಾಡುವುದು ಎಂದು ಅರ್ಥ ಮಾಡಿಕೊಳ್ಳಬಹುದು. ವಿದೇಶಿ ಹೂಡಿಕೆದಾರರು ಹೂಡಿಕೆ ಮಾಡಿರುವ ಸ್ಥಳೀಯ ಕಂಪೆನಿಯ ಷೇರುಗಳನ್ನು ಪಡೆಯುವುದಲ್ಲದೆ ಕಂಪೆನಿಯ ಆಡಳಿತದ ನಿರ್ಧಾರಗಳಲ್ಲಿ ಭಾಗವಹಿಸಬಹುದು. ಈ ಎರಡು ಷರತ್ತುಗಳಾದ ದೀರ್ಘಕಾಲೀನ ಹೂಡಿಕೆ ಹಾಗೂ ಆಡಳಿತದಲ್ಲಿ ಭಾಗವಹಿಸುವಿಕೆ ಇವೆರಡೂ ಅತಿಥೇಯ ದೇಶಕ್ಕೆ, ಬಂಡವಾಳದಲ್ಲಿ ಹೂಡಿಕೆ ಮಾಡುವುದಕ್ಕೆ ಹೋಲಿಸಿದರೆ ಅಂತಾರಾಷ್ಟ್ರೀಯ ಬಂಡವಾಳ ದೊರಕಿಸಿಕೊಡುವುದು ಹೆಚ್ಚು ಸಹಕಾರಿಯೇ ಹೊರತು ಅಲ್ಪಕಾಲೀನ ಲಕ್ಷಣಗಳುಳ್ಳ ಹೂಡಿಕೆಗಳು ಅಲ್ಲ. ವಿದೇಶಿ ನೇರ ಹೂಡಿಕೆಯಿಂದಲಾಭ ನಷ್ಟಗಳಿದ್ದರೂ ಆರ್ಥಿಕ ಪ್ರಗತಿಗೆ ಸಂಬಂಧಿಸಿದಂತೆ ಬಹಳಷ್ಟು ಅಭಿವೃದ್ಧಿಗೊಳ್ಳುತ್ತಿರುವ ಮಾರುಕಟ್ಟೆ ದೇಶಗಳಿಗೆ ವಿದೇಶಿ ನೇರ ಹೂಡಿಕೆಯಿಂದ ಹೆಚ್ಚು ಇತರ ಲಾಭಗಳೂ ಲಭಿಸುತ್ತದೆ. (ಮೋರಾನ್ 1998). ಕಳೆದ ಎರಡು ದಶಕಗಳಲ್ಲಿ ಭಾರತ ಹಾಗೂ ಚೀನಾಗಳಂತಹ ಪ್ರಗತಿ ಹೊಂದುತ್ತಿರುವ ದೇಶಗಳಿಗೆ ವಿದೇಶಿ ನೇರ ಹೂಡಿಕೆ ಒಳಹರಿವು ನಿಯಮಿತವಾಗಿ ಮೇಲೇರುತ್ತಿದೆ. ಪ್ರಸಕ್ತದಲ್ಲಿ ಬಹುದೇಶೀಯ ಕಂಪೆನಿಗಳಿಗೆ ಚೀನಾ ದೇಶಕ್ಕೆ ಹೋಗುವುದು ಪ್ರಥಮ ಆದ್ಯತೆ ಇದ್ದರೆ ಭಾರತಕ್ಕೆ ಬರುವುದು ಮೂರನೇ ಆದ್ಯತೆಯಾಗಿರುತ್ತದೆ. ಈ ಎರಡು ದೇಶಗಳು ತಮ್ಮ ನೀತಿಗಳನ್ನು ಹಾಗೂ ಆಡಳಿತ ವಿಧಾನಗಳನ್ನು ಬದಲಿಸಿ ವಿದೇಶಿ ನೇರ ಹೂಡಿಕೆಯನ್ನು ಆಕರ್ಷಿಸುತ್ತಿವೆ. ವಿದೇಶಿ ನೇರ ಹೂಡಿಕೆಯಿಂದ ಆಗುವ ಅನುಕೂಲತೆಗಳೆಂದರೆ ಉದ್ಯೋಗ ಸೃಷ್ಟಿ, ಬಂಡವಾಳ ವಸ್ತುಗಳು ಮತ್ತು ಸೌಕರ್ಯಗಳು ದೊರಕುವುದು, ಉತ್ಪಾದನೆ ಪ್ರೋತ್ಸಾಹಿಸಲು ತಂತ್ರಜ್ಞಾನಗಳ ವರ್ಗಾವಣೆ, ಹೂಡಿಕೆದಾರರು ಆಡಳಿತದಲ್ಲಿ ಭಾಗವಹಿಸುವುದರಿಂದ ಕಂಪೆನಿಗಳಲ್ಲಿ ಹೆಚ್ಚಿನ ಪಾರದರ್ಶಕತೆ, ಆಂತರಿಕ ಹೂಡಿಕೆಗಳಿಗೆ ಪ್ರೋತ್ಸಾಹ ಹೀಗೆ ಕೆಲವು ಏಷ್ಯಾ ದೇಶಗಳಲ್ಲಿನ ಅಭಿವೃದ್ಧಿ ಮಾದರಿಗಳಾದ ಅಂದರೆ ದಕ್ಷಿಣಕೊರಿಯಾ. ತೈವಾನ್, ಹಾಂಗ್‌ಕಾಂಗ್ ಮತ್ತು ಸಿಂಗಾಪೂರ್ ದೇಶಗಳು ತಮ್ಮ ಆರ್ಥಿಕ ಪ್ರಗತಿಗೆ ವಿದೇಶಿ ನೇರ ಹೂಡಿಕೆಯನ್ನು ಹೇಗೆ ಬಳಸಿಕೊಳ್ಳಬಹುದು ಎಂದು ತೋರಿಸಿಕೊಟ್ಟಿವೆ. ಜೊತೆಗೆ ವಿದೇಶಿ ನೇರ ಹೂಡಿಕೆಯಿಂದ ಬರುವ ವಿದೇಶಿವಿನಿಮಯದ ಒಳಹರಿವಿನಿಂದ ವಿಶ್ವಮಟ್ಟದ ಆರ್ಥಿಕ ಸಮಸ್ಯೆಗಳು ಉಂಟಾದರೂ ಆಂತರಿಕ ಕರೆನ್ಸಿಗಳು ಕುಸಿಯುವುದು ಹಾಗೂ ಈ ಕಾರಣದಿಂದ ಐಎಂಎಫ್ ಸಾಲಗಳನ್ನು ಪಡೆಯಬೇಕಾದ ದುಃಸ್ಥಿತಿಗಳು ಉಂಟಾಗುವುದಿಲ್ಲ.

**ಒಳಹರಿವು**

ಭಾರತದ ವಿಷಯಕ್ಕೆ ಬಂದಾಗ 1970 ದಶಕದ ಮಧ್ಯ ಭಾಗದಿಂದ ನಮ್ಮ ದೇಶದ ಮಾರುಕಟ್ಟೆ ಜಾಗತಿಕ ಮಾರುಕಟ್ಟೆಗೆ ಸೇರಿಕೊಂಡಿರುವುದರಿಂದ ವಿದೇಶಿ ನೇರ ಹೂಡಿಕೆ ಹರಿವನ್ನುಅಪೇಕ್ಷಿಸುವ ಕಂಪೆನಿಗಳು

ಸಂಶೋಧನಾ ಸಹವರ್ತಿ, ಇನ್‌ಸ್ಟಿಟ್ಯೂಟ್‌ಆಫ್ ಸೌತ್‌ಏಷ್ಯನ್ ಸ್ಟಡೀಸ್, ಸಿಂಗಾಪೂರ್ ರಾಷ್ಟ್ರೀಯ ವಿಶ್ವವಿದ್ಯಾಲಯ. e-mail : sogin@nus.edu.sg

ಹೆಚ್ಚಾಗಿವೆ. ವಿದೇಶಿ ನೇರ ಹೂಡಿಕೆ ಬಗ್ಗೆಯ ನೀತಿಯು ಮೂರು ಪ್ರಮುಖ ಹಂತಗಳಿಂದ ಬೆಳೆದಿದೆ:

* ವಿದೇಶಿ ನೇರ ಹೂಡಿಕೆ ವಿರೋಧಿ ಹಂತ(1967–75)
* ಭಾಗಶಃ ವಿದೇಶಿ ನೇರ ಹೂಡಿಕೆ ಹಂತ (1975–91)
* ವಿದೇಶಿ ನೇರ ಹೂಡಿಕೆ ಪರ ಹಂತ (1991 ರಿಂದ)

ವಿದೇಶಿ ನೇರ ಹೂಡಿಕೆ ನೀತಿಯನ್ನು ವಿರೋಧಿಸುತ್ತಿದ್ದಕಾಲದಲ್ಲಿ ಆಗಿನ ಸರ್ಕಾರವು ಆರ್ಥಿಕವಾಗಿ ಹಿಂದುಳಿದವರ ರಾಜಕೀಯ ಬೆಂಬಲ ಗಳಿಸಲು 1969ರಲ್ಲಿ ಬ್ಯಾಂಕ್‌ಗಳ ರಾಷ್ಟ್ರೀಕರಣ ಮಾಡಿತು. ಜೊತೆಗೆ ವಿದೇಶಿ ವಿನಿಮಯದ ನಿಯಂತ್ರಣಕ್ಕಾಗಿ ವಿದೇಶಿ ವಿನಿಮಯ ನಿಯಂತ್ರಣ ಕಾಯಿದೆಯನ್ನು ಜಾರಿಗೊಳಿಸಲಾಯಿತು. ಈ ಕಾಯಿದೆಯ ಪ್ರಮುಖ ಅಂಶವೆಂದರೆ ಕೇಂದ್ರ ಸರ್ಕಾರಕ್ಕೆ ವಿದೇಶಿ ವಿನಿಮಯದ ಬಗ್ಗೆ ಸಂಪೂರ್ಣ ಅಧಿಕಾರವಿತ್ತು. ಉದಾಹರಣೆಗೆ ಸರ್ಕಾರದ ಏಕೈಕ ಅಧಿಕೃತ ಸಂಸ್ಥೆ ಭಾರತೀಯ ರಿಸರ್ವ್ ಬ್ಯಾಂಕ್‌ನ್ನು ಹೊರತುಪಡಿಸಿ ಇನ್ನಾವುದೇ ಸರ್ಕಾರಿ ಸ್ವಾಮ್ಯದಲ್ಲಿರುವ ಸಂಸ್ಥೆ ವಿದೇಶಿ ವಿಮಯದ ಬಗ್ಗೆಯ ಚಟುವಟಿಕೆಗಳನ್ನು ನಡೆಸಲು ಅವಕಾಶವಿರಲಿಲ್ಲ. ಭಾಗಶ: ವಿದೇಶಿ ನೇರ ಹೂಡಿಕೆ ಅವಧಿಯಲ್ಲಿ ಭಾರತೀಯ ಆರ್ಥಿಕ ಪರಿಸ್ಥಿತಿಯಲ್ಲಿ ಮಹತ್ತರ ಬದಲಾವಣೆಗಳು ಉಂಟಾಗಿ ನಿಬಂಧನೆಗಳನ್ನು ಸಡಿಲಿಸಲು ಅನುಕೂಲಕರ ವಾತಾವರಣ ನಿರ್ಮಾಣವಾಯಿತು. ಆಗಿನ ಸರ್ಕಾರವು ಭಾರತದ ಕೈಗಾರಿಕೆಯಲ್ಲಿ ವಿದೇಶಿ ಬಂಡವಾಳ ಹೂಡಿಕೆಯನ್ನು ಸ್ವಾಗತಿಸಿತು. 1977ರಲ್ಲಿ ಫ್ರಾಂಕ್ ಹೇಳುವಂತೆ 1976 ರಲ್ಲಿ ಭಾರತೀಯ ಆರ್ಥಿಕ ದಿಕ್ಕು ಬದಲಾಗಲು ಪ್ರಾರಂಭವಾಯಿತು. ಬೃಹತ್ ಮಟ್ಟದ ಬಂಡವಾಳ ಹೂಡಿಕೆಗಾಗಿ, ಇತರ ಆರ್ಥಿಕ ವಲಯಗಳಿಗೆ ಮತ್ತು ರಾಜಕೀಯ ಆಸಕ್ತಿಗಳಿಗೆ ಪ್ರತಿಯಾಗಿ ದಕ್ಷ ವ್ಯವಸ್ಥೆಯಾಗಿ ಸರ್ಕಾರ ಪುನರ್ ರಚನೆಗೊಳ್ಳುತ್ತಿದೆ.

ರಾಜೀವ ಗಾಂಧಿಯವರ ಸರ್ಕಾರ ವಿದೇಶಿ ನೇರ ಹೂಡಿಕೆ ಒಳಹರಿವುಗಳನ್ನು ಬೆಂಬಲಿಸಿದಾಗ ಇಂತಹ ಬದಲಾವಣೆ ಸ್ಪಷ್ಟಗೊಂಡಿತು. 1980ರ ದಶಕದ ಪ್ರಾರಂಭದಲ್ಲಿ ಉಂಟಾದ ಪೆಟ್ರೋಲಿಯಂ ತೈಲದ ಬೆಲೆಯ ಏರಿಕೆ ಹಾಗೂ ಜಾಗತಿಕ ಮಟ್ಟದ ಆರ್ಥಿಕ ಹಿನ್ನಡೆಯಿಂದ ಶ್ರೀ ರಾಜೀವಗಾಂಧಿಯವರಿಗೆ ಹೊರದೇಶಗಳಿಂದ ಸಾಲ ಪಡೆಯುವದಕ್ಕಿಂತ ವಿದೇಶಿಯರ ಹೂಡಿಕೆಯ ಸಂಭಾವ್ಯ ಅನುಕೂಲತೆಗಳ ಬಗ್ಗೆ ಅರಿವಿಗೆ ಬಂದಿತು.ಅವರು ಈ ರೀತಿ ಹೇಳಿದ್ದಾರೆ:

"ವಿದೇಶಿ ಹೂಡಿಕೆ ಬಗ್ಗೆ ನಮ್ಮ ನೀತಿ ಸ್ಪಷ್ಟವಾಗಿದೆ. ಮುಕ್ತ ಸ್ವಾಗತವಿಲ್ಲದ ನೀತಿ ನಮ್ಮದು. ನಾವು ನಮ್ಮ ಅನುಕೂಲಕ್ಕೆ ತಕ್ಕಂತೆ ವಿದೇಶಿ ಹೂಡಿಕೆಗಳನ್ನು ವಿದೇಶಿ ಬಂಡವಾಳವನ್ನು ಕೆಲವು ಮಿತಿಗಳ ಒಳಗೆ ಹಲವಾರು ಕ್ಷೇತ್ರಗಳಲ್ಲಿ ಅನುಮತಿಸುತ್ತೇವೆ. ಈ ಮಿತಿಗಳನ್ನು ಉನ್ನತ ತಂತ್ರಜ್ಞಾನದಂತಹ ಕ್ಷೇತ್ರಗಳಲ್ಲಿ ಅಥವಾ ರಫ್ತುಗಳಿಗೆ ವಿಶೇಷ ಬೆಂಬಲ ದೊರಕಿದಲ್ಲಿ ಸಡಿಲಿಸಬಹುದು. ಹೊರದೇಶಗಳಿಂದ ಪಡೆದ ಸಾಲಗಳು ಕಳೆದ ಹಲವಾರು ವರ್ಷಗಳಲ್ಲಿ ಹೆಚ್ಚಾಗಿವೆ. ಇದು ಬೆಳೆಯುತ್ತಿರುವ ಅಗತ್ಯಗಳು ಮತ್ತು ಬಳಸಿಕೊಳ್ಳುವ ಸಾಮರ್ಥ್ಯಗಳನ್ನು ಸೂಚಿಸುತ್ತವೆ.ಆದರೆ ನೇರ ಹೂಡಿಕೆಯ ಹರಿವು ಬಹಳ ಅಲ್ಪ ಪ್ರಮಾಣದಲ್ಲಿದೆ. ಆದರೂ ಸಾಲ ಪಡೆಯುವುದಕ್ಕಿಂತ ನೇರ ಹೂಡಿಕೆಗಳು ಹೆಚ್ಚು ಅನುಕೂಲಕರವಾಗಿರುತ್ತದೆ. ಸಾಲಗಳನ್ನು ಪಡೆದು ಮಾಡಿರುವ ಹೂಡಿಕೆಗಳಿಂದ ಲಾಭವಾಗಿಲ್ಲದಿದ್ದರೂ ಮರುಪಾವತಿ ಮಾಡಬೇಕಾಗುತ್ತದೆ. ಹೂಡಿಕೆಗಳಾದರೆ, ಉತ್ಪಾದನೆ ಪ್ರಾರಂಭವಾಗುವಂತಹ ಅದರಲ್ಲೂ ಲಾಭವಿದ್ದಲ್ಲಿ ಮಾತ್ರ ಹೊರ ಹರಿವು ಪ್ರಾರಂಭವಾಗುತ್ತದೆ. ಕಾರ್ಯವಿಧಾನಗಳನ್ನು ಚುರುಕುಗೊಳಿಸಿ ಅನಗತ್ಯ ಅಡ್ಡಿಗಳನ್ನು ನಿರ್ಮೂಲ ಮಾಡಿದರೆ ನಾವು ಬಹುಗಾತ್ರದ ವಿದೇಶಿ ಹೂಡಿಕೆಗಳನ್ನು ಪಡೆಯಬಹುದಾಗಿರುತ್ತದೆ. ಇದರಿಂದ ನಮ್ಮ ಆರ್ಥಿಕ ಸ್ಥಿತಿಗೆ ಅನುಕೂಲವಾಗುತ್ತದೆ."

1990ರ ಪ್ರಾರಂಭದಲ್ಲಿದ್ದ ಆರ್ಥಿಕ ಸಂಕಷ್ಟಗಳು ವಿದೇಶಿ ನೇರ ಹೂಡಿಕೆ ವಲಯದಲ್ಲಿ ನೂತನಆರ್ಥಿಕ ನೀತಿಗಳನ್ನು ರೂಪಿಸಲು ಅನುವಾಯಿತು. 1991–96 ರ ಅವಧಿಯಲ್ಲಿ ವಿತ್ತಮಂತ್ರಿಗಳಾಗಿದ್ದ ಡಾ.ಮನಮೋಹನ್ ಸಿಂಗ್ ರವರ ಅವಧಿಯಲ್ಲಿ ರೂಪಿಸಲಾದ ನೀತಿಯು 1991ರಲ್ಲಿ ಕಾರ್ಯಗತಗೊಳಿಸಲಾದ ಆರ್ಥಿಕ ಬದಲಾವಣೆಗಳಿಗೆ ಮೂಲ ವಿನ್ಯಾಸವಾಯಿತು. ಹಲವಾರು ಕ್ಷೇತ್ರಗಳಲ್ಲಿ ಭಾರತೀಯ ಕಂಪೆನಿಗಳಲ್ಲಿ ಪಾವತಿಯಾದ ಷೇರು ಬಂಡವಾಳದ ವಿದೇಶಿ ಹೂಡಿಕೆ



ಮಿತಿಯನ್ನು ಶೇ. 40ರಿಂದ ಶೇ.51 ರವರೆಗೆ ಹೆಚ್ಚಿಸಲು ಈ ನೀತಿಯು ಸೂಚಿಸಿತು. 1991ರ ವಿದೇಶಿ ಪಾವತಿ ಸಂಕಷ್ಟತೆಯ ಹಿನ್ನೆಲೆಯಲ್ಲಿ ಈ ನೀತಿಯಲ್ಲಿನ ಬದಲಾವಣೆಯ ವಿದೇಶಿ ನೇರ ಹೂಡಿಕೆಗೆ ಅನುಕೂಲ ಮಾಡಿಕೊಟ್ಟಿತು. (ಮುಖರ್ಜಿ 2014)

ವಿದೇಶಿ ನೇರ ಹೂಡಿಕೆ ಪರ ಅವಧಿಯಲ್ಲಿ ವಿದೇಶಿ ನೇರ ಹೂಡಿಕೆ ಒಳಹರಿವಿನ ಬಗ್ಗೆ ಗಣನೀಯ ಪರಿಣಾಮ ಬೀರಿದ ನೀತಿಯ ಬದಲಾವಣೆ ಎಂದರೆ 1999 ರಲ್ಲಿ ವಿದೇಶಿ ವಿನಿಮಯ ನಿರ್ವಹಣೆ ಕಾಯಿದೆಯನ್ನು (ಎಫ್‌ಇಎಂಎ) ಜಾರಿಗೊಳಿಸಿದ್ದು. 1973ರಲ್ಲಿ ಜಾರಿಗೊಳಿಸಿದ್ದ ವಿದೇಶಿ ವಿನಿಮಯ ನಿಯಂತ್ರಣ ನಿಬಂಧನೆ ಕಾಯಿದೆಗೆ ಹೋಲಿಸಿದರೆ ಎಫ್ ಇ ಎಂಎ ಅಡಿಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಅಲ್ಲದೆ ವಿದೇಶಿ ವಿನಿಮಯ ವ್ಯವಹಾರಗಳಲ್ಲಿ ಸೆಬಿ ಯಂತಹ ಸರ್ಕಾರಿ ಸಂಸ್ಥೆಗಳೂ ಸಹ ಭಾಗವಹಿಸಲು ಅವಕಾಶವಿರುತ್ತದೆ. ಸೆಬಿ ಮತ್ತು ಆರ್‌ಬಿಐಗಳು ಪ್ರಮುಖವಾಗಿ ಅನುಮತಿ ಅಥವಾ ಅನುಮೋದನೆ ಬೇಕಿಲ್ಲದ ಸ್ವಯಂಚಾಲಿತ ಮಾರ್ಗದಲ್ಲಿ ಹರಿಯುವ ವಿದೇಶಿ ಸಾಂಸ್ಥಿಕ ಹೂಡಿಕೆ ಹಾಗೂ ವಿದೇಶಿ ನೇರ ಹೂಡಿಕೆಗಳನ್ನು ಪರಿಶೀಲಿಸುತ್ತದೆ. ಸ್ವಯಂಚಾಲಿತ ಮಾರ್ಗದಲ್ಲಿ ವಿವಿಧಕೈಗಾರಿಕೆ ಕ್ಷೇತ್ರಗಳಲ್ಲಿನ ವಿದೇಶಿ ಹೂಡಿಕೆದಾರರು ಬೇರೆ ಮಾರ್ಗಗಳಿಗಿಂತ ಸುಲಭವಾಗಿ ವ್ಯವಹಾರಗಳನ್ನು ನಡೆಸುವ ಸೌಲಭ್ಯವಿರುತ್ತದೆ. ಈ ಸ್ವಯಂಚಾಲಿತ ಮಾರ್ಗಕ್ಕೆ ಹೊರತಾಗಿರುವ ಪ್ರಸ್ತಾವನೆಗಳನ್ನು ವಾಣಿಜ್ಯ ಸಚಿವಾಲಯ ಹಾಗೂ ವಿತ್ತ ಸಚಿವಾಲಯದಡಿಯಲ್ಲಿ ಬರುವ ವಿದೇಶಿ ಹೂಡಿಕೆ ಪ್ರೋತ್ಸಾಹನಾ ಮಂಡಲಿಗಳು ಪರಿಶೀಲಿಸುತ್ತವೆ. ವಿದೇಶಿ ವಿನಿಮಯ ನಿರ್ವಹಣೆ ಕಾಯಿದೆ ಜಾರಿಗೊಂಡ ನಂತರ ಪ್ರಸ್ತಾವನೆಗಳ ಅನುಮೋದನೆಅಥವಾ ತಿರಸ್ಕಾರಗಳಲ್ಲಿ ವಿದೇಶಿ ಹೂಡಿಕೆ ಪ್ರೋತ್ಸಾಹನಾ ಮಂಡಲಿಯ ಪಾತ್ರ ಹೆಚ್ಚು

ಮಹತ್ವವನ್ನು ಪಡೆಯುತ್ತದೆ. ವಿದೇಶಿ ಹೂಡಿಕೆ ಪ್ರೋತ್ಸಾಹನಾ ಮಂಡಲಿ ಹೇಳಿಕೊಳ್ಳುವಂತೆ ತಾನು ಒಂದು ಏಕಗವಾಕ್ಷಿ ಅನುಮೋದನೆ ಸಂಸ್ಥೆಯಾಗಿದ್ದು ವಿದೇಶಿ ಹೂಡಿಕೆದಾರರು ಒಂದೇ ಪ್ರಸ್ತಾವನೆಯನ್ನು ವಿವಿಧ ಸರ್ಕಾರಿ ಸಂಸ್ಥೆಗಳಿಂದ ಪ್ರತ್ಯೇಕವಾಗಿ ಒಪ್ಪಿಗೆ ಪಡೆಯುವ ಕಷ್ಟ ಹಾಗೂ ಸಮಯ ನಷ್ಟವನ್ನು ಉಳಿಸುತ್ತದೆ.ಈಗಿನ ಪ್ರಧಾನ ಮಂತ್ರಿಗಳು ಕೊಟ್ಟಿರುವ "ಬನ್ನಿ ಭಾರತದಲ್ಲಿ ತಯಾರಿಸಿ" ಕರೆಗಾಗಿ ಪರಿಣಾಮಕಾರಿ ಹಾಗೂ ಸುಲಭ ಆಡಳಿತಕ್ಕೆ ಒತ್ತುಕೊಟ್ಟು ವಿದೇಶಿ ಹೂಡಿಕೆದಾರರಿಗೆ ಭಾರತವನ್ನು ಜಾಗತಿಕ ಮಟ್ಟದ ಚಟುವಟಿಕೆಗಳ ಕೇಂದ್ರವನ್ನಾಗಿ ರೂಪಿಸಲು ಉದ್ದೇಶಿಸಿದ್ದಾರೆ. ಉತ್ತಮ ಆಡಳಿತದ ಮೂರು ಆಧಾರ ಸ್ತಂಭಗಳಾದ ಪರವಾನಗಿ ಹಾಗೂ ನಿಬಂಧನೆಗಳನ್ನು ರದ್ದುಗೊಳಿಸಿ ವ್ಯವಹಾರಗಳನ್ನು ಸುಲಭಗೊಳಿಸುವುದು, ಕೈಗಾರಿಕಾ ಕಾರಿಡಾರ್ ಗಳಂತಹ ಮೂಲಭೂತ ಸೌಲಭ್ಯಗಳನ್ನು ಸ್ಥಾಪಿಸುವುದು ಮತ್ತು ರಕ್ಷಣಾ ನಿರ್ಮಾಣ ಹಾಗೂ ರೈಲ್ವೇ ಕ್ಷೇತ್ರಗಳನ್ನು ವಿದೇಶಿ ನೇರ ಹೂಡಿಕೆಗಾಗಿ ತೆರೆದಿಡುವುದು ಇವುಗಳಿಗೆ ಒತ್ತುಕೊಟ್ಟು ಎಫ್‌ಡಿಐ ನ್ನು "ಫಸ್ಟ್‌ಡೆವೆಲಪ್ ಇಂಡಿಯಾ" ಅಂದರೆ ಮೊದಲು ಭಾರತವನ್ನು ಅಭಿವೃದ್ಧಿಪಡಿಸಿ ಎಂದು ಹೇಳಿರುತ್ತಾರೆ. ಉತ್ಪಾದನೆ ಮತ್ತು ಮೂಲ ಭೂತ ಕ್ಷೇತ್ರಗಳನ್ನು ಸೇರಿಸಿ ಸರ್ಕಾರವು ವಿವಿಧ ಕ್ಷೇತ್ರಗಳಾದ ವಿಮಾನಯಾನ, ಬಯೋಟೆಕ್, ರಾಸಾಯನಿಕಗಳು, ಕಾಮಗಾರಿ, ಗಣಿಗಾರಿಕೆ, ಪೆಟ್ರೋಲಿಯಂ ತೈಲ ಮತ್ತು ಅನಿಲ, ಔಷಧ, ನವೀಕರಿಸಬಹುದಾದ ಇಂಧನ ಕೈಗಾರಿಕೆಗಳನ್ನು ವಿದೇಶಿ ನೇರ ಹೂಡಿಕೆಯ ಹೊಸ ಗುರಿಗಳಿಗೆ ಪ್ರಾಶಸ್ತ್ಯ ನೀಡಲಾಗಿದೆ. ಭಾರತೀಯ ಕೈಗಾರಿಕೆಗಳಲ್ಲಿ ವಿದೇಶಿ ನೇರ ಹೂಡಿಕೆ ಅನುಕೂಲಕರವಾಗಿರುತ್ತದೆ ಎಂಬುದರಲ್ಲಿ ಸರ್ಕಾರವು ಬಲವಾಗಿ ನಂಬಿರುತ್ತದೆ ಎಂಬುದನ್ನು ಈ ಕ್ರಮಗಳು ಸೂಚಿಸುತ್ತವೆ.

### ಹರಿವಿನಲ್ಲಿ ಅಸಮತೋಲನ

2011ರಲ್ಲಿ ನಿವ್ವಳ ವಿದೇಶಿ ನೇರ ಹೂಡಿಕೆ ಹರಿವು ಅಮೆರಿಕಾ ಡಾಲರ್3.2 ಬಿಲಿಯದಷ್ಟಿದ್ದು ನಮ್ಮ ದೇಶದ ಜಿಡಿಪಿಯ ಶೇ 3ರಷ್ಟಿತ್ತು. ಪ್ರಮುಖ ರಾಜಕೀಯ ನಾಯಕರಾದ ಪ್ರಧಾನ ಮಂತ್ರಿಗಳು ಹಾಗೂ ವಿತ್ತ ಮಂತ್ರಿಗಳ ಅಲೋಚನೆಗಳು ವಿದೇಶಿ ನೇರ ಹೂಡಿಕೆ ಒಳಹರಿವಿನಲ್ಲಿ ವಿಸ್ತೃತ ಆರ್ಥಿಕ ಸುಧಾರಣೆಗಳಿಗೆ ಬೆಂಬಲ ನೀಡಿವೆ. ಕೇಂದ್ರ ಸರ್ಕಾರದಿಂದ ಬಲವಾದ ಬೆಂಬಲಗಳಿದ್ದರೂ ರಾಜ್ಯಗಳ ಮಟ್ಟದಲ್ಲಿ ವಿದೇಶಿ ನೇರ ಹೂಡಿಕೆ ಒಳಹರಿವನ್ನು ಆಕರ್ಷಿಸುವಲ್ಲಿ ಬಹಳಷ್ಟು ಅಸಮತೋಲನಗಳಿವೆ. ವಿದೇಶಿ ನೇರ ಹೂಡಿಕೆ ಹರಿವಿನಲ್ಲಿ ರಾಜ್ಯದಿಂದ ರಾಜ್ಯಕ್ಕೆ ಬಹಳಷ್ಟು ಅಸಮತೋಲನವಿದೆ. ಉದಾಹರಣೆಗೆ ಭಾರತದ ಒಟ್ಟು ಹರಿವಿನ ಅರ್ಧದಷ್ಟು ಮೊತ್ತ ಮಹಾರಾಷ್ಟ್ರ ಮತ್ತುದೆಹಲಿ ರಾಜ್ಯಗಳ ಪಾಲಾಗಿವೆ. ತಮಿಳುನಾಡು, ಕರ್ನಾಟಕ, ಗುಜರಾತ್ ಮತ್ತು ಆಂಧ್ರಪ್ರದೇಶ ರಾಜ್ಯಗಳು ಮಧ್ಯಮ ಮಟ್ಟದ ಗುಂಪಿಗೆ ಸೇರಿರುತ್ತವೆ. ಪಶ್ಚಿಮ ಬಂಗಾಳ ಮತ್ತು ಒಡಿಶಾ ರಾಜ್ಯಗಳು ಬಹಳ ಕಡಿಮೆ ಮೊತ್ತದ ಹರಿವನ್ನು ಪಡೆದಿವೆ. ಈಗ ಒಂದು ಪ್ರಮುಖ ಪ್ರಶ್ನೆ ಉದ್ಭವಿಸುತ್ತದೆ. ಕೇಂದ್ರ ಸರ್ಕಾರದ ಮಟ್ಟದಲ್ಲಿ ವಿದೇಶಿ ನೇರ ಹೂಡಿಕೆ ಪರವಿಕರೂಪದ ನೀತಿಯನ್ನು ರೂಪಿಸಲಾಗಿದ್ದರೂ, ಏಕೆ ಕೆಲವು ರಾಜ್ಯಗಳು ಮಾತ್ರ ವಿದೇಶಿ ನೇರ ಹೂಡಿಕೆ ಹರಿವನ್ನು ಸಾಧಿಸುವಲ್ಲಿ ಹೆಚ್ಚು ಯಶಸ್ವಿಯಾಗಿವೆ?

ಕಡಿಮೆ ಮಟ್ಟದ ಹರಿವು ಕಂಡಿರುವ ಒಡಿಶಾದಂತಹ ಕೆಲವು ರಾಜ್ಯಗಳಲ್ಲಿ ಪದೇಪದೇ ವಿದೇಶಿ ನೇರ ಹೂಡಿಕೆ ಹರಿವಿನ ವಿರುದ್ಧ ಸಮಾಜದಿಂದ ಪ್ರಬಲ ವಿರೋಧಗಳನ್ನು ಕಾಣುತ್ತಿದ್ದೇವೆ. ಉದಾ: ದಕ್ಷಿಣಕೊರಿಯಾ ಮೂಲದ ಪೊಹಾಂಗ್ ಸ್ಟೀಲ್ ಕಂಪೆನಿ (ಪೊಸ್ಕೊ)ಗೆ ಒಡಿಶಾದ ಜಗತ್ ಸಿಂಗ್ ಪುರ್ ನಲಿ ಸಾಮಾಜಿಕ ವಿರೋಧದ ಕಾರಣದಿಂದ ಭೂಮಿಯನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಕೇಂದ್ರ ಸರ್ಕಾರದ ಪರಿಸರ ಹಾಗೂ ಅರಣ್ಯ ಇಲಾಖೆಯ ಕೋರಿಕೆ ಮೇರೆಗೆ ಪೊಸ್ಕೊ ಯೋಜನೆಗಾಗಿ ವಿದೇಶಿಯರ ಹಕ್ಕು ಕಾಯಿದೆ (ಎಫ್‌ಆರ್‌ಎ) ಯ ಸ್ಥಿತಿಯ ಬಗ್ಗೆ ವಿಚಾರಣೆ ನಡೆಸಿದ ಕಾರ್ಯಕಾರಿ ಸಮಿತಿಯ ಪ್ರಕಾರ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವ ಮುನ್ನ ಒಡಿಶಾ ಸರ್ಕಾರವು ಸ್ಥಳೀಯ ಗ್ರಾಮಸ್ಥರಿಂದಒಪ್ಪಿಗೆ ಪಡೆಯುವ ಹಂತವನ್ನು ಕಡೆಗಣಿಸಲಾಗಿತ್ತು. (ಪಿಂಗ್ಲೆ, ಪಾಂಡೆಮತ್ತು ಸುರೇಶ್ 2010 : 3–5), ಮದರಾಸು ಉಚ್ಚನ್ಯಾಯಾಲಯದ ನ್ಯಾಯಾಧೀಶರೊಬ್ಬರುಒಡಿಶಾದ ವಿಚಾರಣೆ ಪ್ರಕ್ರಿಯೆಯನ್ನು ಕೂಲಂಕಷವಾಗಿ ಗಮನಿಸುತ್ತಿದ್ದು ಅವರು ಪೊಸ್ಕೊ ಯೋಜನೆಯ ವಿರುದ್ಧಜಗತ್ ಸಿಂಗ್ ಪುರ್



ನಲ್ಲಿ ನಡೆಸಲಾದ ಸಮಾಜ ವಿರೋಧವು ಬಹುಮಟ್ಟಿಗೆ ಸಾಧ್ಯವಾಗಿದ್ದುರಾಜ್ಯ ಸರ್ಕಾರದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ವೈಫಲ್ಯದಕಾರಣದಿಂದ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇದೇ ರೀತಿಯಲ್ಲಿ ಪಶ್ಚಿಮ ಬಂಗಾಳದ ಸಿಂಗೂರ್ ನಲ್ಲಿ ನ್ಯಾನೊಕಾರ್‌ನ ಯೋಜನೆಗಾಗಿ ಭೂಮಿಯನ್ನು ಪಡೆಯಲು ಸಾಮಾಜಿಕ ವಿರೋಧವನ್ನು ಟಾಟಾ ಕಂಪೆನಿಯೂ ಎದುರಿಸಬೇಕಾಯಿತು. ಟಾಟಾಗಳು ಭಾರತೀಯ ಹೂಡಿಕೆದಾರರಾಗಿದ್ದರೂ ಪಶ್ಚಿಮ ಬಂಗಾಳದಲ್ಲಿ ಭೂಮಿಯನ್ನು ಪಡೆಯಲು ವಿಫಲರಾಗಿದ್ದು ಸಂತ್ರಸ್ತರಿಗೆ ಬದಲಿ ಜೀವನೋಪಾಯಗಳನ್ನು ಒದಗಿಸುವಲ್ಲಿ ಹಾಗೂ ಭೂಸ್ವಾಧೀನದಲ್ಲಿತಕ್ಕ ಪರಿಹಾರವನ್ನು ನಿಗದಿಪಡಿಸುವಲ್ಲಿ ರಾಜ್ಯ ಸರ್ಕಾರದ ದೌರ್ಬಲ್ಯವನ್ನು ಎತ್ತಿತೋರಿಸುತ್ತದೆ. (ಚಂದ್ರ 2008). ಆದ್ದರಿಂದ ಸಮಾಜದಲ್ಲಿನ ವಿರೋಧ ಗುಂಪುಗಳ ಜೊತೆರಾಜ್ಯ ಸರ್ಕಾರದ ಸಂಧಾನ ಮಾಡುವ ಸಾಮರ್ಥ್ಯ ಹಾಗೂ ಪರಿಣಾಮಕಾರಿ ಆಡಳಿತದ ಮಟ್ಟ ಸಮಸ್ಯೆಗಳನ್ನು ಒಡ್ಡುತ್ತವೆ. ಅಂದರೆ ಬಹಳಷ್ಟು ರಾಜ್ಯ ನಾಯಕರು ತಮ್ಮರಾಜ್ಯಕ್ಕೆ ಹೆಚ್ಚಿನ ವಿದೇಶಿ ನೇರ ಹೂಡಿಕೆಗಳನ್ನು ಆಕರ್ಷಿಸಲು ಇತರ ರಾಜ್ಯಗಳೊಂದಿಗೆ ಸ್ಪರ್ಧಿಸಿದರೂ ವಿದೇಶಿ ನೇರ ಹೂಡಿಕೆಯನ್ನು ಆಕರ್ಷಿಸುವಲ್ಲಿ ರಾಜ್ಯಗಳ ನಡುವೆ ಗಣನೀಯ ವ್ಯತ್ಯಾಸಗಳು ಆಡಳಿತ ಸಮಸ್ಯೆಗಳು ಹಾಗೂ ವಿದೇಶಿ ನೇರ ಹೂಡಿಕೆಹರಿವಿಗೆ ಸಾಮಾಜಿಕ ವಿರೋಧವನ್ನು ನಿರ್ವಹಿಸುವ ರಾಜ್ಯಸರ್ಕಾರದ ಸಾಮರ್ಥ್ಯಗಳಲ್ಲಿನ ವ್ಯತ್ಯಾಸಗಳನ್ನು ಸೂಚಿಸುತ್ತವೆ. ವಿದೇಶಿ ನೇರ ಹೂಡಿಕೆ ಹರಿವುಗಳನ್ನು ಸಾಧಿಸುವಲ್ಲಿ ರಾಜ್ಯಗಳ ವೈಫಲ್ಯವನ್ನುಆಯಾ ರಾಜ್ಯಗಳಲ್ಲಿನ ಸಾಮಾಜಿಕ ರಾಜಕೀಯ ಪರಿಸ್ಥಿತಿಗಳನ್ನು ಗಣನೆಗೆತೆಗೆದುಕೊಂಡು ಮಾಪನ ಮಾಡಬೇಕಾಗುತ್ತದೆ. ❑

# ಬಂಡವಾಳ ಹೂಡಿಕೆಯಲ್ಲಿ ಪ್ರಾದೇಶಿಕ ಅಸಮತೆ

ಡಾ. ಎಸ್ ಆರ್. ಕೇಶವ

ಕನ್ನಡಕ್ಕೆ : ನರೇಂದ್ರ ಪೈ




**ರಾಜ್ಯ ಸರ್ಕಾರಗಳು ವಿದೇಶಿ ಹೂಡಿಕೆದಾರರಿಗೆ ವಿನಾಯಿತಿಗಳನ್ನು ಹೆಚ್ಚಿಸುವುದಕ್ಕಿಂತ ಮೂಲಭೂತ ಸೌಕರ್ಯಗಳನ್ನು ಮತ್ತಷ್ಟು ಸುಧಾರಿಸುವತ್ತ ಹೆಚ್ಚು ಗಮನ ಕೇಂದ್ರೀಕರಿಸುವುದು ಅಗತ್ಯವಾಗಿದೆ. ಸಾಮಾನ್ಯ ಪ್ರಮಾಣದ ಹಾಗೂ ಕನಿಷ್ಠ ಪ್ರಮಾಣದ ವಿದೇಶಿ ನೇರ ಬಂಡವಾಳ ಹೂಡಿಕೆಯನ್ನಷ್ಟೇ ಆಕರ್ಷಿಸುತ್ತಿರುವಂಥ ರಾಜ್ಯಗಳು ಆಡಳಿತದಲ್ಲಿ ಪಾರದರ್ಶಕತೆ, ಭ್ರಷ್ಟಾಚಾರ ಮುಕ್ತ ಆಡಳಿತ ಸಾಧ್ಯವಾಗಿಸಿ, ತಮ್ಮ ತಮ್ಮ ರಾಜ್ಯಗಳನ್ನು ಹೆಚ್ಚು ಹೆಚ್ಚು ಚುರುಕಾದ ಮತ್ತು ಪ್ರಗತಿಪರ ನಿಟ್ಟಿನಲ್ಲಿ ನಡೆಸುವಂತಾದರೆ ವಿದೇಶಿ ನೇರ ಹೂಡಿಕೆಯ ಒಳಹರಿವು ಹೆಚ್ಚಾದೀತು.**

ಜಗತ್ತಿನಾದ್ಯಂತ ಉಳಿದೆಲ್ಲಾ ಬಗೆಯ ಬಂಡವಾಳ ಹೂಡಿಕೆಗಿಂತ ಹೆಚ್ಚು ಪ್ರಾಶಸ್ತ್ಯ ಪಡೆಯುತ್ತಿರುವ ಹೂಡಿಕೆಯೆಂದರೆ ಅದು ವಿದೇಶಿ ನೇರ ಬಂಡವಾಳ ಹೂಡಿಕೆ. ಅದು ಸಾಲ ರೂಪದ ಹೂಡಿಕೆಯಲ್ಲದಿರುವುದೇ ವಿದೇಶಿ ನೇರ ಹೂಡಿಕೆಯನ್ನು ಅಷ್ಟೊಂದು ಬಯಸಲು ಕಾರಣ. ವಿದೇಶಿ ಬಂಡವಾಳದಿಂದ ಆತಿಥೇಯ ರಾಷ್ಟ್ರದಲ್ಲಿನ ಒಟ್ಟು ಹೂಡಿಕೆಯಲ್ಲಿ ಗಣನೀಯ ಪ್ರಗತಿಯಾಗುವುದಲ್ಲದೆ ಅದರ ಅಗಣಿತ ಪ್ರಯೋಜನಗಳ ರೂಪದಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳು, ಆದಾಯ ಮತ್ತು ಉಳಿತಾಯಗಳು ಸಾಧ್ಯವಾಗುತ್ತವೆ. ಅದರಿಂದ ಆತಿಥೇಯ ರಾಷ್ಟ್ರದಲ್ಲಿ ಅತ್ಯಾಧುನಿಕ ಯಂತ್ರೋಪಕರಣಗಳ ಬಳಕೆ, ನವನವೀನ ತಂತ್ರಜ್ಞಾನದ ಅಳವಡಿಕೆ, ಕೌಶಲದ ಅಭಿವೃದ್ಧಿ, ನಿರ್ವಹಣಾ ನೈಪುಣ್ಯದಲ್ಲಿ ಸುಧಾರಣೆ ಮತ್ತು ಅನ್ಯ ದೇಶಗಳಿಗೆ ಸೇವಾ ಸೌಲಭ್ಯಗಳ ಹಾಗೂ ಉತ್ಪಾದನೆಯ ರಫ್ತು ಸಾಧ್ಯವಾಗುತ್ತದೆ. ಕಂಪೆನಿಗಳು ಗ್ರಾಹಕರಿಗೆ ಅತ್ಯುತ್ತಮ ಗುಣಮಟ್ಟದ ವಸ್ತುಗಳನ್ನು ಒದಗಿಸುವಲ್ಲಿ ಸ್ಪರ್ಧಾತ್ಮಕ ಮನೋಭಾವದಿಂದ ದುಡಿಯುವುದರಿಂದ ಗ್ರಾಹಕರಿಗೆ ಸುವಿಶಾಲ ವ್ಯಾಪ್ತಿಯ, ವೈವಿಧ್ಯಮಯವಾದ ಆಯ್ಕೆಗಳು ಲಭ್ಯವಾಗುತ್ತವೆ. ಈ ಸ್ಪರ್ಧಾತ್ಮಕ ವಾತಾವರಣದಿಂದಾಗಿ ದೇಶೀಯ ನೆಲೆಯಲ್ಲಿ ಏಕಸ್ವಾಮ್ಯವು ತೊಲಗಿಸಲ್ಪಡುವುದಲ್ಲದೆ ಬೆಲೆಗಳಲ್ಲಿ ಇಳಿಕೆಯೂ ಸಾಧ್ಯವಾಗುತ್ತದೆ. ಆತಿಥೇಯ ರಾಷ್ಟ್ರದಲ್ಲಿ ಉದ್ಯಮ ಕ್ಷೇತ್ರದ ಮೂಲಕ ಹರಿದು ಬರುವ ತೆರಿಗೆ ಮೂಲದ ಆದಾಯವು ಕೂಡ ವಿದೇಶಿ ನೇರ ಬಂಡವಾಳ ಹೂಡಿಕೆಯಿಂದಾಗಿ ಹೆಚ್ಚುವುದು. ವಿದೇಶಿ ನೇರ ಬಂಡವಾಳ ಹೂಡಿಕೆಯ ಕುರಿತಾದ ಧನಾತ್ಮಕ ಪರಿಣಾಮಗಳೆಲ್ಲವೂ ತಾತ್ವಿಕವಾಗಿ ಅತ್ಯಂತ ಸಮಂಜಸಕರವಾಗಿ ಕಂಡುಬಂದರೂ ಅವು ನಿಜಕ್ಕೂ ಅದೇ ರೀತಿ ಘಟಿಸುತ್ತವೆಯೇ ಎಂದು ಕೇಳಿದರೆ ವಾಸ್ತವಿಕ ನೆಲಗಟ್ಟಿನಲ್ಲಿ ಇವೆಲ್ಲವೂ ಭಾಗಶಃ ಪರಿಣಾಮಕಾರಿ ಎನ್ನಬೇಕಾಗುತ್ತದೆ. ಕೆಲವೊಮ್ಮೆ ವಿದೇಶಿ ನೇರ ಬಂಡವಾಳ ಹೂಡಿಕೆಯಿಂದಾಗಿ ಅತ್ಯಾಧುನಿಕ ತಂತ್ರಜ್ಞಾನವಾಗಲೀ, ನಿರೀಕ್ಷಿತ ಉದ್ಯೋಗಾವಕಾಶಗಳಾಗಲೀ ಸಾಧ್ಯವಾಗುವುದಿಲ್ಲ. ವಿದೇಶಿ ನೇರ ಹೂಡಿಕೆಯ ಧನಾತ್ಮಕ ಪರಿಣಾಮಗಳಿಂದಾಗಿ ಹಲವಾರು ಮಿತವ್ಯಯದ ಸಾಧ್ಯತೆಗಳೇ ಕಷ್ಟಸಾಧ್ಯವಾಗುವುದೂ ಇದೆ. ವಿದೇಶಿ ನೇರ ಹೂಡಿಕೆಯನ್ನು ಆಕರ್ಷಿಸುವುದಕ್ಕಾಗಿಯೇ ಸರ್ಕಾರಗಳು ಪರಸ್ಪರ ಸ್ಪರ್ಧಾತ್ಮಕವಾಗಿ ಹಲವಾರು ವಿನಾಯಿತಿಗಳನ್ನೂ, ಸವಲತ್ತುಗಳನ್ನೂ ಘೋಷಿಸುತ್ತವೆ. ವಿದೇಶಿ ನೇರ ಹೂಡಿಕೆಯನ್ನು ಆಕರ್ಷಿಸುವುದಕ್ಕಾಗಿ ಅವು ಜಮೀನು, ನೀರು, ವಿದ್ಯುತ್ ಮತ್ತಿತರ ಸಾರ್ವಜನಿಕ ಸೌಲಭ್ಯಗಳನ್ನು ರಿಯಾಯಿತಿ ದರದಲ್ಲಿ ಒದಗಿಸುವುದಷ್ಟೇ ಅಲ್ಲ, ತೆರಿಗೆ ಮುಕ್ತ ಅವಧಿ, ವಿತರಿಸದ ಲಾಭಾಂಶದ ಮೇಲೆ ಕರ ವಿನಾಯಿತಿ, ಲಾಭಾಂಶದಿಂದ ಹೆಚ್ಚುವರಿ ಸವಕಳಿ ಮೊತ್ತ ಕಳೆಯಲು ಅನುಮತಿ ಮುಂತಾದ ಇತರೆ ರಿಯಾಯಿತಿಗಳನ್ನೂ ನೀಡುತ್ತವೆ.

ಆತಿಥೇಯ ರಾಷ್ಟ್ರಗಳು ವಿಪರೀತವಾದ ರಿಯಾಯಿತಿ ಮತ್ತು ಸೌಲಭ್ಯಗಳನ್ನು ಒದಗಿಸಿದ ಹೊರತಾಗಿಯೂ ಕೂಡ ವಿದೇಶಿ ನೇರ ಬಂಡವಾಳವೇನೂ ಎಲ್ಲಾ ರಾಜ್ಯಗಳಿಗೂ ಸಮಾನವಾಗಿ ಮತ್ತು ಸಲೀಸಾಗಿ ಹರಿದು

ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು– 560 056. e-mail : sr_keshava@yahoo.com.

ಬರುವುದಿಲ್ಲ. ಕೆಲವೇ ರಾಷ್ಟ್ರಗಳಲ್ಲಿ ವಿದೇಶಿ ಹೂಡಿಕೆಯು ಕೇಂದ್ರೀಕೃತಗೊಂಡ ಪರಿಸ್ಥಿತಿಯೊಂದು ನಿರ್ಮಾಣಗೊಂಡಿದ್ದು ಇದು ವಿದೇಶಿ ಹೂಡಿಕೆಯ ಒಳಹರಿವಿನಲ್ಲಿ ಜಾಗತಿಕವಾದ ಭಾರೀ ಸಮತೋಲನಕ್ಕೆ ಕೂಡ ಕಾರಣವಾಗಿದೆ. ಇದೇ ಬಗೆಯ ಪರಿಸ್ಥಿತಿ ಭಾರತದೊಳಗಿನ ವಿಭಿನ್ನ ರಾಜ್ಯಗಳ ನಡುವೆಯೂ ಕಂಡು ಬರುತ್ತಿದ್ದು ವಿದೇಶಿ ನೇರ ಹೂಡಿಕೆಯ ಹರಿವು ಪ್ರಾದೇಶಿಕ ಅಸಮತೋಲನಕ್ಕೆ ಕಾರಣವಾಗುವಂತಿದೆ.

### ಪ್ರಮುಖ ಅನುಕೂಲಕರ ಅಂಶಗಳು

ಕೆಲವೇ ಕೆಲವು ರಾಜ್ಯಗಳಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯು ಹೆಚ್ಚಿನ ಪ್ರಮಾಣದಲ್ಲಿದ್ದು ಪ್ರಾದೇಶಿಕ ಅಸಮತೋಲನಕ್ಕೂ ಕಾರಣವಾಗುವ ಮಟ್ಟಿಗೆ ಈ ಹೆಚ್ಚಳ ಸಾಧ್ಯವಾಗುವುದಕ್ಕೆ ಹೂಡಿಕೆದಾರರು ತಮ್ಮ ಹೂಡಿಕೆಯ ಕುರಿತಾದ ನಿರ್ಧಾರವನ್ನು ಕೈಗೊಳ್ಳುವಲ್ಲಿ ಪ್ರಭಾವ ಬೀರುವ ಪ್ರಮುಖ ಅಂಶಗಳು ಕಾರಣವಾಗಿವೆ. ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆ (ಐಎಫ್‌ಸಿ) 2001ರಲ್ಲಿ ವಿದೇಶಿ ನೇರ ಬಂಡವಾಳದ ಹರಿವಿನ ಮೇಲೆ ಪ್ರಧಾನವಾಗಿ ಪ್ರಭಾವ ಬೀರುವ ಅಂಶಗಳೆಂದು ಇವುಗಳನ್ನು ಗುರುತಿಸಿದೆ: ಮಾರುಕಟ್ಟೆಯ ಗಾತ್ರ ಮತ್ತು ಅದರ ಬೆಳವಣಿಗೆಗೆ ಇರುವ ಅವಕಾಶ; ರಾಜಕೀಯ ಮತ್ತು ಆರ್ಥಿಕ ಸ್ಥಿರತೆ; ಇತರ ಪ್ರಮುಖ ಮಾರುಕಟ್ಟೆಗಳೊಂದಿಗೆ ಇರುವ ಕೊಡುಕೊಳ್ಳುವ ಸಂಬಂಧ ಮತ್ತು ಪರಸ್ಪರ ಅಂತರ; ಕುಶಲ(ತರಬೇತಾದ) ಮಾನವ ಸಂಪನ್ಮೂಲದ ಲಭ್ಯತೆ ಹಾಗೂ ವೇತನ ಮಟ್ಟ; ಕೈಗಾರಿಕಾ ಹಾಗೂ ಸಾಂಸ್ಥಿಕ ಮೂಲಭೂತ ಸೌಕರ್ಯಗಳು.

ಹೆಚ್ಚು ಹೆಚ್ಚು ವಿದೇಶಿ ಬಂಡವಾಳವನ್ನು ಆಕರ್ಷಿಸಲು ಮಾರುಕಟ್ಟೆಯ ಗಾತ್ರ, ಮಾನವ ಸಂಪನ್ಮೂಲದ ವೆಚ್ಚ, ನೈಸರ್ಗಿಕ ಸಂಪನ್ಮೂಲಗಳ ಲಭ್ಯತೆ, ಭೌತಿಕ ಮೂಲಭೂತ ಸೌಕರ್ಯಗಳ ಹಾಗೂ ಮಾನವ ಸಂಪನ್ಮೂಲದ ಗುಣಮಟ್ಟ, ಸವಲತ್ತುಗಳು, ಸಾರ್ವತ್ರಿಕವಾದ ಆರ್ಥಿಕ ವಾತಾವರಣ ಹಾಗೂ ಸಾಂಸ್ಥಿಕವಾಗಿ ಸಮೃದ್ಧವಾದ ಚೌಕಟ್ಟು ಮುಖ್ಯ ಎಂಬುದಾಗಿ ಡನ್ನಿಂಗ್ (1993) ಅಧ್ಯಯನವೂ ಸೂಚಿಸುತ್ತದೆ.

ಭಾರತೀಯ ವಿದೇಶ ವ್ಯಾಪಾರ ಸಂಸ್ಥೆ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಫಾರಿನ್ ಟ್ರೇಡ್) 1994ರಲ್ಲಿ ಗುರುತಿಸಿದಂತೆ (1) ಕಾನೂನು ಸುವ್ಯವಸ್ಥೆ (2) ಮೂಲಭೂತ ಸೌಕರ್ಯಗಳು (3) ಸೌಹಾರ್ದಯುತ ಕೈಗಾರಿಕಾ ಸಂಬಂಧಗಳು (4) ನುರಿತ ಹಾಗೂ ಉತ್ಪಾದಕ ಮಾನವ ಸಂಪನ್ಮೂಲ (5) ಸಾಮಾಜಿಕ ಮೂಲಸೌಕರ್ಯಗಳ ಲಭ್ಯತೆ (6) ಹೂಡಿಕೆದಾರರಿಗೆ ಪೂರಕವಾದಂಥ ವಾತಾವರಣ (7) ರಾಜಕೀಯ ಸ್ಥಿರತೆ (8) ವಿದೇಶಿ ಹೂಡಿಕೆಗಳ ಕುರಿತ ವ್ಯಾವಹಾರಿಕ ಕ್ರಮಗಳ ತ್ವರಿತ ವಿಲೇವಾರಿ ಮತ್ತು ಒಡಂಬಡಿಕೆ (9) ಕನಿಷ್ಠ ಪ್ರಮಾಣದ ಆಡಳಿತಾತ್ಮಕ ತೊಡಕುಗಳು ಮತ್ತು (10) ಸವಲತ್ತುಗಳು ಹಾಗೂ ರಿಯಾಯಿತಿಗಳು – ಇವು ವಿದೇಶಿ ನೇರ ಹೂಡಿಕೆಯನ್ನು ನಿರ್ಧರಿಸುವ ಪ್ರಮುಖ ಅಂಶಗಳು.

### ವಿದೇಶಿ ನೇರ ಹೂಡಿಕೆಯನ್ನು ಆಕರ್ಷಿಸುವಲ್ಲಿ ರಾಜ್ಯಗಳ ನಡುವೆ ಸ್ಪರ್ಧೆ

ವಿದೇಶಿ ಬಂಡವಾಳವು ಅಭಿವೃದ್ಧಿಯ ಗತಿಯನ್ನು ತೀವ್ರಗೊಳಿಸುವುದೆಂಬ ನಂಬುಗೆಯಿಂದ ಭಾರತದ ಬಹುತೇಕ ಎಲ್ಲಾ ರಾಜ್ಯಗಳೂ ವಿದೇಶಿ ನೇರ ಬಂಡವಾಳ ಹೂಡಿಕೆಗಾಗಿ ಸವಲತ್ತುಗಳ ಸುದೀರ್ಘ ಸರಣಿಯೊಂದಿಗೆ ಹೂಡಿಕೆದಾರರನ್ನು ಓಲೈಸುವ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗಿದವು. ಈ ಸವಲತ್ತುಗಳೆಂದರೆ, ಬ್ಯಾಂಕುಗಳಿಂದ ರಿಯಾಯಿತಿ ಬಡ್ಡಿದರದ ಸಾಲ, ವಿವಿಧ ಮಾರಾಟ ತೆರಿಗೆ ಮತ್ತು ಎಕ್ಸೈಸ್ ಸುಂಕದಿಂದ ವಿನಾಯಿತಿ, ಕಂತುಗಳಲ್ಲಿ ತೆರಿಗೆ ಪಾವತಿಸುವ ಸೌಲಭ್ಯ, ವಿದ್ಯುಚ್ಛಕ್ತಿ ಮತ್ತಿತರ ಸೌಕರ್ಯಗಳನ್ನು ರಿಯಾಯಿತಿ ದರದಲ್ಲಿ ಪೂರೈಸುವ ವ್ಯವಸ್ಥೆ, ನಿರ್ದಿಷ್ಟ ಅವಧಿಯ ತನಕ ಆಸ್ತಿ ತೆರಿಗೆ ಪಾವತಿಯಿಂದ ವಿನಾಯಿತಿ ಅಥವಾ ಕಡಿತ ಇತ್ಯಾದಿ.

ಹೆಚ್ಚಾಗಿ ರಾಜ್ಯಗಳು ಅಭಿವೃದ್ಧಿಗೆ ಪೂರಕವಾದ ಪ್ರಧಾನ ಕೈಗಾರಿಕೆಗಳೆಂದು ಇವುಗಳನ್ನು ಗುರುತಿಸಿ ವ್ಯವಹಾರ ಆರಂಭಿಸುವುದಕ್ಕೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ತತ್‌ಕ್ಷಣವೇ ಒದಗಿಸಿದ್ದರಿಂದ ಕೈಗಾರಿಕಾ, ಕೃಷಿ ಉತ್ಪನ್ನ ಸಂಸ್ಕರಣಾ ಹಾಗೂ ತಂತ್ರಜ್ಞಾನ ಪಾರ್ಕುಗಳು ಹುಟ್ಟಿಕೊಂಡವು. ಜಮೀನು ನೋಂದಾವಣೆಯಿಂದ ತೊಡಗಿ ಇತರೆಲ್ಲ ಅಗತ್ಯ ಅನುಮತಿ/ಪರವಾನಗಿ ಒದಗಿಸುವುದಕ್ಕಾಗಿ ರಾಜ್ಯಗಳು ಏಕಗವಾಕ್ಷಿ ಸೇವೆಯನ್ನು ಕೂಡ ಆರಂಭಿಸಿದವು.



ಹೆಚ್ಚಿನ ಮತ್ತು ಸುಲಭ ಅನುಸರಣೆಯನ್ನು ಸಾಧ್ಯವಾಗಿಸುವುದಕ್ಕಾಗಿ, ಭ್ರಷ್ಟಾಚಾರವನ್ನು ನಿಯಂತ್ರಿಸಿ ಅಧಿಕ ಪಾರದರ್ಶಕ ಆಡಳಿತವನ್ನು ಸಾಧ್ಯವಾಗಿಸುವುದಕ್ಕಾಗಿ ಹೊರೆಯಾಗಿದ್ದ ನೀತಿ ನಿಯಮಾವಳಿಯ ಸಂಕೀರ್ಣತೆಯನ್ನು ಸರಳಗೊಳಿಸಿದವು ಕೂಡ.

### ಭಾರತದ ರಾಜ್ಯಗಳಲ್ಲಿ ವಿದೇಶಿ ನೇರ ಹೂಡಿಕೆಯ ಒಳಹರಿವು

ಈ ಎಲ್ಲ ಹೆಜ್ಜೆಗಳ ಹೊರತಾಗಿಯೂ ವಿದೇಶಿ ನೇರ ಹೂಡಿಕೆಯ ಒಳಹರಿವಿನಲ್ಲಿ ಭಾರತದ ವಿಭಿನ್ನ ರಾಜ್ಯಗಳಲ್ಲಿ ಭಾರೀ ವೈರುಧ್ಯಗಳಿರುವುದು ಕಂಡುಬರುತ್ತದೆ. ಏಪ್ರಿಲ್ 2000ರಿಂದ ಏಪ್ರಿಲ್ 2013ರ ವರೆಗಿನ ಅವಧಿಯಲ್ಲಿ ದಾಖಲಾದ ವಿದೇಶಿ ಹೂಡಿಕೆಯ ಒಳಹರಿವಿನ ಅಂಕಿಸಂಖ್ಯೆಗಳ ಆಧಾರದ ಮೇಲೆ ಭಾರತದ ರಾಜ್ಯಗಳನ್ನು ಗರಿಷ್ಠ ಒಳಹರಿವಿನ ರಾಜ್ಯಗಳು, ಸಾಮಾನ್ಯ ಒಳಹರಿವಿನ ರಾಜ್ಯಗಳು ಮತ್ತು ಕನಿಷ್ಠ ಒಳಹರಿವಿನ ರಾಜ್ಯಗಳು ಎಂಬುದಾಗಿ ವಿಂಗಡಿಸಲಾಗಿದೆ. (ಕೋಷ್ಟಕ–1 ಗಮನಿಸಿ).

ಮಹಾರಾಷ್ಟ್ರ, ನವದೆಹಲಿ, ತಮಿಳುನಾಡು, ಕರ್ನಾಟಕ, ಗುಜರಾತ್ ಮತ್ತು ಆಂಧ್ರಪ್ರದೇಶ – ಭಾರತದ ಈ ಆರು ರಾಜ್ಯಗಳಲ್ಲಿಯೇ ವಿದೇಶಿ ನೇರ ಹೂಡಿಕೆಯ ಒಳಹರಿವು ಕೇಂದ್ರೀಕೃತಗೊಂಡಿದೆ. ಏಪ್ರಿಲ್ 2000 ದಿಂದ ಜೂನ್ 2014ರ ಅವಧಿಯಲ್ಲಿ ಇವು ಒಟ್ಟು ರೂ. 6,93,641 ಕೋಟಿಗಳಷ್ಟು ವಿದೇಶಿ ನೇರ ಹೂಡಿಕೆಯನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿದ್ದು ಇದು ಭಾರತದಲ್ಲಿ ಹೂಡಲಾದ ಒಟ್ಟು ವಿದೇಶಿ ನೇರ ಬಂಡವಾಳದ 70% ರಷ್ಟು. ಏಪ್ರಿಲ್ 2000 ದಿಂದ ಜೂನ್ 2014ರ ಅವಧಿಯಲ್ಲಿ ಭಾರತದಲ್ಲಿ ಹೂಡಲಾದ ಒಟ್ಟು ವಿದೇಶಿ ನೇರ ಬಂಡವಾಳದ 30% (ರೂ 3,20,281)

| ಕೋಷ್ಟಕ ಸಂಖ್ಯೆ – 1 | | | | |
|---|---|---|---|---|
| ಆರ್ ಬಿ ಐಯ ಪ್ರಾದೇಶಿಕ ಕಚೇರಿ | ಒಳಗೊಂಡಿರುವ ರಾಜ್ಯ | 2013–14 (ಏಪ್ರಿಲ್–ಮಾರ್ಚ್) | ಸಂಚಯಿತ ಒಳಹರಿವು (ಏಪ್ರಿಲ್ 2000–ಜೂನ್ 2014) | ಒಟ್ಟು ಒಳಹರಿವಿನ ಶೇಕಡಾವಾರು |
| ಗರಿಷ್ಠ ವಿದೇಶಿ ನೇರ ಬಂಡವಾಳ ಹೂಡಿಕೆಯಿರುವ ರಾಜ್ಯಗಳು | | | | |
| ಮುಂಬಯಿ | ಮಹಾರಾಷ್ಟ್ರ<br>ದಾದರ್ ಮತ್ತು ನಗರ್ ಹವೇಲಿ<br>ದಮನ್ ಮತ್ತು ದಿಯು | 20,595 | 320,281 | 30 |
| ನವದೆಹಲಿ | ದೆಹಲಿ, ಉತ್ತರಪ್ರದೇಶ ಮತ್ತು ಹರ್ಯಾಣಾದ ಭಾಗಗಳು | 38,190 | 214,820 | 20 |
| ಚೆನ್ನೈ | ತಮಿಳುನಾಡು, ಪಾಂಡಿಚೇರಿ | 12,595 | 69,161 | 6 |
| ಬೆಂಗಳೂರು | ಕರ್ನಾಟಕ | 11,422 | 62,431 | 6 |
| ಅಹಮ್ಮದಾಬಾದ್ | ಗುಜರಾತ್ | 5,282 | 45,292 | 4 |
| ಹೈದರಾಬಾದ್ | ಆಂಧ್ರಪ್ರದೇಶ | 4,024 | 43,817 | 4 |
| ಸಾಮಾನ್ಯ ವಿದೇಶಿ ನೇರ ಹೂಡಿಕೆಯಿರುವ ರಾಜ್ಯಗಳು | | | | |
| ಕೋಲ್ಕತ್ತಾ | ಪಶ್ಚಿಮ ಬಂಗಾಳ, ಸಿಕ್ಕಿಂ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು | 2,659 | 13,532 | 1 |
| ಜೈಪುರ | ರಾಜಸ್ಥಾನ | 233 | 6,360 | 0.6 |
| ಚಂಡೀಗಢ | ಚಂಡೀಗಢ, ಪಂಜಾಬ್, ಹರ್ಯಾಣ, ಹಿಮಾಚಲ ಪ್ರದೇಶ | 562 | 6,148 | 0.6 |
| ಭೋಪಾಲ್ | ಮಧ್ಯಪ್ರದೇಶ, ಛತ್ತೀಸ್‌ಗಢ | 708 | 5,595 | 0.5 |
| ಕೊಚ್ಚಿ | ಕೇರಳ, ಲಕ್ಷದ್ವೀಪ | 411 | 4,875 | 0.4 |
| ಕನಿಷ್ಠ ವಿದೇಶಿ ನೇರ ಹೂಡಿಕೆಯಿರುವ ರಾಜ್ಯಗಳು | | | | |
| ಪಣಜಿ | ಗೋವಾ | 103 | 3,660 | 0.4 |
| ಭುವನೇಶ್ವರ | ಒಡಿಶಾ | 288 | 1,926 | 0.2 |
| ಕಾನ್ಪುರ | ಉತ್ತರಪ್ರದೇಶ, ಉತ್ತರಾಂಚಲ | 150 | 1,962 | 0.2 |
| ಗುವಾಹಟಿ | ಅಸ್ಸಾಂ, ಅರುಣಾಚಲಪ್ರದೇಶ, ಮಣಿಪುರ, ಮೇಘಾಲಯ, ಮಿಜೋರಾಮ್, ನಾಗಾಲ್ಯಾಂಡ್, ತ್ರಿಪುರ | 4 | 352 | 0 |
| ಪಾಟ್ನಾ | ಬಿಹಾರ್, ಜಾರ್ಖಂಡ್ | 9 | 228 | 0 |
| ಉಲ್ಲೇಖಿಸದ ಪ್ರದೇಶಗಳು | 50,283 | 286,604 | 26 | |
| **ಒಟ್ಟು ಮೊತ್ತ** | | **147,518** | **1,076,093** | **100%** |

ಮೂಲ : ಎಸ್ ಇ ಎ ಅಂತರ್ಜಾಲತಾಣದಲ್ಲಿ ಉಪಲಬ್ಧವಿರುವ ಅಂಕಿಸಂಖಿಗಳಿಂದ ಸಂಯೋಜಿಸಲಾಗಿದೆ

| ಕೋಷ್ಟಕ ಸಂಖ್ಯೆ-2 | | | | | | |
|---|---|---|---|---|---|---|
| ರಾಜ್ಯಗಳು | ಒಟ್ಟು ಜನಸಂಖ್ಯೆಗೆ ಜನಸಂಖ್ಯೆಯ ಶೇಕಡಾವಾರು ಅನುಪಾತ | ತಲಾ ಚದರ ಕಿಲೊಮೀಟರಿಗೆ ಜನಸಾಂದ್ರತೆ | ಸಾಕ್ಷರತೆಯ ಶೇಕಡಾವಾರು ಪ್ರಮಾಣ | ವಿಶ್ವವಿದ್ಯಾಲಯಗಳ ಶೇಕಡಾವಾರು (2011-12) | ಕಾಲೇಜುಗಳ ಸಂಖ್ಯೆ | ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆ |
| **ಗರಿಷ್ಠ ವಿದೇಶಿ ನೇರ ಬಂಡವಾಳ ಹೂಡಿಕೆಯಿರುವ ರಾಜ್ಯಗಳು** | | | | | | |
| ಮಹಾರಾಷ್ಟ್ರ | 9.29 | 365 | 82.91 | 44 | 4603 | 1955226 |
| ದೆಹಲಿ | 1.38 | 11,297 | 86.34 | 25 | 184 | 278770 |
| ತಮಿಳುನಾಡು | 5.96 | 555 | 80.33 | 59 | 2309 | 1482277 |
| ಪಾಂಡಿಚೇರಿ | 0.10 | 2.598 | 86.55 | 4 | 83 | 35122 |
| ಕರ್ನಾಟಕ | 5.05 | 319 | 75.6 | 43 | 3281 | 1001473 |
| ಗುಜರಾತ್ | 4.99 | 308 | 79.31 | 37 | 1805 | 893648 |
| ಆಂಧ್ರಪ್ರದೇಶ | 7.00 | 308 | 67.66 | 47 | 4814 | 1847479 |
| **ಸಾಮಾನ್ಯ ವಿದೇಶಿ ನೇರ ಹೂಡಿಕೆಯಿರುವ ರಾಜ್ಯಗಳು** | | | | | | |
| ಪಶ್ಚಿಮ ಬಂಗಾಳ | 7.55 | 1,029 | 77.08 | 26 | 899 | 944075 |
| ರಾಜಸ್ಥಾನ | 5.67 | 201 | 67.06 | 45 | 2652 | 789479 |
| ಚಂಡೀಗಢ | 0.09 | 9,252 | 86.43 | 3 | 24 | 64510 |
| ಮಧ್ಯಪ್ರದೇಶ | 6.00 | 236 | 70.63 | 33 | 2061 | 928939 |
| ಛತ್ತೀಸ್‌ಗಢ | 2.11 | 189 | 71.04 | 17 | 530 | 304381 |
| ಕೇರಳ | 2.76 | 859 | 93.91 | 17 | 962 | 404121 |
| ಲಕ್ಷದ್ವೀಪ | 0.01 | 2,013 | 92.28 | 0 | 3 | 410 |
| **ಕನಿಷ್ಠ ವಿದೇಶಿ ನೇರ ಹೂಡಿಕೆಯಿರುವ ರಾಜ್ಯಗಳು** | | | | | | |
| ಗೋವಾ | 0.12 | 394 | 87.4 | 2 | 49 | 278770 |
| ಒಡಿಶಾ | 3.47 | 269 | 73.45 | 19 | 1089 | 510418 |
| ಉತ್ತರಪ್ರದೇಶ | 16.49 | 828 | 69.72 | 58 | 4849 | 2564886 |
| ಅರುಣಾಚಲ ಪ್ರದೇಶ | 0.11 | 17 | 66.95 | 3 | 26 | 16068 |
| ಮಣಿಪುರ | 0.22 | 122 | 79.85 | 3 | 79 | 33755 |
| ಮೇಘಾಲಯ | 0.24 | 132 | 75.48 | 10 | 61 | 41633 |
| ನಾಗಾಲ್ಯಾಂಡ್ | 0.16 | 119 | 80.11 | 4 | 57 | 20026 |
| ತ್ರಿಪುರ | 0.30 | 350 | 87.75 | 3 | 39 | 32800 |
| ಉತ್ತರಾಂಚಲ | 0.84 | 189 | 79.63 | 20 | 395 | 294485 |
| ಅಸ್ಸಾಂ | 2.58 | 397 | 73.18 | 9 | 485 | 268451 |
| ಬಿಹಾರ | 8.58 | 1,102 | 63.82 | 20 | 649 | 690776 |
| ಜಾರ್ಖಂಡ್ | 2.72 | 414 | 67.63 | 12 | 234 | 274450 |
| **ಭಾರತ** | **100** | **382** | **74.04** | **642** | **34908** | **15956428** |

ಮೂಲ : ಆರ್ಥಿಕ ಸಮೀಕ್ಷೆ, ಜನಗಣತಿಯ ವರದಿ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ವಾರ್ಷಿಕ ವರದಿಗಳನ್ನಾಧರಿಸಿ ಸಿದ್ಧಪಡಿಸಲಾಗಿದೆ.

| ಕೋಷ್ಟಕ–3 | | | | | |
|---|---|---|---|---|---|
| ರಾಜ್ಯಗಳು | ರಾಜ್ಯದ ಒಟ್ಟು ಆಂತರಿಕ ಉತ್ಪಾದನೆ (ನಿವ್ವಳ) 2012–13 (ಕೋಟಿಗಳಲ್ಲಿ) ಪ್ರಸ್ತುತ ಬೆಲೆ ಸೂಚ್ಯಂಕದನ್ವಯ | ರಾಜ್ಯದ ತಲಾ ಆಂತರಿಕ ಉತ್ಪನ್ನ ಸೂಚ್ಯಂಕ 2012–13 (ರೂಪಾಯಿಗಳಲ್ಲಿ) ಪ್ರಸ್ತುತ ಬೆಲೆ ಸೂಚ್ಯಂಕದನ್ವಯ | ರೈಲ್ವೇ ಮಾರ್ಗ (ಕಿಲೊಮೀಟರುಗಳಲ್ಲಿ) 2011–12 | ರಸ್ತೆ ಮಾರ್ಗ (ಕಿಲೊಮೀಟರುಗಳಲ್ಲಿ) 2011–12 | ವಿಮಾನ ನಿಲ್ದಾಣಗಳು (ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸೇರಿದಂತೆ (ಸಂಖ್ಯೆ) 2011–12 |
| **ಗರಿಷ್ಠ ವಿದೇಶಿ ನೇರ ಬಂಡವಾಳ ಹೂಡಿಕೆಯಿರುವ ರಾಜ್ಯಗಳು** | | | | | |
| ಮಹಾರಾಷ್ಟ್ರ | 1239104 | 107670 | 5,602 | 4,257 | 3+9 |
| ದೆಹಲಿ | 332521 | 192587 | 183 | 80 | 1+0 |
| ತಮಿಳುನಾಡು | 671192 | 98550 | 4,062 | 4,943 | 3+3 |
| ಪಾಂಡಿಚೇರಿ | 15887 | 122654 | 11 | 53 | ಅನ್ವಯಿಸದು |
| ಕರ್ನಾಟಕ | 466810 | 77309 | 3,073 | 4,396 | 2+4 |
| ಗುಜರಾತ್ | 584367 | 96976 | 5,271 | 4,032 | 1+7 |
| ಆಂಧ್ರಪ್ರದೇಶ | 678524 | 78958 | 5,264 | 4,537 | 1+2 |
| **ಸಾಮಾನ್ಯ ವಿದೇಶಿ ನೇರ ಹೂಡಿಕೆಯಿರುವ ರಾಜ್ಯಗಳು** | | | | | |
| ಪಶ್ಚಿಮ ಬಂಗಾಳ | 567594 | 62509 | 3,937 | 2681 | 1+2 |
| ರಾಜಸ್ಥಾನ | 410834 | 59097 | 5,784 | 7,130 | 1+0 |
| ಚಂಡೀಗಢ | 232613 | 50691 | 16 | 24 | 1+0 |
| ಮಧ್ಯಪ್ರದೇಶ | 333010 | 44989 | 4,955 | 5,064 | 2+4 |
| ಛತ್ತೀಸ್‌ಗಢ | 131796 | 50691 | 1,187 | 2,289 | 0+2 |
| ಕೇರಳ | 309332 | 88527 | 1,050 | 1,457 | 3+0 |
| **ಕನಿಷ್ಠ ವಿದೇಶಿ ನೇರ ಹೂಡಿಕೆಯಿರುವ ರಾಜ್ಯಗಳು** | | | | | |
| ಗೋವಾ | 29888 | 161822 | 69 | 269 | 1+0 |
| ಒಡಿಶಾ | 210683 | 49241 | 2,461 | 3,704 | 0+7 |
| ಉತ್ತರಪ್ರದೇಶ | 683651 | 33137 | 8,763 | 7818 | 1+0 |
| ಅರುಣಾಚಲ ಪ್ರದೇಶ | 11218 | 78145 | 1 | 2,027 | 0+2 |
| ಮಣಿಪುರ | 10489 | 36474 | 1 | 1,317 | 0+1 |
| ಮೇಘಾಲಯ | 15884 | 59517 | ಅನ್ವಯಿಸದು | 1,171 | 1+0 |
| ನಾಗಾಲ್ಯಾಂಡ್ | 13682 | 65908 | 13 | 494 | 0+1 |
| ತ್ರಿಪುರ | 22453 | 60963 | 151 | 400 | 0+3 |
| ಉತ್ತರಾಂಚಲ | 99157 | 97528 | 345 | 2042 | 0+2 |
| ಅಸ್ಸಾಂ | 126149 | 40475 | 2,434 | 2,940 | 1+3 |
| ಬಿಹಾರ | 287129 | 28774 | 3,612 | 4,106 | 1+2 |
| ಜಾರ್ಖಂಡ್ | 141644 | 44045 | 1,984 | 2,170 | 0+3 |
| **ಭಾರತ** | **8372744** | **67839** | **64,460** | **76818** | **24+64** |

ಮೂಲ : ಆರ್ಥಿಕ ಸಮೀಕ್ಷೆ ಮತ್ತು ಭಾರತೀಯ ವಿಮಾನ ನಿಲ್ದಾಣಗಳ ಅಧಿಕೃತ ಅಂತರ್ಜಾಲತಾಣಗಳಲ್ಲಿ ಲಭ್ಯವಿರುವ ಮಾಹಿತಿಯನ್ನು ಆಧರಿಸಿ ಸಿದ್ಧಪಡಿಸಲಾಗಿದೆ.

| ಕೋಷ್ಟಕ ಸಂಖ್ಯೆ-4 : ಆರ್ಥಿಕ ಸ್ವಾಯತ್ತೆ ಸೂಚ್ಯಂಕ 2013 | | | | | | | | |
|---|---|---|---|---|---|---|---|---|
| ರಾಜ್ಯಗಳು | ಒಟ್ಟಾರೆ ಆರ್ಥಿಕ ಸ್ವಾಯತ್ತೆ ದರ | | ಮಾನವ ಸಂಪನ್ಮೂಲ ಮತ್ತು ವ್ಯವಹಾರ ನಿಯಂತ್ರಣ | | ಕಾನೂನು ನಿಯಂತ್ರಣದ ಚೌಕಟ್ಟು ಮತ್ತು ಸುಭದ್ರತೆ | | ಸರ್ಕಾರದ ಗಾತ್ರ | |
| | ಸಾರ್ವತ್ರಿಕ | ಶ್ರೇಣಿ | ಕ್ಷೇತ್ರ 5 | ಶ್ರೇಣಿ | ಕ್ಷೇತ್ರ 2 | ಶ್ರೇಣಿ | ಕ್ಷೇತ್ರ1 | ಶ್ರೇಣಿ |
| **ಗರಿಷ್ಠ ವಿದೇಶಿ ನೇರ ಬಂಡವಾಳ ಹೂಡಿಕೆಯಿರುವ ರಾಜ್ಯಗಳು** | | | | | | | | |
| ಮಹಾರಾಷ್ಟ್ರ | 0.42 | 11 | 0.43 | 6 | 0.16 | 17 | 0.68 | 3 |
| ತಮಿಳುನಾಡು | 0.54 | 2 | 0.51 | 2 | 0.55 | 2 | 0.57 | 10 |
| ಕರ್ನಾಟಕ | 0.43 | 9 | 0.44 | 5 | 0.35 | 11 | 0.49 | 16 |
| ಗುಜರಾತ್ | 0.65 | 1 | 0.87 | 1 | 0.39 | 9 | 0.69 | 2 |
| ಆಂಧ್ರಪ್ರದೇಶ | 0.50 | 3 | 0.40 | 8 | 0.50 | 4 | 0.59 | 6 |
| **ಸಾಮಾನ್ಯ ವಿದೇಶಿ ನೇರ ಹೂಡಿಕೆಯಿರುವ ರಾಜ್ಯಗಳು** | | | | | | | | |
| ಪಶ್ಚಿಮ ಬಂಗಾಳ | 0.35 | 17 | 0.29 | 17 | 0.14 | 18 | 0.62 | 5 |
| ಮಧ್ಯಪ್ರದೇಶ | 0.47 | 6 | 0.40 | 9 | 0.62 | 1 | 0.38 | 20 |
| ಛತ್ತೀಸ್‌ಗಢ | 0.44 | 8 | 0.39 | 10 | 0.47 | 5 | 0.47 | 18 |
| ಕೇರಳ | 0.42 | 10 | 0.42 | 7 | 0.31 | 13 | 0.53 | 13 |
| ಹಿಮಾಚಲ ಪ್ರದೇಶ | 0.47 | 5 | 0.46 | 3 | 0.33 | 12 | 0.62 | 4 |
| ಪಂಜಾಬ್ | 0.40 | 13 | 0.19 | 20 | 0.43 | 6 | 0.58 | 9 |
| **ಕನಿಷ್ಠ ವಿದೇಶಿ ನೇರ ಹೂಡಿಕೆಯಿರುವ ರಾಜ್ಯಗಳು** | | | | | | | | |
| ಒಡಿಶಾ | 0.36 | 15 | 0.33 | 12 | 0.26 | 14 | 0.50 | 15 |
| ಉತ್ತರಪ್ರದೇಶ | 0.36 | 16 | 0.32 | 13 | 0.37 | 10 | 0.38 | 19 |
| ಅಸ್ಸಾಂ | 0.32 | 19 | 0.26 | 18 | 0.13 | 19 | 0.58 | 8 |
| ಬಿಹಾರ | 0.31 | 20 | 0.30 | 15 | 0.12 | 20 | 0.52 | 14 |
| ಜಾರ್ಖಂಡ್ | 0.33 | 18 | 0.20 | 19 | 0.20 | 16 | 0.59 | 7 |
| ಉತ್ತರಖಂಡ | 0.39 | 14 | 0.46 | 4 | 0.24 | 15 | 0.48 | 17 |

ಮೂಲ : ಭಾರತದ ರಾಜ್ಯಗಳ ಆರ್ಥಿಕ ಸ್ವಾಯತ್ತೆಯ ಶ್ರೇಣೀಕೃತ ಪಟ್ಟಿ 2013

ದಷ್ಟು ಬಂಡವಾಳವನ್ನು ಮಹಾರಾಷ್ಟ್ರ ಒಂದೇ ಆಕರ್ಷಿಸಿದೆ. ಮಹಾರಾಷ್ಟ್ರದ ಒಟ್ಟು ವಿದೇಶಿ ನೇರ ಹೂಡಿಕೆಯ ಸಿಂಹಪಾಲನ್ನು ಮುಂಬಯಿ ನಗರವೇ ಆಕರ್ಷಿಸಿದೆ. ಹೀಗೆ ಮುಂಬಯಿ ಕೇವಲ ವಾಣಿಜ್ಯ ರಾಜಧಾನಿಯಷ್ಟೇ ಅಲ್ಲ, ಅದು ಭಾರತದ ವಿದೇಶಿ ನೇರ ಹೂಡಿಕೆಯ ರಾಜಧಾನಿ ಕೂಡಾ ಆಗಿದೆ.

ಮಹಾರಾಷ್ಟ್ರದ ನಂತರದ ಸ್ಥಾನವನ್ನು ರೂ. 2,14,820 ಕೋಟಿ (20%) ಗಳೊಂದಿಗೆ ನವದೆಹಲಿ, ರೂ.69,161 ಕೋಟಿ (6%)ಗಳೊಂದಿಗೆ ತಮಿಳುನಾಡು, ರೂ 62,431ಕೋಟಿ(6%)ಗಳೊಂದಿಗೆ ಕರ್ನಾಟಕ, ರೂ 45,292 ಕೋಟಿ(4%) ಗಳೊಂದಿಗೆ ಗುಜರಾತ್ ಮತ್ತು ರೂ 43,813 ಕೋಟಿ (4%) ಗಳೊಂದಿಗೆ ತೆಲಂಗಾಣ, ಆಂಧ್ರಪ್ರದೇಶವೂ ಪಡೆಯುತ್ತವೆ.

ಏಪ್ರಿಲ್ 2000ರಿಂದ ಜೂನ್ 2014ರ ಅವಧಿಯಲ್ಲಿ ರೂ.4,500 ಕೋಟಿಗಳಿಂದ ರೂ.40,000 ಕೋಟಿಗಳಷ್ಟು ನೇರ ವಿದೇಶಿ ಹೂಡಿಕೆಯನ್ನು ಆಕರ್ಷಿಸಿದಂಥ ರಾಜ್ಯಗಳನ್ನು ಸಾಮಾನ್ಯ ಹೂಡಿಕೆಯ ರಾಜ್ಯಗಳೆಂದು ವಿಂಗಡಿಸಲಾಗಿದೆ. ಹೀಗೆ ಸಾಮಾನ್ಯ ಮಟ್ಟದ ವಿದೇಶಿ ನೇರ ಹೂಡಿಕೆಯ ಒಳಹರಿವು ಸಾಧಿಸಿದಂಥ ರಾಜ್ಯಗಳೆಂದರೆ ಪಶ್ಚಿಮ ಬಂಗಾಳ, ಸಿಕ್ಕಿಂ, ರಾಜಸ್ಥಾನ, ಪಂಜಾಬ್, ಹರ್ಯಾಣ, ಹಿಮಾಚಲ ಪ್ರದೇಶ, ಮಧ್ಯಪ್ರದೇಶ, ಛತ್ತೀಸ್‌ಗಢ ಮತ್ತು ಕೇರಳ. ಏಪ್ರಿಲ್ 2000ರಿಂದ ಜೂನ್ 2014ರ ಅವಧಿಯಲ್ಲಿ ರೂ.4,500 ಕೋಟಿಗಿಂತಲೂ

ಕಡಿಮೆ ವಿದೇಶಿ ನೇರ ಬಂಡವಾಳದ ಒಳಹರಿವು ದಾಖಲಿಸಿದ ರಾಜ್ಯಗಳನ್ನು ಕನಿಷ್ಠ ವಿದೇಶಿ ನೇರ ಹೂಡಿಕೆಯಿರುವ ರಾಜ್ಯಗಳು ಎಂದು ವಿಂಗಡಿಸಲಾಗಿದೆ. ಈ ವರ್ಗಕ್ಕೆ ಸೇರುವ ರಾಜ್ಯಗಳೆಂದರೆ ಗೋವಾ, ಒಡಿಶಾ, ಅಸ್ಸಾಂ, ಅರುಣಾಚಲ ಪ್ರದೇಶ, ಮಣಿಪುರ, ಮೇಘಾಲಯ, ಮಿಜೊರಾಂ, ನಾಗಾಲ್ಯಾಂಡ್, ತ್ರಿಪುರಾ ಮತ್ತು ಬಿಹಾರ, ಜಾರ್ಖಂಡ್.

ಆಯಾ ರಾಜ್ಯಗಳ ರಾಜಧಾನಿ ನಗರಗಳೇ ಒಟ್ಟು ವಿದೇಶಿ ಹೂಡಿಕೆಯ ಸಿಂಹಪಾಲನ್ನು ಆಕರ್ಷಿಸಿದವು. ಇದರಿಂದ ಸ್ಪಷ್ಟವಾಗುವುದೇನೆಂದರೆ, ಎಲ್ಲಾ ತೆರಿಗೆ ಮತ್ತಿತರ ಆರ್ಥಿಕ ವಿನಾಯಿತಿಗಳ ಹೊರತಾಗಿಯೂ ವಿದೇಶಿ ನೇರ ಹೂಡಿಕೆಯು ಕೆಲವೇ ರಾಜ್ಯಗಳಲ್ಲಿ ಕೇಂದ್ರೀಕೃತವಾಗಿರುವುದು ಮಾತ್ರವಲ್ಲ ಈ ರಾಜ್ಯಗಳಲ್ಲಿಯೂ ಕೆಲವೇ ಕೆಲವು ನಗರಗಳಿಗೆ ಸೀಮಿತವಾಗಿ ನೆಲೆಗೊಂಡಿರುವುದು.

ಇಂಥ ಅಸಮತೋಲನದ ಬೆಳವಣಿಗೆಗೆ ಏನು ಕಾರಣವೆಂದು ತಿಳಿದುಕೊಳ್ಳುವುದಕ್ಕಾಗಿ ಈ ರಾಜ್ಯಗಳ ಸಾಮಾನ್ಯ ಆರ್ಥಿಕ ಲಕ್ಷಣಗಳನ್ನು ನಿರ್ಧರಿಸುವ ಅಂಶಗಳನ್ನು ವಿಶ್ಲೇಷಿಸುವುದು ಅಗತ್ಯ.

**ಅಸಮತೋಲನಕ್ಕೆ ಕಾರಣಗಳು**

ಭಾರತಕ್ಕೆ ಹರಿದು ಬಂದ ವಿದೇಶಿ ನೇರ ಹೂಡಿಕೆಯಲ್ಲಿ ಕಂಡು ಬರುವ ಪ್ರಾದೇಶಿಕ ಅಸಮತೋಲನಕ್ಕೆ ಹಲವಾರು ಕಾರಣಗಳಿದ್ದು ಅವುಗಳಲ್ಲಿ ಪ್ರಮುಖವಾದುವೆಂದರೆ ಬೃಹತ್ ಗಾತ್ರದ ಮಾರುಕಟ್ಟೆ, ನುರಿತ ಸಿಬ್ಬಂದಿಯ ಲಭ್ಯತೆ, ಆರ್ಥಿಕ ಬೆಳವಣಿಗೆ, ಉತ್ತಮ ಮೂಲಭೂತ ಸೌಕರ್ಯಗಳು, ಉಚ್ಚಮಟ್ಟದ ಆರ್ಥಿಕ ಸ್ವಾಯತ್ತತೆ ಮತ್ತು ವಾಣಿಜ್ಯ–ವ್ಯವಹಾರಗಳಿಗೆ ಸುಗಮವೆನ್ನಿಸುವಂಥ ವಾತಾವರಣ.

ಜನಸಂಖ್ಯೆ, ಜನಸಾಂದ್ರತೆ, ಸಾಕ್ಷರತೆ ಮತ್ತು ಉನ್ನತ ವ್ಯಾಸಂಗಕ್ಕೆ ದಾಖಲಾದವರ ಸಂಖ್ಯೆ ಹಾಗೂ ವಿದೇಶಿ ನೇರ ಹೂಡಿಕೆ

ಜನಸಂಖ್ಯೆಯಿಂದ ಗುರುತಿಸಲ್ಪಡುವ ವಿಶಾಲ ವ್ಯಾಪ್ತಿಯ ಮಾರುಕಟ್ಟೆ ವಿದೇಶಿ ನೇರ ಹೂಡಿಕೆಯನ್ನು ಆಕರ್ಷಿಸುತ್ತದೆ. ಸಾಕ್ಷರತೆ, ಉನ್ನತ ವ್ಯಾಸಂಗಕ್ಕೆ ದಾಖಲಾಗುವ ವಿದ್ಯಾರ್ಥಿಗಳ ಅಂಕಿಸಂಖ್ಯೆಗಳು ಮತ್ತು ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳ ಲಭ್ಯತೆಗಳ ಆಧಾರದ ಮೇಲೆ ತತ್ಸಂಬಂಧಿ ರಾಜ್ಯಗಳಲ್ಲಿ ನುರಿತ ಸಿಬ್ಬಂದಿಯ ಲಭ್ಯತೆಯನ್ನು ಅಂದಾಜು ಮಾಡಲಾಗುತ್ತದೆ (ಕೋಷ್ಟಕ 2 ಗಮನಿಸಿ). ಕೆಲವು ವಿದ್ಯಾರ್ಥಿಗಳು ಉನ್ನತ ವ್ಯಾಸಂಗಕ್ಕಾಗಿ ಬೇರೆ ರಾಜ್ಯಗಳಿಗೂ, ಹೊರದೇಶಗಳಿಗೂ ಹೋಗುತ್ತಾರಾದರೂ ಹೆಚ್ಚಿನ ವಿದ್ಯಾರ್ಥಿಗಳು ತಾವಿರುವ ರಾಜ್ಯಗಳಲ್ಲೇ ತಮ್ಮನ್ನು ದಾಖಲಿಸಿಕೊಳ್ಳುತ್ತಾರೆ.

ವಿದೇಶಿ ನೇರ ಹೂಡಿಕೆಯನ್ನು ಒಂದು ದೇಶದ ಜನಸಂಖ್ಯೆ ಸೂಚಿಸುವ ವಿಶಾಲ ವ್ಯಾಪ್ತಿಯ ಮಾರುಕಟ್ಟೆ ಆಕರ್ಷಿಸುತ್ತದೆ. ಭಾರತದ ರಾಜ್ಯಗಳಿಗೆ ಹೋಲಿಸಿದರೆ ಅತ್ಯಂತ ಹೆಚ್ಚು ಜನಸಂಖ್ಯೆಯುಳ್ಳ ರಾಜ್ಯ ಉತ್ತರಪ್ರದೇಶ (16.49%), ಆದರೆ ದೇಶದಲ್ಲಿ ಅದು ತನ್ನತ್ತ ಸೆಳೆದುಕೊಂಡಿರುವ ವಿದೇಶಿ ಹೂಡಿಕೆ ಅತ್ಯಲ್ಪವಾದುದು. ಬಿಹಾರ (8.58%) ಮತ್ತು ರಾಜಸ್ಥಾನ(6.69%)ದ ವಿಚಾರದಲ್ಲೂ ಹೀಗೆಯೇ ಆಗಿದೆ.

ಆದರೆ, ಮಹಾರಾಷ್ಟ್ರ(9.29%)ದ ವಿಷಯದಲ್ಲಿ ಜನಸಂಖ್ಯೆಯ ಗಾತ್ರವು ಧನಾತ್ಮಕವಾದ ಪರಿಣಾಮವನ್ನುಂಟು ಮಾಡಿರುವುದು ಕಂಡುಬರುತ್ತದೆ. ಅದು ದೇಶದಲ್ಲಿ ಎರಡನೆಯ ಅತ್ಯಂತ ಹೆಚ್ಚು ಜನಸಂಖ್ಯೆಯುಳ್ಳ ರಾಜ್ಯವಾಗಿದ್ದು ದೇಶದಲ್ಲಿ ಅತಿ ಹೆಚ್ಚು ವಿದೇಶಿ ನೇರ ಹೂಡಿಕೆಯನ್ನೂ ಆಕರ್ಷಿಸಿರುವಂಥ ರಾಜ್ಯವಾಗಿದೆ.

ಗರಿಷ್ಠ ವಿದೇಶಿ ನೇರ ಹೂಡಿಕೆ ಹೊಂದಿರುವ ಇತರ ರಾಜ್ಯಗಳಾದ ತಮಿಳುನಾಡು(5.96%), ಕರ್ನಾಟಕ (5.05%) ಮತ್ತು ಗುಜರಾತ್ (4.99%) ಕೂಡ ಸಾಕಷ್ಟು ಜನಸಂಖ್ಯೆಯುಳ್ಳ ರಾಜ್ಯಗಳೇ ಆಗಿವೆ. ದೆಹಲಿ (1.38%) ಮತ್ತು ಪಾಂಡಿಚೇರಿ (0.10%) ರಾಜ್ಯಗಳಷ್ಟೇ ಅಪವಾದಗಳೆನ್ನಬಹುದು.

ಒಂದು ರಾಜ್ಯದಲ್ಲಿ ಉತ್ಪಾದನೆಯಾಗುವ ಸಾಮಗ್ರಿಗಳನ್ನು ಹಾಗೂ ಸೇವಾಸೌಲಭ್ಯಗಳನ್ನು ಕೂಡ ಭಾರತದ ಇನ್ನೊಂದು ರಾಜ್ಯದಲ್ಲಿ ಲಭ್ಯವಾಗುವಂತೆ ಮಾಡುವುದು ಅತ್ಯಂತ ಸುಲಭವಾಗಿರುವುದರಿಂದ ರಾಜ್ಯದ ಜನಸಂಖ್ಯೆಯೇನೂ ವಿದೇಶಿ ನೇರ ಹೂಡಿಕೆಯನ್ನು ಆಕರ್ಷಿಸುವಲ್ಲಿ ಪ್ರಧಾನವಾದ ಪಾತ್ರವನ್ನು ವಹಿಸುವ ಅಂಶವಾಗಿಲ್ಲ.



ಜನಸಾಂದ್ರತೆಯು ಒಂದು ಚದರ ಕಿಲೊಮೀಟರ್ ವ್ಯಾಪ್ತಿಯಲ್ಲಿ ವಾಸ್ತವ್ಯ ಹೂಡಿರುವ ಜನಸಂಖ್ಯೆಯ ಸಾಂದ್ರತೆ ಎಷ್ಟೆಂಬುದನ್ನು ಸೂಚಿಸುತ್ತದೆ. ಜನಸಾಂದ್ರತೆ ಹೆಚ್ಚಿದ್ದಷ್ಟೂ ಕೈಗಾರಿಕೆ ಮತ್ತು ಇತರ ಮೂಲಭೂತ ಸೌಕರ್ಯಗಳ ಅಭಿವೃದ್ಧಿಪರ ಕಾರ್ಯಕ್ರಮಗಳಿಗೆ ವಿಶಾಲವಾದ ಭೂಪ್ರದೇಶವನ್ನು ಹೊಂದಿಸಿಕೊಳ್ಳುವ ಸಾಧ್ಯತೆಗಳು ಕಡಿಮೆಯಾಗುತ್ತವೆ. ದೆಹಲಿಯ ಜನಸಾಂದ್ರತೆಯು ಪ್ರತಿ ಚದರ ಕಿಲೊಮೀಟರಿಗೆ 11,297 ಮಂದಿಯಷ್ಟು ಗರಿಷ್ಠವಾಗಿದ್ದಾಗ್ಯೂ ಅದು ಭಾರೀ ಪ್ರಮಾಣದ ವಿದೇಶಿ ನೇರ ಹೂಡಿಕೆಯನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಲು ಕಾರಣವೇನೆಂದರೆ, ಅದು ಉಪನಗರದಂತಿರುವ, ಬೇರೆ ರಾಜ್ಯಗಳಿಗೆ ಸೇರಿದ್ದರೂ ರಾಷ್ಟ್ರೀಯ ರಾಜಧಾನಿಯ ಪ್ರದೇಶವೆಂದೇ ಪರಿಗಣಿಸಲ್ಪಡುವಂಥ, ದೆಹಲಿಯ ಹೊರಭಾಗಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುತ್ತಿದೆ. ಉದಾಹರಣೆಗೆ, ಉತ್ತರ ಪ್ರದೇಶದ ನೊಯಿಡಾ ಮತ್ತು ಘಾಜಿಯಾಬಾದ್, ಹರ್ಯಾಣದ ಗುರ್‌ಗಾಂವ್, ಫರಿದಾಬಾದ್, ಬಹಾದುರ್‌ಘರ್. ಇನ್ನಿತರ ಗರಿಷ್ಠ ವಿದೇಶಿ ಹೂಡಿಕೆಯ ರಾಜ್ಯಗಳಲ್ಲಿ ಜನಸಾಂದ್ರತೆಯು ಪ್ರತಿ ಚದರ ಕಿಲೋಮೀಟರಿಗೆ 308 ರಿಂದ 555ರಷ್ಟು ಮಂದಿಯಷ್ಟಿದೆ. ಸಾಮಾನ್ಯ ಪ್ರಮಾಣದಲ್ಲಿ ವಿದೇಶಿ ಹೂಡಿಕೆಯಿರುವ ರಾಜ್ಯಗಳಲ್ಲಿ ಜನಸಾಂದ್ರತೆಯು ಪ್ರತಿ ಚದರ ಕಿಲೊಮೀಟರಿಗೆ 189 ರಿಂದ 9252 ಮಂದಿಯಷ್ಟಿದೆ. ಕನಿಷ್ಠ ವಿದೇಶಿ ಹೂಡಿಕೆಯಿರುವ ರಾಜ್ಯಗಳಲ್ಲಿ ಸಾಮಾನ್ಯವಾದ, ಅಂದರೆ 17 ರಿಂದ 1102 ಮಂದಿಯಷ್ಟು ಜನಸಾಂದ್ರತೆಯಿದೆ.

ಇದರಿಂದಾಗಿ ವಿದೇಶಿ ನೇರ ಹೂಡಿಕೆಯ ಮೇಲೆ ಜನಸಾಂದ್ರತೆಯ ಪ್ರಭಾವವು ಗಣನೀಯವಾಗಿಲ್ಲ ಎಂಬುದು ತಿಳಿಯುತ್ತದೆ.

ಸಾಕ್ಷರತೆಯೆಂಬುದು ಇನ್ನೊಂದು ಪ್ರಮುಖ ಸೂಚಕವಾಗಿದ್ದು ಇದನ್ನು ಪರಿಣತಿಯ ಪರ್ಯಾಯ ಪದವೆಂಬಂತೆ ಪರಿಗಣಿಸಬಹುದು.

ಆಂಧ್ರಪ್ರದೇಶ (67.66%) ವೊಂದನ್ನು ಹೊರತು ಪಡಿಸಿ, ಗರಿಷ್ಠ ವಿದೇಶಿ ಹೂಡಿಕೆಯಿರುವ ಉಳಿದೆಲ್ಲಾ ರಾಜ್ಯಗಳಲ್ಲಿಯೂ ಸಾಕ್ಷರತೆಯ ಪ್ರಮಾಣ 74.04% ದ ರಾಷ್ಟ್ರೀಯ ಸರಾಸರಿಗಿಂತ ಮೇಲಿದೆ. ಸಾಮಾನ್ಯ ಪ್ರಮಾಣದ ವಿದೇಶಿ ನೇರ ಹೂಡಿಕೆಯಿರುವ ರಾಜ್ಯಗಳಲ್ಲಿಯೂ ಮಧ್ಯಪ್ರದೇಶ, ರಾಜಸ್ಥಾನ ಮತ್ತು ಛತ್ತೀಸ್‌ಗಢ ರಾಜ್ಯಗಳನ್ನು ಹೊರತು ಪಡಿಸಿ ಉಳಿದೆಲ್ಲಾ ರಾಜ್ಯಗಳಲ್ಲಿ ಸಾಕ್ಷರತೆಯ ಪ್ರಮಾಣ ರಾಷ್ಟ್ರೀಯ ಸರಾಸರಿಗಿಂತ ಮೇಲೆಯೇ ಇದೆ.

ಕನಿಷ್ಠ ವಿದೇಶಿ ಹೂಡಿಕೆಯಿರುವ ರಾಜ್ಯಗಳಾದ ಒಡಿಶಾ, ಉತ್ತರಪ್ರದೇಶ, ಅರುಣಾಚಲ ಪ್ರದೇಶ, ಅಸ್ಸಾಂ, ಬಿಹಾರ ಮತ್ತು ಜಾರ್ಖಂಡ್ ರಾಜ್ಯಗಳಲ್ಲಿ ಸಾಕ್ಷರತೆಯ ಪ್ರಮಾಣ ರಾಷ್ಟ್ರೀಯ ಸರಾಸರಿಗಿಂತ ಕಡಿಮೆಯಿದೆ.

ಗರಿಷ್ಠ ವಿದೇಶಿ ಹೂಡಿಕೆಯಿರುವ ರಾಜ್ಯಗಳಲ್ಲಿ 259 ವಿಶ್ವವಿದ್ಯಾಲಯಗಳೂ (40.3%), 17,079 ಕಾಲೇಜುಗಳೂ(48.9%) ಇದ್ದು ಒಟ್ಟು 74,93,995 ವಿದ್ಯಾರ್ಥಿಗಳು (46.9%) ಉನ್ನತ ವ್ಯಾಸಂಗಕ್ಕಾಗಿ ದಾಖಲಿಸಿಕೊಂಡಿದ್ದರೆ, ಸಾಮಾನ್ಯ ಪ್ರಮಾಣದ ವಿದೇಶಿ ನೇರ ಹೂಡಿಕೆಯಿರುವ ರಾಜ್ಯಗಳಲ್ಲಿ 141 ವಿಶ್ವವಿದ್ಯಾಲಯಗಳಿದ್ದು (21.19%) 7,131 ಕಾಲೇಜುಗಳಿವೆ (20.4%) ಮತ್ತು ಒಟ್ಟು 34,35,915 ವಿದ್ಯಾರ್ಥಿಗಳು (21.5%) ಉನ್ನತ ವ್ಯಾಸಂಗಕ್ಕೆ ನೊಂದಾಯಿಸಿಕೊಂಡಿರುತ್ತಾರೆ.

ಕನಿಷ್ಠ ಪ್ರಮಾಣದ ವಿದೇಶಿ ನೇರ ಹೂಡಿಕೆಯ ರಾಜ್ಯಗಳಲ್ಲಿ 163 ವಿಶ್ವವಿದ್ಯಾಲಯಗಳೂ (25.3%), 8,012 ಕಾಲೇಜುಗಳೂ (22.9%) ಇದ್ದು ಒಟ್ಟು 50,26,518 ವಿದ್ಯಾರ್ಥಿಗಳು (31.5%) ಉನ್ನತ ವ್ಯಾಸಂಗಕ್ಕಾಗಿ ನೋಂದಾಯಿಸಿಕೊಂಡಿದ್ದಾರೆ.

ಇದರಿಂದ ರಾಜ್ಯದೊಳಕ್ಕೆ ವಿದೇಶಿ ನೇರ ಹೂಡಿಕೆಯ ಒಳಹರಿವಿನ ಮೇಲೆ ನುರಿತ ಕೆಲಸಗಾರರ ಲಭ್ಯತೆಯ ಪ್ರಭಾವವು ಸಾಕಷ್ಟಿದೆ ಎನ್ನುವುದು ತಿಳಿದು ಬರುತ್ತದೆ.

### ಆರ್ಥಿಕ ಅಭಿವೃದ್ಧಿ, ಮೂಲಭೂತ ಸೌಕರ್ಯಗಳು ಮತ್ತು ವಿದೇಶಿ ನೇರ ಹೂಡಿಕೆ

ಗರಿಷ್ಠ ವಿದೇಶಿ ನೇರ ಹೂಡಿಕೆಯಿರುವ ರಾಜ್ಯಗಳಲ್ಲಿ ಸಾಮಾನ್ಯ ಪ್ರಮಾಣದ ಹಾಗೂ ಕನಿಷ್ಠ ಪ್ರಮಾಣದ ಹೂಡಿಕೆಯಿರುವ ರಾಜ್ಯಗಳಿಗಿಂತ ಗರಿಷ್ಠ ಆಂತರಿಕ ಉತ್ಪನ್ನ ಸೂಚ್ಯಂಕ, ತಲಾ ಉತ್ಪನ್ನ ಸೂಚ್ಯಂಕ ಮತ್ತು ಸಾಕಷ್ಟು ರೈಲು ಹಾಗೂ ರಸ್ತೆ ಮಾರ್ಗಗಳೇ ಮುಂತಾದ ಅತ್ಯುತ್ತಮ ಮೂಲಭೂತ ಸೌಕರ್ಯಗಳು ಇದ್ದಿರುವುದು ಕಂಡು ಬರುತ್ತದೆ (ಕೋಷ್ಟಕ ಸಂಖ್ಯೆ 3 ಗಮನಿಸಿ).

ಸಾಮಾನ್ಯ ಪ್ರಮಾಣದ ವಿದೇಶಿ ನೇರ ಹೂಡಿಕೆಯಿರುವ ಪಶ್ಚಿಮ ಬಂಗಾಳ, ಕೇರಳ ಮತ್ತು ಮಧ್ಯಪ್ರದೇಶ ರಾಜ್ಯಗಳು ಆರ್ಥಿಕ ಅಭಿವೃದ್ಧಿ ಮತ್ತು ಮೂಲಭೂತ ಸೌಕರ್ಯಗಳನ್ನು ಉತ್ತಮಪಡಿಸುವಲ್ಲಿ ಸಾಕಷ್ಟು ಪ್ರಗತಿ ಸಾಧಿಸುತ್ತಿದ್ದು ವಿದೇಶಿ ಹೂಡಿಕೆಗಳನ್ನು ಆಕರ್ಷಿಸುವಲ್ಲಿ ಗಮನಾರ್ಹ ಸ್ಥಾನವನ್ನು ಪಡೆಯುತ್ತಿವೆ. ಕನಿಷ್ಠ ವಿದೇಶಿ ಹೂಡಿಕೆಯಿರುವ ರಾಜ್ಯಗಳಲ್ಲಿ ಗೋವಾ, ಉತ್ತರಾಂಚಲ ಮತ್ತು ಅರುಣಾಚಲ ಪ್ರದೇಶಗಳನ್ನು ಹೊರತು ಪಡಿಸಿ ಉಳಿದೆಡೆಗಳಲ್ಲಿ ತಲಾ ಉತ್ಪನ್ನದ ಸೂಚ್ಯಂಕವು ಇತರ ರಾಜ್ಯಗಳಿಗಿಂತ ಕಡಿಮೆಯಿದೆ. ರೈಲ್ವೇ ಮತ್ತು ರಸ್ತೆಗಳ ಉದ್ದ ಒಡಿಶಾ, ಉತ್ತರ ಪ್ರದೇಶ, ಅಸ್ಸಾಂ, ಬಿಹಾರ ಮತ್ತು ಜಾರ್ಖಂಡ್ ರಾಜ್ಯಗಳಲ್ಲಿ ಗಣನೀಯವಾಗಿದ್ದೂ ರಾಜ್ಯದ ಗಾತ್ರಕ್ಕೆ ಹೋಲಿಸಿದಲ್ಲಿ ಅವು ಸಾಧಾರಣ ಎನಿಸಿಕೊಳ್ಳುವ ಮಟ್ಟದಲ್ಲಿವೆ.

ವಿದೇಶಿ ನೇರ ಹೂಡಿಕೆಯ ಒಳಹರಿವು ಮತ್ತು ಆರ್ಥಿಕ ಪ್ರಗತಿ, ಮೂಲಭೂತ ಸೌಕರ್ಯಗಳ ಮಟ್ಟ – ಇವುಗಳ ನಡುವೆ ಪರಸ್ಪರ ಪೂರಕವಾದಂಥ ಸಂಬಂಧ ಇರುವುದು ಕಂಡುಬರುತ್ತದೆ. ಅದು ಈ ರಾಜ್ಯಗಳ ಅಭಿವೃದ್ಧಿಯನ್ನೂ ತ್ವರಿತಗೊಳಿಸುವಲ್ಲಿ ಸಹಾಯಕವಾಗುವುದಾದರೂ ಪ್ರಾದೇಶಿಕ ಅಸಮತೋಲನಕ್ಕೆ ಕೂಡ ಕಾರಣವಾಗುತ್ತದೆ.

### ಆರ್ಥಿಕ ಸ್ವಾಯತ್ತತೆಯ ಸೂಚ್ಯಂಕ ಹಾಗೂ ವಿದೇಶಿ ನೇರ ಹೂಡಿಕೆ

ಒಂದು ದೇಶದಲ್ಲಿ ಮತ್ತು ಆ ದೇಶದ ರಾಜ್ಯಗಳಲ್ಲಿ ವ್ಯಕ್ತಿಗತ ಸಂಪತ್ತು ಕ್ರೋಢೀಕರಿಸುವ ಚಟುವಟಿಕೆಗಳ ಮೇಲೆ



ಸರ್ಕಾರದ ನಿಯಂತ್ರಣದ ಪ್ರಮಾಣ ಮತ್ತು ನಿಯಂತ್ರಕ ಅಧಿನಿಯಮಗಳ ಸಂಖ್ಯೆ ಹೇಗಿದೆ/ ಎಷ್ಟಿದೆ ಎನ್ನುವುದನ್ನು ಸೂಚಿಸುವಂಥ ಆರ್ಥಿಕ ಸ್ವಾಯತ್ತತೆಯ ಸೂಚ್ಯಂಕವು ಆಯಾ ದೇಶ ಮತ್ತು ದೇಶದೊಳಗಿನ ರಾಜ್ಯಗಳನ್ನು ಸೂಕ್ತ ಶ್ರೇಣಿಯಲ್ಲಿ ವರ್ಗೀಕರಿಸುತ್ತದೆ. ಅದಕ್ಕನುಗುಣವಾಗಿ ಒಟ್ಟಾರೆ ಆರ್ಥಿಕ ಸ್ವಾಯತ್ತೆ (ಕೋಷ್ಟಕ ಸಂಖ್ಯೆ 4 ಗಮನಿಸಿ) ಯಲ್ಲಿ ಗುಜರಾತ್ ರಾಜ್ಯವು ಮೊತ್ತ ಮೊದಲ ಶ್ರೇಣಿಯನ್ನು ಪಡೆದಿದೆ. ಅದು ನೌಕರಶಾಹಿ ಮತ್ತು ವ್ಯವಹಾರ ನಿಯಂತ್ರಣದ ಕ್ಷೇತ್ರದಲ್ಲಿಯೂ ಮೊದಲ ಶ್ರೇಣಿಯನ್ನು ಪಡೆದಿದೆ. ಆದರೆ ಸರ್ಕಾರದ ಗಾತ್ರದ ವಿಚಾರದಲ್ಲಿ ದ್ವಿತೀಯ ಮತ್ತು ಕಾನೂನು ಚೌಕಟ್ಟು ಹಾಗೂ ಸಂರಕ್ಷಣೆಯ ವಿಚಾರದಲ್ಲಿ ನಾಲ್ಕನೆಯ ಶ್ರೇಣಿಯನ್ನು ಪಡೆದಿದೆ. ಇತರೆಲ್ಲಾ ಗರಿಷ್ಠ ವಿದೇಶಿ ನೇರ ಹೂಡಿಕೆಯಿರುವ ರಾಜ್ಯಗಳೂ ಕೂಡ ಮೊದಲ 11 ಶ್ರೇಣಿಯೊಳಗೇ ಸ್ಥಾನ ಪಡೆದುಕೊಂಡಿವೆ. ಆರ್ಥಿಕ ಸ್ವಾಯತ್ತೆಯ ಪರಿಮಾಣ ಸೂಚ್ಯಂಕಕ್ಕೆ ಸಂಬಂಧಿಸದಂತೆ ತಮಿಳುನಾಡು ದ್ವಿತೀಯ, ಆಂಧ್ರಪ್ರದೇಶ ಮೂರನೆಯ, ಕರ್ನಾಟಕ ಒಂಭತ್ತನೆಯ ಹಾಗೂ ಮಹಾರಾಷ್ಟ್ರ ಹನ್ನೊಂದನೆಯ ಶ್ರೇಣಿಯನ್ನು ತಮ್ಮದಾಗಿಸಿಕೊಂಡಿವೆ. ಅತಿದೊಡ್ಡ ಅಚ್ಚರಿಯೆಂದರೆ, ಆರ್ಥಿಕ ಸ್ವಾಯತ್ತೆ ಪ್ರಮಾಣ ಸೂಚ್ಯಂಕ ಶ್ರೇಣಿಯಲ್ಲಿ ಹನ್ನೊಂದನೆಯ ಸ್ಥಾನದಲ್ಲಿರುವ ಮಹಾರಾಷ್ಟ್ರ ರಾಜ್ಯವು ಭಾರತದ ಒಟ್ಟು ವಿದೇಶಿ ನೇರ ಹೂಡಿಕೆಯ 30% ದಷ್ಟು ದೊಡ್ಡ ಪಾಲನ್ನು ತನ್ನತ್ತ ಸೆಳೆದುಕೊಂಡಿರುವುದು.

ಸಾಮಾನ್ಯ ಪ್ರಮಾಣದ ವಿದೇಶಿ ಹೂಡಿಕೆಯಿರುವ ರಾಜ್ಯಗಳಲ್ಲಿ ಹಿಮಾಚಲ ಪ್ರದೇಶವು ಐದನೆಯ, ಮಧ್ಯಪ್ರದೇಶ ಆರನೆಯ, ಚಂಡೀಗಢ ಎಂಟನೆಯ, ಕೇರಳ ಹತ್ತನೆಯ, ಪಂಜಾಬ್ ಹದಿಮೂರನೆಯ ಮತ್ತು ಪಶ್ಚಿಮ ಬಂಗಾಳ ಹದಿನೇಳನೆಯ

ಶ್ರೇಣಿಯನ್ನು ಪಡೆದುಕೊಂಡಿವೆ. ಇದರಿಂದಾಗಿ ಇಲ್ಲಿ ವಿದೇಶಿ ನೇರ ಹೂಡಿಕೆಯೂ ಕ್ರಮೇಣ ಹೆಚ್ಚುತ್ತಿದೆ. ಕನಿಷ್ಠ ವಿದೇಶಿ ಹೂಡಿಕೆಯಿರುವ ರಾಜ್ಯಗಳಲ್ಲಿ ಆರ್ಥಿಕ ಸ್ವಾಯತ್ತೆಯ ಪ್ರಮಾಣ ಸೂಚ್ಯಂಕವು ತೃಪ್ತಿಕರವಾಗಿಲ್ಲ.

ಹೀಗೆ ವಿದೇಶಿ ನೇರ ಹೂಡಿಕೆಯ ಒಳಹರಿವಿನ ಮೇಲೆ ರಾಜ್ಯದ ಆರ್ಥಿಕ ಸ್ವಾಯತ್ತೆ ಪ್ರಮಾಣ ಸೂಚ್ಯಂಕದ ಪ್ರಭಾವವು ಸಾಕಷ್ಟಿದೆ ಎಂಬುದಾಗಿ ಕಂಡುಬರುವುದು.

**ವಿದ್ಯುಚ್ಛಕ್ತಿ ಮತ್ತು ವಿದೇಶಿ ನೇರ ಹೂಡಿಕೆ**

ಸಾಕಷ್ಟು ಪ್ರಮಾಣದಲ್ಲಿ ಮತ್ತು ಉತ್ತಮ ಗುಣಮಟ್ಟದ ವಿದ್ಯುಚ್ಛಕ್ತಿಯ ಲಭ್ಯತೆಯು ಹೆಚ್ಚಿನ ವಿದೇಶಿ ನೇರ ಹೂಡಿಕೆಯನ್ನು ಆಕರ್ಷಿಸುವಲ್ಲಿ ಪ್ರಧಾನ ಪಾತ್ರವಹಿಸುವುದು. ಭಾರತದ ಗರಿಷ್ಠ ವಿದೇಶಿ ಹೂಡಿಕೆಯ ರಾಜ್ಯಗಳಲ್ಲಿಯೂ ಅಧಿಕ ಪ್ರಮಾಣದ ವಿದ್ಯುತ್ ಉತ್ಪಾದಕ ಘಟಕಗಳಿವೆ.

ಅತಿಹೆಚ್ಚು ವಿದೇಶಿ ನೇರ ಬಂಡವಾಳ ಹೂಡಿಕೆಯನ್ನು ಪಡೆದಿರುವ ಮಹಾರಾಷ್ಟ್ರವು ಭಾರತೀಯ ರಾಜ್ಯಗಳಲ್ಲಿಯೇ ಅತ್ಯಂತ ಗರಿಷ್ಠ ಪ್ರಮಾಣದ, ಅಂದರೆ 2012–13ರ ಅಂಕಿಸಂಖ್ಯೆಗಳ ಪ್ರಕಾರ 23.73 ಗಿಗಾ ವ್ಯಾಟ್ ವಿದ್ಯುಚ್ಛಕ್ತಿ ಉತ್ಪಾದಕ ಸಾಮರ್ಥ್ಯವನ್ನು ಹೊಂದಿದೆ.

ತದನಂತರದ ಸ್ಥಾನದಲ್ಲಿ ಗುಜರಾತ್ 22.79 ಗಿಗಾ ವ್ಯಾಟ್ಸ್, ತಮಿಳುನಾಡು 15.60 ಗಿಗಾ ವ್ಯಾಟ್ಸ್, ಆಂಧ್ರಪ್ರದೇಶ 13.79 ಗಿಗಾ ವ್ಯಾಟ್ಸ್ ಮತ್ತು ಕರ್ನಾಟಕ 12.13 ಗಿಗಾ ವ್ಯಾಟ್ಸ್ ಉತ್ಪಾದಕ ಸಾಮರ್ಥ್ಯವನ್ನು ಹೊಂದಿದ್ದು ಮಂಚೂಣಿಯಲ್ಲಿರುವ ವಿದೇಶಿ ಹೂಡಿಕೆಯ ರಾಜ್ಯಗಳಾಗಿವೆ. ಸಾಮಾನ್ಯ ಪ್ರಮಾಣದ ವಿದೇಶಿ ಹೂಡಿಕೆಯನ್ನು ದಾಖಲಿಸಿರುವ ರಾಜ್ಯಗಳಾದ ರಾಜಸ್ಥಾನ 9.86 ಗಿಗಾ ವ್ಯಾಟ್ಸ್, ಪಶ್ಚಿಮ ಬಂಗಾಳ 7.57 ಗಿಗಾ ವ್ಯಾಟ್ಸ್, ಮಧ್ಯಪ್ರದೇಶ 6.32 ಗಿಗಾ ವ್ಯಾಟ್ಸ್, ಛತ್ತೀಸ್‌ಗಢ 4.03 ಗಿಗಾ ವ್ಯಾಟ್ಸ್ ಮತ್ತು ಕೇರಳ 2.49 ಗಿಗಾ ವ್ಯಾಟ್ಸ್ ವಿದ್ಯುತ್ ಉತ್ಪಾದಕ ಸಾಮರ್ಥ್ಯವನ್ನು ಹೊಂದಿದ್ದು ತಮ್ಮ ತಮ್ಮ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವತ್ತ ಗಮನ ಹರಿಸಿವೆ. ಕನಿಷ್ಠ ವಿದೇಶಿ ನೇರ ಹೂಡಿಕೆಯ ರಾಜ್ಯಗಳಲ್ಲಿ ಉತ್ತರ ಪ್ರದೇಶ (9.36 ಗಿಗಾ ವ್ಯಾಟ್ಸ್) ಮತ್ತು ಒಡಿಶಾ (5.33 ಗಿಗಾ ವ್ಯಾಟ್ಸ್) ರಾಜ್ಯಗಳನ್ನು ಹೊರತು ಪಡಿಸಿದರೆ ಉಳಿದೆಲ್ಲಾ ರಾಜ್ಯಗಳಲ್ಲಿ ಒಂದು ಗಿಗಾ ವ್ಯಾಟ್ಸ್ ಗಿಂತಲೂ ಕಡಿಮೆ ಪ್ರಮಾಣದ ಉತ್ಪಾದಕ ಸಾಮರ್ಥ್ಯವಷ್ಟೇ ಇದೆ.

ರಾಜ್ಯಗಳ ವಿದ್ಯುತ್ ಉತ್ಪಾದಕ ಸಾಮರ್ಥ್ಯದೊಂದಿಗೆ ವಿದೇಶಿ ನೇರ ಹೂಡಿಕೆಯು ಪರಸ್ಪರ ಪೂರಕ ಸಂಬಂಧ ಹೊಂದಿರುವುದು ಇದರಿಂದ ಕಂಡುಬರುತ್ತದೆ.

**ಉಪಸಂಹಾರ**

ಒಟ್ಟು ವಿದೇಶಿ ನೇರ ಹೂಡಿಕೆಯ 70% ದಷ್ಟು ಆರು ರಾಜ್ಯಗಳಲ್ಲೇ ಕೇಂದ್ರೀಕೃತ ಗೊಂಡಂತಿರುವುದು ಮತ್ತಷ್ಟು ಪ್ರಾದೇಶಿಕ ಅಸಮತೋಲನಕ್ಕೆ ಕಾರಣವಾಗಿದೆ. ಅಧ್ಯಯನದಿಂದ ತಿಳಿದುಬಂದಂತೆ ಜನಸಾಂದ್ರತೆಯಿಂದ ವಿದೇಶಿ ಹೂಡಿಕೆಯ ಒಳಹರಿವಿನ ಮೇಲೆ ಅಂಥಾ ಪರಿಣಾಮವೇನೂ ಉಂಟಾಗಿಲ್ಲ. ಆದರೆ ನುರಿತ ಕೆಲಸಗಾರರ ಲಭ್ಯತೆ, ಆರ್ಥಿಕ ಪ್ರಗತಿ, ಉತ್ತಮ ಮೂಲಭೂತ ಸೌಕರ್ಯಗಳು, ವಿದ್ಯುಚ್ಛಕ್ತಿ ಉತ್ಪಾದನಾ ಸಾಮರ್ಥ್ಯ – ಇವು



ರಾಜ್ಯಗಳಿಗೆ ವಿದೇಶಿ ನೇರ ಹೂಡಿಕೆಯನ್ನು ಆಕರ್ಷಿಸುವಲ್ಲಿ ಪೂರಕವಾದ ಪ್ರಭಾವವನ್ನು ಬೀರಿವೆ. ಆದರೆ ಆರ್ಥಿಕ ಸ್ವಾಯತ್ತೆ ಪ್ರಮಾಣ ಸೂಚ್ಯಂಕದ ಪ್ರಭಾವವು ಸಾಧಾರಣ ಮಟ್ಟದಲ್ಲಿರುವುದು ಕಂಡುಬರುತ್ತದೆ.

ರಾಜ್ಯ ಸರ್ಕಾರಗಳು ವಿದೇಶಿ ಹೂಡಿಕೆದಾರರಿಗೆ ವಿನಾಯಿತಿಗಳನ್ನು ಹೆಚ್ಚಿಸುವುದಕ್ಕಿಂತ ಮೂಲಭೂತ ಸೌಕರ್ಯಗಳನ್ನು ಮತ್ತಷ್ಟು ಸುಧಾರಿಸುವತ್ತ ಹೆಚ್ಚು ಗಮನ ಕೇಂದ್ರೀಕರಿಸುವುದು ಅಗತ್ಯವಾಗಿದೆ.

ಸಾಮಾನ್ಯ ಪ್ರಮಾಣದ ಹಾಗೂ ಕನಿಷ್ಠ ಪ್ರಮಾಣದ ವಿದೇಶಿ ನೇರ ಬಂಡವಾಳ ಹೂಡಿಕೆಯನ್ನಷ್ಟೇ ಆಕರ್ಷಿಸುತ್ತಿರುವಂಥ ರಾಜ್ಯಗಳು ಆಡಳಿತ ಸುಧಾರಣೆಯ ಮೂಲಕ ಆಡಳಿತದಲ್ಲಿ ಪಾರದರ್ಶಕತೆ, ಭ್ರಷ್ಟಾಚಾರ ಮುಕ್ತ ಆಡಳಿತ ಸಾಧ್ಯವಾಗಿಸಿ, ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿ, ತಮ್ಮ ತಮ್ಮ ರಾಜ್ಯಗಳನ್ನು ಹೆಚ್ಚು ಹೆಚ್ಚು ಚುರುಕಾದ ಮತ್ತು ಪ್ರಗತಿಪರ ನಿಟ್ಟಿನಲ್ಲಿ ನಡೆಸುವಂತಾದರೆ ವಿದೇಶಿ ನೇರ ಹೂಡಿಕೆಯ ಒಳಹರಿವು ಹೆಚ್ಚಿ ಆಯಾ ರಾಜ್ಯಗಳ ಬೆಳವಣಿಗೆಗೆ ಉತ್ತೇಜನ ದೊರಕಿದಂತಾದೀತು. ❑


## ಯೋಜನಾ ಚಂದಾದಾರರಲ್ಲಿ ಕೋರಿಕೆ

**ಯೋಜನಾ ಪತ್ರಿಕೆಯ ಚಂದಾದಾರರು ಹಾಗೂ ಹೊಸದಾಗಿ ಚಂದಾ ಬಯಸುವವರು**

**ಜಿಲ್ಲೆ ಹಾಗೂ ಅಂಚೆ ಪಿನ್‌ಕೋಡ್ ಸಂಖ್ಯೆ ಸೇರಿದಂತೆ**

**ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಒದಗಿಸಬೇಕು.**

**ಈಗಾಗಲೇ ಹಣ ಸಂದಾಯ ಮಾಡಿದವರು**

**ದೂರವಾಣಿ ಮೂಲಕವೂ ಈ ವಿವರ ನೀಡಿ ದೃಢಪಡಿಸಿಕೊಳ್ಳಬಹುದಾಗಿದೆ.**

**ದೂರವಾಣಿ ಸಂಖ್ಯೆ : 080 25537244**

# ಚಿಲ್ಲರೆ ವಲಯದಲ್ಲಿ ಹೂಡಿಕೆ

**ಲೀನಾ ಅಜಿತ್ ಕೌಶಲ್**


**ಕನ್ನಡಕ್ಕೆ : ಕೆ. ಎ. ರಾಮಕೃಷ್ಣ ಮೂರ್ತಿ**



> ವಿದೇಶಿ ಸಂಸ್ಥೆಗಳಿಂದಾಗಿ ಹೆಚ್ಚಿನ ಸಣ್ಣ ಚಿಲ್ಲರೆ ವ್ಯಾಪಾರಸ್ಥರು – ಕಿರಾಣಗಳು ವ್ಯವಹಾರದಿಂದ ಹೊರಗುಳಿಯಬೇಕಾಗುತ್ತದೆ ಎಂಬ ಭಯ ಬಹು ಮಟ್ಟಿಗೆ ನಿರಾಧಾರವಾದುದು. ಭಾರತದ ಚಿಲ್ಲರೆ ವಲಯ ಇಬ್ಬಗೆಯ ಮಾರುಕಟ್ಟೆಯನ್ನು ಹೊಂದಿದೆ – ಕಿರಾಣ ಅಂಗಡಿಗಳು ತಳಮಟ್ಟದಿಂದ ಮಧ್ಯಮ ಆದಾಯದ ಅಪಾರವಾದ ಸಂಖ್ಯೆಯುಳ್ಳ ಜನರ ಅಗತ್ಯಗಳನ್ನು ಪೂರೈಸುತ್ತವೆ. ಆದರೆ ಸೂಪರ್ ಮಾರುಕಟ್ಟೆಗಳು ಶ್ರೀಮಂತರ ಅಗತ್ಯಗಳನ್ನು ಪೂರೈಸುತ್ತವೆ. ಇವೆರಡೂ ಪರಸ್ಪರ ಸ್ಪರ್ಧಿಸುವುದಿಲ್ಲ.

ಭಾರತದಲ್ಲಿ ಚಿಲ್ಲರೆ ವಲಯ ಅಂತರಿಕ ಒಟ್ಟು ಉತ್ಪನ್ನದ ಶೇಕಡ 14 ರಿಂದ 15 ರಷ್ಟಿದೆ ಎಂದು ಲೆಕ್ಕಚಾರವಿದೆ. ವಿದೇಶಿ ಮಾಲಿಕತ್ವದ ಹಾಗೂ ಭಾರತದ ವ್ಯಾಪಾರಿ ಸಂಸ್ಥೆಗಳಿಗೆ ಬಂಡವಾಳ ಹೂಡಲು ಇದೊಂದು ಆಕರ್ಷಕವಾದ ಸ್ಥಳವಾಗಿದೆ. 2012 ರಲ್ಲಿ ಭಾರತ ಚಿಲ್ಲರೆ ವಲಯದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯ ನಿಯಮಗಳನ್ನು ಸಡಿಲಗೊಳಿಸಿತು ಮತ್ತು ಈ ವಲಯದಲ್ಲಿ ವಿದೇಶಿ ವ್ಯಾಪಾರಿ ಸಂಸ್ಥೆಗಳು ಶೇಕಡ 100 ರಷ್ಟು ಮಾಲಿಕತ್ವ ಹೊಂದಲು ಅವಕಾಶ ಮಾಡಿಕೊಟ್ಟಿತು. ವಿದೇಶಿ ವ್ಯಾಪಾರಿ ಸಂಸ್ಥೆಗಳಿಗೆ ಒಂದೇ ಬ್ರಾಂಡ್‌ನ ಉತ್ಪನ್ನಗಳನ್ನು ಮಾರಲು ಅವಕಾಶ ಮಾಡಿಕೊಟ್ಟರೂ ಕೂಡಾ ಅವರು ಶೇ.30 ರಷ್ಟು ಉತ್ಪನ್ನಗಳನ್ನು ಮತ್ತು ವಸ್ತುಗಳನ್ನು ದೇಶದೊಳಗಿನ ಮೂಲಗಳಿಂದ ಪಡೆದಿರಬೇಕು ಎಂಬ ಷರತ್ತು ವಿಧಿಸಿತ್ತು. 2012 ರ ಕೊನೆಯಲ್ಲಿ ಬಹು ಬ್ರಾಂಡ್‌ಗಳ ಉತ್ಪನ್ನಗಳನ್ನು ಮಾರಾಟ ಮಾಡಲು ಅವಕಾಶ ಮಾಡಿಕೊಟ್ಟಿತು, ಅದರೆ ಅವು ಶೇ.51 ರಷ್ಟು ಮೂಲಧನವನ್ನು ಮಾತ್ರ ಹೊಂದಿರಬೇಕು ಎಂಬುದು. ಮುಂದಿನ ನಿಯಮಗಳು ಎನೆಂದರೆ ಈ ವಿದೇಶಿ ವ್ಯಾಪಾರಿ ಸಂಸ್ಥೆಗಳು ಕನಿಷ್ಠ ಡಾಲರ್ 100 ಮಿಲಿಯನ್ ಬಂಡವಾಳ ಹೂಡಬೇಕು, ಅದರಲ್ಲಿ ಶೇ.50 ರಷ್ಟು ಹಣವನ್ನು ನಿರ್ದಿಷ್ಟವಾಗಿ ಮೂಲಸೌಕರ್ಯಗಳಾದ ಉಗ್ರಾಣ ಮತ್ತು ಶೀಥಲೀಕರಣಗಳಿಗಾಗಿ ವಿನಿಯೋಗಿಸಬೇಕು ಎಂಬುದು. 2014 ರಲ್ಲಿ ಹೊಸದಾಗಿ ಚುನಾಯಿತವಾದ ಸರ್ಕಾರ ಈ ಉದಾರ ಆರ್ಥಿಕ ನೀತಿಯ ಚೌಕಟ್ಟಿಗೆ ಒಪ್ಪಿಗೆ ನೀಡಿತು. ವಿದೇಶಿ ನೇರ ಬಂಡವಾಳ (ಎಫ್‌ಡಿಐ) ಆರ್ಥಿಕ ವಲಯಕ್ಕೆ ಹರಿದು ಬಂತು, ಇದಕ್ಕೆ ಪ್ರತಿಕ್ರಿಯೆ ಎಂದರೆ 'ಕಿರಾಣ' ಅಂಗಡಿಗಳು ಎಂದು ಕರೆಯಲ್ಪಡುವ ಚಿಲ್ಲರೆ ವಲಯದಲ್ಲಿ ಎಫ್‌ಡಿಐ ತಮ್ಮೊಂದಿಗೆ ಸ್ಪರ್ಧೆಗಿಳಿಯಬಹುದು ಎಂಬ ಭಯ ಹುಟ್ಟಿಕೊಂಡಿತು. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಚಿಲ್ಲರೆ ವಲಯಕ್ಕೆ ಎಫ್‌ಡಿಎ ಪ್ರವೇಶ ಎಂಬ ಚರ್ಚೆಯ ಒಂದು ಸುತ್ತು ಮುಗಿದಿದೆ, ಬೆಳವಣಿಗೆ ಮತ್ತು ಅಭಿವೃದ್ಧಿಗೆ ಎಫ್‌ಡಿಐ ನೀಡಿದ ಕಾಣಿಕೆಯನ್ನು ಅಂಗೀಕರಿಸಿದೆ. 2010–2012 ರ ಸಮಯದಲ್ಲಿ ಸಿಎಜಿಆರ್ ಶೇ.10.6 ರೊಂದಿಗೆ ಭಾರತದ ಚಿಲ್ಲರೆ ಕೈಗಾರಿಕೆಯಿದ್ದು, ಅದು 2015 ರ ಹೊತ್ತಿಗೆ ಮಾರುಕಟ್ಟೆ ಮೌಲ್ಯ ಡಾಲರ್ 750 ರಿಂದ 850 ಬಿಲಿಯನ್‌ನೊಂದಿಗೆ ಶೇ.18.8 ರಷ್ಟು ಮುಟ್ಟಬಹುದು ಎಂದು ಅಂದಾಜಿಸಲಾಗಿದೆ. ಭಾರತದ ಚಿಲ್ಲರೆ ವಲಯದಲ್ಲಿ ಸಂಘಟಿತ ಮತ್ತು ಅಸಂಘಟಿತ ವಲಯ ಸೇರಿದೆ. ಅಸಂಘಟಿತ ವಲಯದಲ್ಲಿ ಸಂಪ್ರಾದಾಯಿಕ ಕುಟುಂಬದವರೆ ನಡೆಸುವ ಸಣ್ಣ ಬಂಡವಾಳದ ಚಿಲ್ಲರೆ ಅಂಗಡಿ ಎಂದು ಕರೆಯುವ ಕಿರಾಣ ಅಂಗಡಿಗಳು, ಮೂಲೆ ಅಂಗಡಿಗಳು ಅಥವಾ ಅನುಕೂಲವಾದ ಅಂಗಡಿಗಳು ಸೇರಿವೆ, ಸಂಘಟಿತ ವಲಯದಲ್ಲಿ ಅಧುನಿಕವಾದ ಸೂಪರ್ ಮಾರ್ಕೆಟ್‌ಗಳು, ಹೈಪರ್ ಮಾರುಕಟ್ಟೆಗಳು, ಡಿಪಾರ್ಟ್‌ಮೆಂಟಲ್ ಸ್ಟೋರ್‌ಗಳು ಮತ್ತು ವಿಶೇಷವಾದ ಸರಣಿ ಅಂಗಡಿಗಳು ಸೇರಿವೆ. ಒಟ್ಟು ಚಿಲ್ಲರೆ ಮಾರುಕಟ್ಟೆಯಲ್ಲಿ ಸಂಘಟಿತ ಚಿಲ್ಲರೆ ವಲಯ ಶೇ.8 ರಷ್ಟಿದೆ ಮತ್ತು 2020 ರ ಹೊತ್ತಿಗೆ ಇದು ಶೇ.20 ಬೆಳವಣಿಗೆ ಕಾಣಲಿದೆ ಎಂದು ನಿರೀಕ್ಷಿಸಲಾಗಿದೆ (ಡೆಲ್ಲೊಯಿಟ್, 2013). ಒಟ್ಟು ಚಿಲ್ಲರೆ ಮಾರಾಟದಲ್ಲಿ ಭಾರತದ ಆಹಾರ ವಹಿವಾಟು ಶೇ.63 ರಷ್ಟಿದೆ, ಇದು

ಅರ್ಥಶಾಸ್ತ್ರ ಸಂಶೋಧಕರು. e-mail : leenakaushal123@gmail.com



ಶೇ.14 ರಷ್ಟು ಅಂತರಿಕ ಒಟ್ಟು ಉತ್ಪನ್ನಕ್ಕೆ ಮತ್ತು ಶೇ.7 ರಷ್ಟು ಉದ್ಯೋಗಕ್ಕೆ ಕಾಣಿಕೆ ನೀಡಿದೆ (ಗುರುಸ್ವಾಮಿ ಎಟ್ ಅಲ್, 2005). ಭಾರತೀಯರು ಮನೆ ಬಳಕೆ ವಸ್ತುಗಳ ಮೇಲೆ ಶೇ.48 ರಷ್ಟು ಆದಾಯವನ್ನು ಆಹಾರ ಮತ್ತು ಪಾನೀಯಗಳಿಗಾಗಿ ವ್ಯಯಿಸುತ್ತಾರೆ, ಇದು ವಿಶ್ವದ ಒಟ್ಟು ವೆಚ್ಚದಲ್ಲಿ ಅತ್ಯಂತ ಹೆಚ್ಚಿನ ಪಾಲು (ಮೆಕಿನ್ಸೆ, 2007) ಮತ್ತು ಇವರ ಹೆಚ್ಚಿನ ಖರೀದಿ ಸಣ್ಣ ಅಂಗಡಿಗಳಿಗೆ ಸೀಮಿತವಾಗಿದೆ. 1991 ರಲ್ಲಿ ಅಸ್ತಿತ್ವಕ್ಕೆ ಬಂದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಕಾಯಿದೆಯನ್ವಯ ರೈತರು ಕಡ್ಡಾಯವಾಗಿ ತಮ್ಮ ಉತ್ಪನ್ನಗಳನ್ನು ನೇರವಾಗಿ ಚಿಲ್ಲರೆ ಮಾರಾಟ ಅಥವಾ ಗ್ರಾಹಕರಿಗೆ ಮಾರಾಟ ಮಾಡುವ ಬದಲು ರಾಜ್ಯ ಕೃಷಿ ಮಾರುಕಟ್ಟೆ ಮಂಡಳಿಗಳು ನಿಶ್ಚಯಿಸುವ ಮತ್ತು ರಹದಾರಿ ಹೊಂದಿದ ವ್ಯಾಪಾರಿಗಳಿಗೆ ಅಥವಾ ಮಂಡಿಗಳಲ್ಲಿರುವ ಮಧ್ಯವರ್ತಿಗಳಿಗೆ ಮಾರಾಟ ಮಾಡಬೇಕು. ಈ ಮಧ್ಯವರ್ತಿಗಳು ರೈತರಿಂದ ಉತ್ಪನ್ನಗಳನ್ನು ವಿನಿಮಯ ಮಾಡುವ ಒಪ್ಪಂದ ಮಾಡಿಕೊಳ್ಳುವರು, ಇವರು ಚಿಲ್ಲರೆ ಖರೀದಿದಾರರಿಗೆ ನೀಡುವ ದರಗಳಿಂದ ಆಹಾರ ಚಿಲ್ಲರೆ ಮಾರಾಟ ಮತ್ತು ಆಹಾರ ಉತ್ಪನ್ನಗಳ ಮೇಲೆ ತಾವು ಸಾಧಿಸಿರುವ ಏಕಸ್ವಾಮ್ಯತೆ ಪ್ರತಿಬಿಂಬಿತವಾಗುತ್ತದೆ. ಇದರೊಂದಿಗೆ ಸರ್ಕಾರದ ತೆರಿಗೆಗಳು, ಅಂತರರಾಜ್ಯ ಸಾಗಣೆ ವೆಚ್ಚಗಳು ಮತ್ತು ಮಧ್ಯವರ್ತಿಗಳಿಗೆ ನೀಡಬೇಕಾದ ಕಮಿಷನ್ ಎಲ್ಲವೂ ಸೇರಿ ಮಧ್ಯವರ್ತಿಗಳು ಚಿಲ್ಲರೆ ಖರೀದಿದಾರರಿಗೆ ಹೆಚ್ಚಿನ ದರ ವಿಧಿಸುತ್ತಾರೆ. ಈ ವ್ಯವಸ್ಥೆಯಲ್ಲಿ ಲಾಭ ಬಡ ರೈತನ ವೆಚ್ಚದಲ್ಲಿ ರೈತನಿಗಾಗಲಿ ಅಥವಾ ಅಂತಿಮ ಗ್ರಾಹಕನಿಗಾಗಲಿ ತಲುಪದೆ ಮಧ್ಯವರ್ತಿಗಳ ಪಾಲಾಗುತ್ತಿದೆ. ಏರುತ್ತಿರುವ ಆಹಾರ ವಸ್ತುಗಳ ದರಗಳನ್ನು ನಿಯಂತ್ರಿಸಲು ಭಾರತ ಸರ್ಕಾರ ಹಣ್ಣು ಮತ್ತು ತರಕಾರಿಗಳನ್ನು ಎಪಿಎಂಸಿ ಕಾಯಿದೆ ಪಟ್ಟಿಯಿಂದ ಕೈಬಿಡಲು ರಾಜ್ಯ ಸರ್ಕಾರಗಳನ್ನು ವಿನಂತಿಸಿಕೊಂಡಿದೆ. ಆದರೆ ದರಗಳನ್ನು ನಿಯಂತ್ರಿಸಲು ಈ ಕ್ರಮದಿಂದ ಮಾತ್ರ ಸಾಧ್ಯವಾಗುವುದಿಲ್ಲ. ದೇಶದಲ್ಲಿ ಅಂಗಡಿಗಳನ್ನು ಸ್ಥಾಪಿಸಿ ಸ್ವತಂತ್ರವಾಗಿ ನಿರ್ವಹಿಸುವ ವಿದೇಶಿ ಸಂಸ್ಥೆಗಳು ಸರಬರಾಜು ಸರಣಿಯನ್ನು ಕಡಿತಗೊಳಿಸಬೇಕು, ರೈತರನ್ನು ಮಧ್ಯವರ್ತಿಗಳಿಂದ ತಪ್ಪಿಸಬೇಕು ಮತ್ತು ಅಂತಿಮವಾಗಿ ಮಾರಾಟ ಮಾಡುವ ದರಗಳಲ್ಲಿ ಹೆಚ್ಚಿನ ಪಾಲನ್ನು ರೈತರಿಗೆ ನೀಡಬೇಕು. (ಘೋಶಾಲ ಮತ್ತು ಶ್ರೀನಿವಾಸ, 2011), ಕೊಹ್ಲಿ ಮತ್ತು ಭಗವತಿ (2011) ಇವರ ಅಭಿಪ್ರಾಯದಂತೆ ಬಹುರಾಷ್ಟ್ರೀಯ ಚಿಲ್ಲರೆ ವಹಿವಾಟುದಾರರಿಗೆ ಭಾರತದಲ್ಲಿ ವಿತರಣಾ ವ್ಯವಸ್ಥೆ ಸುಧಾರಣೆ ಮತ್ತು ನಿರ್ವಹಣೆ ಮಾಡುವ ಸಾಮರ್ಥ್ಯವಿದೆ.

ದೊಡ್ಡ ಸೂಪರ್ ಸ್ಟೋರ್‌ಗಳು ಸೇರಿದಂತೆ ವಿದೇಶಿ ಮಾಲಿಕತ್ವದ ಬಹು ಬ್ರಾಂಡ್ ಸಂಸ್ಥೆಗಳಿಂದ ಮಧ್ಯಮ ವರ್ಗ ಆಕರ್ಷಿತವಾಗಿದೆ. ಇದರಿಂದ ಚಿಲ್ಲರೆ ವಲಯದ ಆರ್ಥಿಕತೆ ಬೆಳೆಯುತ್ತಿದೆ. ಈ ಬೆಳವಣಿಗೆಯಿಂದ ಕಿರಾಣ ಅಂಗಡಿಗಳು ಸ್ಪರ್ಧಿಸಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಕಾರಣ ಹೆಚ್ಚಿನ ಜನರ ಆದಾಯ ಕಡಿಮೆಯಿದೆ, ನಗರಗಳಲ್ಲಿರುವ ಸೂಪರ್ ಮಾರುಕಟ್ಟೆಗಳನ್ನು ತಲುಪಲು ಸಂಚಾರ ವ್ಯವಸ್ಥೆಯ ಅನುಕೂಲಗಳು ಕಡಿಮೆ ಮತ್ತು ಅವರು ಖರೀದಿ ಮಾಡಿದ ವಸ್ತುಗಳನ್ನು ದೀರ್ಘ ಕಾಲ ಸಂಗ್ರಹಿಸಲು ರೆಫ್ರೀಜಿರೇಟರ್‌ಗಳು ಅವರಲ್ಲಿ ಇಲ್ಲ. ಎಲ್ಲರೂ ಹೇಳುವಂತೆ ಭಾರತ ದೊಡ್ಡ ದೇಶವಾಗಿದ್ದು ಹೆಚ್ಚಿನ ಜನರು ಬಡವರೆ ಅಗಿದ್ದಾರೆ. ಒಂದು ಸಣ್ಣ ಗುಂಪಿನ ಜನರು ಮಾತ್ರ ಅತ್ಯಂತ ಶ್ರೀಮಂತರಾಗಿದ್ದಾರೆ. ದೇಶದಲ್ಲಿ ಚಿಲ್ಲರೆ ವಹಿವಾಟು ವಲಯ ಬೆಳೆಯಲು ವಿದೇಶಿ ಸಂಸ್ಥೆಗಳಿಗೆ ಮತ್ತು ಕಿರಾಣ ಅಂಗಡಿಗಳಿಗೆ ಸಾಕಷ್ಟು ಅವಕಾಶಗಳಿವೆ. ಉದಾರೀಕರಣ ಯುಗದಲ್ಲಿ ಒಂದು ಮಹತ್ವದ ನೀತಿಯ ಆರಂಭ ಎಂದರೆ ಈ ಹಿಂದೆ ವಿದೇಶಿ ನೇರ ಬಂಡವಾಳಕ್ಕೆ ತಳುಕು ಹಾಕಿಕೊಂಡಿರುವ ಅರ್ಹತೆಯ ಕಾನೂನು ಮತ್ತು ನಿಯಮಗಳನ್ನು ಸಡಿಲಗೊಳಿಸುವುದು. ಆಶ್ಚರ್ಯದ ಸಂಗತಿ ಎನೆಂದರೆ ಹೊಸ ಸರ್ಕಾರ ಚಿಲ್ಲರೆ ವಹಿವಾಟಿನಲ್ಲಿ ಎಫ್‌ಡಿಐಗೆ ಬಹುಬ್ರಾಂಡ್ ಚಿಲ್ಲರೆ ಮಾರಾಟಕ್ಕೆ ಉದಾರೀಕರಣಗೊಳಿಸಲು ಆಯ್ಕೆ ಮಾಡಿಕೊಳ್ಳದಿರುವುದು, ಇವರು ಸಣ್ಣ ಸಂಸ್ಥೆಗಳೊಂದಿಗೆ ಸ್ಪರ್ಧಿಸಿದರೆ ಹೆಚ್ಚಿನ ಅಂಗಡಿಗಳ ಮಾಲಿಕರ ಜೀವನಾಧಾರವನ್ನು ಕಿತ್ತುಕೊಂಡಂತಾಗುತ್ತದೆ. ಸರ್ಕಾರದ ಈ ಭಯಕ್ಕೆ ಅಲ್ಪ ಪ್ರಮಾಣದ ಬೆಂಬಲವಿದೆ ಮತ್ತು ಆರ್ಥಿಕವಾಗಿ ವಿದೇಶಿ ಬಹುಬ್ರಾಂಡ್ ಸಂಸ್ಥೆಗಳು ಚಿಲ್ಲರೆ ವಲಯದಲ್ಲಿ ಪ್ರಬಲವಾಗಿವೆ ಎಂಬುದು ನಮ್ಮ ವಾದ. ಈ ಪ್ರಕರಣದಲ್ಲಿ ವಿದೇಶಿ ಸಂಸ್ಥೆಗಳ ಸಾಮರ್ಥ್ಯ ಮತ್ತು ದೇಶದ ಕೃಷಿ ವಲಯಕ್ಕೆ ಅವರು ನೀಡಿದ ಕಾಣಿಕೆ ದೊಡ್ಡದು. ಗ್ರಾಹಕರಿಗೆ ದೊರಕುವ ಲಾಭವನ್ನು ಇಲ್ಲಿ ಪರಿಗಣಿಸಿದರೆ, ಈ ಲಾಭ ಮೊದಲು ಮೇಲ್ವರ್ಗದ ಆದಾಯ ಗುಂಪಿಗೆ ತಲುಪುತ್ತದೆ, ಆದರೆ ದೀರ್ಘ ಕಾಲದಲ್ಲಿ ಕಡಿಮೆ ಆದಾಯದ ಗುಂಪಿಗೂ ಈ ಆದಾಯ ದೊರಕುತ್ತದೆ. ಇಲ್ಲಿ ಎರಡು ವಾದಗಳನ್ನು ಪರಿಗಣಿಸಬೇಕು. ಮೊದಲನೆಯದ್ದು ಪ್ರಸ್ತುತ ಚಿಲ್ಲರೆ ವಲಯ, ಅದು ಇಬ್ಬಗೆಯ ವಲಯಗಳಿಂದ ಕೂಡಿದೆ ದೊಡ್ಡ ಪ್ರಮಾಣದ ಅಂಗಡಿಗಳ ಸಂಘಟಿತ ವಲಯ ಮತ್ತು ಹೆಚ್ಚಿನ ಸಂಖ್ಯೆಯಲ್ಲಿರುವ ಸಣ್ಣ ಅಂಗಡಿ ಹೊಂದಿರುವವರ ಅಸಂಘಟಿತ ವಲಯ. ಇಬ್ಬಗೆಯ ವಲಯ ಎಂದರೆ ಹೆಚ್ಚಿನವು ಒಂದಕ್ಕೊಂದು ಸಂಬಂಧವಿಲ್ಲದವು ಮತ್ತು ಪ್ರತಿಯೊಂದಕ್ಕೂ ತನ್ನದೇ ಅದ ಗ್ರಾಹಕರಿದ್ದಾರೆ ಮತ್ತು ಇವರಿಬ್ಬರು ಪರಸ್ಪರರನ್ನು ಅತಿಕ್ರಮಿಸಿಕೊಳ್ಳುವುದಿಲ್ಲ. ಎರಡನೆಯದಾಗಿ ಬಹುರಾಷ್ಟ್ರೀಯ ಸಂಸ್ಥೆಗಳು ಕೃಷಿ ತಂತ್ರಜ್ಞಾನದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದರಿಂದ ದೇಶಿಯ ಚಿಲ್ಲರೆ ವಲಯದಲ್ಲಿ ಎಫ್‌ಡಿಐ ಸಮಪಾಲು ಮತ್ತು ಸಾಮರ್ಥ್ಯದಲ್ಲಿ ಸಮರ್ಥವಾದ ಆಧಾರವಾಗಬಲ್ಲದು.

### ಕಿರಾಣಗಳಿಗೆ ಎಫ್‌ಡಿಐ ಬೆದರಿಕೆ – ಒಂದು ಸುಳ್ಳು ಭಯ

ಆರ್ಥಿಕ ಬೆಳವಣಿಗೆ ಪ್ರೋತ್ಸಾಹಿಸಲು ಎಫ್‌ಡಿಐ ಪಾತ್ರದ ಬಗ್ಗೆ ಹಲವಾರು ಸಂಶೋಧಕರು ಅಧ್ಯಯನ ಮಾಡುತ್ತಿದ್ದಾರೆ (ಬಾಜಪೈ ಮತ್ತು ಸಚ್ಸ್, 2000, ಲೇನ್ಸಿಂಕ್ ಮತ್ತು ಮೊರಿಸೇ, 2001) ಆದರೆ ಎಫ್‌ಡಿಐ ಮೂಲಕ ಆರ್ಥಿಕ ಅಭಿವೃದ್ಧಿ ಪ್ರೋತ್ಸಾಹಕ್ಕೆ ಅಗತ್ಯವಾದ ಷರತ್ತುಗಳನ್ನು ಗುರುತಿಸಲು ಅಧ್ಯಯನಗಳು ನಡೆಯುತ್ತಿವೆ (ಮೆಲ್ಲರ್ 1976, ಹನ್ಸೆನ್ 2004), ಅದರೆ ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಕ್ಕೆ ಆರ್ಥಿಕ ಬೆಳವಣಿಗೆಯೊಂದಿಗೆ ಬಡತನವನ್ನು ನಿರ್ಮೂಲನೆ ಮಾಡಲು ಎಫ್‌ಡಿಐ ಕಾಣಿಕೆಯ ಪ್ರಾಮುಖ್ಯತೆಯನ್ನು ಖಚಿತಗೊಳಿಸಿಕೊಳ್ಳಬೇಕು. ಸಣ್ಣ ದಿನಸಿ

ಅಂಗಡಿಗಳ ಮೇಲೆ ಸೂಪರ್ ಮಾರುಕಟ್ಟೆಗಳ ಪರಿಣಾಮದ ಬಗ್ಗೆ ಸಾಕಷ್ಟು ವಿಸ್ತಾರವಾದ ಸಾಹಿತ್ಯ ದೊರಕುತ್ತದೆ. ಅದರಲ್ಲಿ ಮಿಶ್ರಪ್ರತಿಕ್ರಿಯೆಗಳಿವೆ. ಸೋಬೆಲ್ ಮತ್ತು ಡೀನ್ (2008) ಅಧ್ಯಯನ ಅಮೆರಿಕದಲ್ಲಿ ವಾಲ್ ಮಾರ್ಟ್ ಪ್ರವೇಶದಿಂದ ಸಣ್ಣ ಚಿಲ್ಲರೆ ಮಾರಾಟಗಾರರ ಮೇಲೆ ದೀರ್ಘ ಕಾಲದ ಪರಿಣಾಮ ಬೀರುವುದಿಲ್ಲ ಮತ್ತು ಸಣ್ಣ ವಹಿವಾಟುದಾರರು ಮತ್ತೆ ಹೊಸದಾಗಿ ತಮ್ಮ ವ್ಯಾಪಾರಗಳನ್ನು ಆರಂಭ ಮಾಡುವ ಪರಿಣಾಮ ಅವು ವಿಸ್ತಾರಗೊಳ್ಳಬಹುದು ಅಥವಾ ಸಂಕುಚಿತಗೊಳ್ಳಬಹುದು. ಇದರಿಂದಾಗಿ (ಜಿಯ, 2008, ಭಾಸ್ಕರ್ 2005) ವರದಿಯಲ್ಲಿ ಸಣ್ಣ ಚಿಲ್ಲರೆ ವಹಿವಾಟುದಾರರ ಸಂಖ್ಯೆ ಕಡಿಮೆಯಾಗಿದೆ ಎಂದು ತಿಳಿಸಿದ್ದಾರೆ. ಇಗಾಮಿ (2008) ಅಧ್ಯಯನದ ಸಲಹೆ ಎನೆಂದರೆ ದೊಡ್ಡ ಮತ್ತು ಮಧ್ಯಮ ಗಾತ್ರದ ಅವಲಂಬಿಗಳನ್ನು ದೊಡ್ಡ ಸೂಪರ್ ಮಾರುಕಟ್ಟೆಗಳು ಸ್ಥಳಾಂತರ ಮಾಡಿವೆ, ಅದರೆ ಸಣ್ಣ ಅಂಗಡಿಗಳು ಉತ್ಪನ್ನಗಳ ವ್ಯತ್ಯಾಸಗಳಿಂದ ಮತ್ತು ಗಾತ್ರದಿಂದ ಸುಧಾರಣೆಗೊಂಡು ಉಳಿದುಕೊಂಡಿವೆ ಮತ್ತು ದರ ಸ್ಪರ್ಧೆಯಲ್ಲಿ ಅವು ಮೃದುವಾಗಿವೆ (ಅಂಡರ್‌ಸನ್ ಎಟ್ ಅಲ್, 1992, ಪೆರಲೋಫ್ ಮತ್ತು ಸಾಲೋಫ್ 1985). ಗ್ರಾಹಕರ ಬೇಡಿಕೆ, ಕೊಳ್ಳುವ ಹವ್ಯಾಸಗಳು ಮತ್ತು ಗ್ರಾಹಕರಿಗೆ ಅಗತ್ಯವಾದ ವಿವಿಧ ರೀತಿಯ ಉತ್ಪನ್ನಗಳು, ವಿವಿಧ ಗಾತ್ರದ ಮಳಿಗೆಗಳ ಬಗ್ಗೆ ಇರುವ ವ್ಯತ್ಯಾಸದ ಮುಖ್ಯಾಂಶಗಳನ್ನು ತಿಳಿಸಿದೆ. ಬಾಲಸುಬ್ರಹ್ಮಣ್ಯಂ (2013) ಪ್ರಕಾರ ಕಡಿಮೆ ಆದಾಯದ ಗುಂಪಿನ ಬೇಡಿಕೆ ಅಥವಾ ಅಂತರ ರಾಷ್ಟ್ರೀಯ ವೈವಿಧ್ಯಮಯ ಉತ್ಪನ್ನಗಳನ್ನು ಕೊಳ್ಳಲು ಅವರಿಗೆ ಸಾಧ್ಯವಾಗುವುದಿಲ್ಲ, ಏಕೆಂದರೆ ದೊಡ್ಡಮಟ್ಟದ ಆದಾಯದ ಗುಂಪುಗಳಂತೆ ಕಡಿಮೆ ಆದಾಯದ ಗುಂಪಿನ ಜನರು ದೂರದ ಮಾರುಕಟ್ಟೆಗೆ ತಲುಪಲು, ಅ ವಸ್ತುಗಳ ದರ ಮತ್ತು ಅವುಗಳನ್ನು ಸಂಗ್ರಹಿಸಿಡಲು ಸಾಧ್ಯವಾಗುವುದಿಲ್ಲ. ಎಲ್ಲೆಂದರಲ್ಲಿ ಹುಟ್ಟಿಕೊಂಡಿರುವ ಸೂಪರ್ ಮಾರುಕಟ್ಟೆಗಳು ಹೆಚ್ಚುತ್ತಿರುವ ಬಾಡಿಗೆ ಹೊಂದಿಸಿಕೊಳ್ಳಲು ಮತ್ತು ಪ್ರಮುಖ ಸ್ಥಳಗಳ ಕೊರತೆಯಿಂದಾಗಿ ಸಾಮಾನ್ಯವಾಗಿ ದೊಡ್ಡ ನಗರಗಳ ಹೊರವಲಯದಲ್ಲಿ ಅಥವಾ ಉಪನಗರಗಳಲ್ಲಿ ಸ್ಥಾಪಿತವಾಗಿವೆ. ಕಳೆದ ಮೂರು ವರ್ಷಗಳಲ್ಲಿ ಚಿಲ್ಲರೆ ಬಾಡಿಗೆ ದರಗಳು ಪ್ರಮುಖ ಸ್ಥಳಗಳಲ್ಲಿ ಶೇ.50




ರಷ್ಟು ಜಾಸ್ತಿಯಾಗಿವೆ. ಅಂತಾರಾಷ್ಟ್ರೀಯ ಬಾಡಿಗೆಗಳಿಗಿಂತ 300–400 ಬ್ಯಾಸಿಸ್ ಪಾಯಿಂಟ್‌ಗಳು ಹೆಚ್ಚಾಗಿವೆ. ಇದು ಒಟ್ಟು ಚಿಲ್ಲರೆ ಮಾರಾಟ ವೆಚ್ಚಗಿಂತಲೂ ಅಂದಾಜು ಶೇ.40 ರಷ್ಟಾಗುತ್ತದೆ (ಡೆಲ್ಲೋಯಿಟ್ , 2013). ಕಡಿಮೆ ಆದಾಯ ಗುಂಪಿನ ಜನರು ತಮ್ಮ ದೈನಂದಿನ ಅಗತ್ಯಗಳಿಗೆ ಸೂಪರ್ ಮಾರುಕಟ್ಟೆಗಳನ್ನು ಹುಡುಕಿಕೊಂಡು ದೂರ ಪ್ರಯಾಣ ಮಾಡುವ ಬದಲಾಗಿ ಸಣ್ಣ ಪುಟ್ಟ ವಸ್ತುಗಳನ್ನು ಕಿರಾಣ ಅಂಗಡಿ ಅಥವಾ ತಮ್ಮ ಮನೆಗಳ ಸಮೀಪವಿರುವ ತಕರಾರಿ ವ್ಯಾಪಾರಸ್ಥರಲ್ಲಿ ಕೊಂಡುಕೊಳ್ಳುವುದೇ ಅನುಕೂಲಕರವಾಗಿರುತ್ತದೆ. ಭಾರತದಲ್ಲಿ ನಿಶ್ಚಯವಾಗಿ ಮಧ್ಯಮ ಆದಾಯದ ಗುಂಪು ಬೆಳೆಯುತ್ತಿದೆ. ಅದರೆ ಇದು ಜನಸಂಖ್ಯೆಯ ಶೇ.30 ಕ್ಕೂ ಕಡಿಮೆ (ಡಾಯಿಷ್ ಬ್ಯಾಂಕ್, 2010) ಇನ್ನೊಂದು ಕಡೆ ಬಡತನ ರೇಖೆಗಿಂತಲೂ ಕೆಳಗಿರುವ ಜನಸಂಖ್ಯೆ ಶೇ.21.9 (ಯೋಜನಾ ಅಯೋಗ, 2012) ಅದ್ದರಿಂದ ಸಂಘಟಿತ ಮತ್ತು ಅಸಂಘಟಿತ ಚಿಲ್ಲರೆ ವಹಿವಾಟುದಾರರು ಮುಂದಿನ ದಿನಗಳಲ್ಲಿ ಇಬ್ಬರೂ ಕೂಡಿಯೇ ಇರುತ್ತಾರೆ. ಅವರು ಗ್ರಾಹಕರ ವಿವಿಧ ಮೌಲ್ಯಗಳಿಗೆ ಯೋಜನೆಗಳನ್ನು ಸಮರ್ಪಿಸಿಕೊಳ್ಳುತ್ತಾರೆ. ಸಣ್ಣ ಕಿರಾಣ ಅಂಗಡಿಗಳ ಖರ್ಚಿನಲ್ಲಿ ದೊಡ್ಡ ಚಿಲ್ಲರೆ ವಹಿವಾಟುದಾರರು ವಿಸ್ತರಿಸಿಕೊಳ್ಳುವುದಿಲ್ಲ ಎಂದು ಕೊಹ್ಲಿ ಮತ್ತು ಭಗವತಿ (2011) ಅಧ್ಯಯನದಲ್ಲಿ ವಾದಿಸುತ್ತಾರೆ. ಕಿರಾಣ ಅಂಗಡಿಗಳು ಹೆಚ್ಚಿನವು ಕುಟುಂಬಸ್ಥರೇ ನಡೆಸಿಕೊಂಡು ಬರುತ್ತಿರುವ ಕಡಿಮೆ ಖರ್ಚಿನ ನಿರ್ವಹಣೆ ಮಾಡುತ್ತಿರುವ ವ್ಯಾಪಾರಿಗಳಾಗಿದ್ದಾರೆ. ಅವರು ತಾವು ವಾಸವಿರುವ ಮನೆಗಳನ್ನೇ ಅಂಗಡಿಗಳಾಗಿ ಪರಿವರ್ತಿಸಿರುತ್ತಾರೆ. ಅ ಪ್ರದೇಶದಲ್ಲಿರುವ ಒಂದು ನಿಗದಿತ ಗುಂಪಿನ ಅವಶ್ಯಕತೆಗಳನ್ನು ಪೂರೈಸುತ್ತಾರೆ. ಅವರಿಗೆ ಸಾಲದ ಅನುಕೂಲವನ್ನು ಕಲ್ಪಿಸಿರುತ್ತಾರೆ, ವಿನಿಮಯ ಮತ್ತು ಇವರಲ್ಲಿ ಗ್ರಾಹಕರು ಖರೀದಿ ಮಾಡಿರುವ ವಸ್ತುಗಳನ್ನು ಹಿಂತೆಗೆದುಕೊಳ್ಳುವ ಆಯ್ಕೆ ಕೂಡಾ ಇರುತ್ತದೆ. ಅವರ ಅವಶ್ಯಕತೆಗಳ ಬಗ್ಗೆ ಸಲಹೆ ಸೂಚನೆಗಳನ್ನು ಕೊಡುತ್ತಿರುತ್ತಾರೆ. ಪ್ರಹ್ಲಾದ (2008) ಗಮನಿಸಿದ್ದು ಎನೆಂದರೆ 'ಪಿರಮಿಡ್‌ನ ತಳ ಭಾಗದಿಂದ' ಗ್ರಾಹಕರು ತಮಗೆ ಬೇಕಾದ ಅವಶ್ಯಕ ವಸ್ತುಗಳನ್ನು ಒಮ್ಮೆಲೆ ಕೊಂಡುಕೊಳ್ಳದೆ ಅಗಾಗ ಸಣ್ಣ ಪ್ರಮಾಣದಲ್ಲಿ ಖರೀದಿ ಮಾಡುತ್ತಾರೆ. ಹೆಚ್ಚಿನ ಪ್ರಮಾಣದಲ್ಲಿ ಕೊಳ್ಳಲು ಅವರಿಗೆ ಸಾಧ್ಯವಾಗುವುದಿಲ್ಲ ಮತ್ತು ಅವುಗಳನ್ನು ಮನೆಗಳಲ್ಲಿ ಸಂಗ್ರಹಿಸಿಡಲು ಅನುಕೂಲಗಳು ಇರುವುದಿಲ್ಲ. ಅದ್ದರಿಂದ ಅವರು ತಮ್ಮ ದೈನಂದಿನ ಅಗತ್ಯಗಳಿಗಾಗಿ ಮನೆ ಹತ್ತಿರವಿರುವ ಕಿರಾಣ ಅಂಗಡಿಗಳಿಗೆ

ಹೋಗುವುದೇ ಅನುಕೂಲಕರ. ಗ್ರಾಹಕರಿಗೆ ತಾಜಾ ಹಣ್ಣುಗಳು, ತರಕಾರಿಗಳನ್ನು ಕಿರಾಣ ಅಂಗಡಿಗಳಲ್ಲಿ ಅಥವಾ ಹತ್ತಿರದ ತರಕಾರಿ ಮಾರುಕಟ್ಟೆಗಳಲ್ಲಿ ಖರೀದಿಸುವ ಸ್ವತಂತ್ರವಿದೆ. ಕೊಪ್ಲಿ ಮತ್ತು ಭಗವತಿ (2011) ಅವರ ಸಲಹೆ ಪ್ರಕಾರ ಇದೆಲ್ಲಾ ಭಾರತದ ಜೀವನದ ಲಯಬದ್ಧ ಚಲನೆಯ ಭಾಗವಾಗಿದೆ ಮತ್ತು ಸದ್ಯದಲ್ಲಿ ಇದು ಬದಲಾಗುವ ಸಾಧ್ಯತೆಗಳಿಲ್ಲ. ಭಾರತದಲ್ಲಿ ಅವಿಭಕ್ತ ಕುಟುಂಬಗಳ ಅಸ್ತಿತ್ವದಲ್ಲಿರುತ್ತವೆ, ಅಲ್ಲಿ ಕುಟುಂಬದ ಹಿರಿಯರು, ಹೆಚ್ಚಿನವರು ಕೆಲಸಗಳಿಂದ ನಿವೃತ್ತರಾದವರು, ಸಾಮಾನ್ಯವಾಗಿ ಹತ್ತಿರದ ಮೂಲೆ ಅಂಗಡಿಗಳಲ್ಲಿ ಖರೀದಿಸುವವರೆ ಅಗಿರುತ್ತಾರೆ. ಅವರು ಅಲ್ಲಿ ತಮ್ಮ ವಯಸ್ಸಿನ ಜನರನ್ನು ಭೇಟಿ ಮಾಡುತ್ತಾರೆ, ಅವರೊಂದಿಗೆ ತಮ್ಮ ಕಷ್ಟಸುಖಗಳನ್ನು ಹಂಚಿಕೊಳ್ಳುತ್ತಾರೆ. ಇದರಿಂದ ಅವರು ಸಂತೋಷ ಪಡುತ್ತಾರೆ. ಈ ಮೂಲೆ ಅಂಗಡಿಗಳು ವಸ್ತುಗಳನ್ನು ಮನೆಗಳಿಗೆ ತಲುಪಿಸುವ ಸೇವೆಯನ್ನು ಕೂಡಾ ಮಾಡುತ್ತಾರೆ. ಇದರಿಂದಾಗಿ ಅಂಗಡಿಗಳಿಗೆ ಹೋಗಲು ಅಸಾಧ್ಯವಾದ ಜನರಿಗೆ ಮಹಾದಾನಂದ ಉಂಟಾಗುತ್ತದೆ.


### ಚರ್ಚೆ

ಭಾರತದಲ್ಲಿ ಚಿಲ್ಲರೆ ವಹಿವಾಟಿನಲ್ಲಿ ಎಫ್‌ಡಿಐ ಬಗ್ಗೆ ಹೆಚ್ಚಿನ ಚರ್ಚೆ ನಡೆಯುತ್ತಿರುವುದು ಕಿರಾಣ ಅಂಗಡಿಗಳ ಮೇಲೆ ಆಗುತ್ತಿರುವ ಪರಿಣಾಮಕ್ಕೆ ಸಂಬಂಧಿಸಿದ್ದು. ಈ ಹಿಂದೆ ನೀಡಿದ ಕಾರಣಗಳು ವಿವಾದ ರಹಿತವಾದವು. ಸಂಬಂಧಪಟ್ಟ ವಿವಾದ ಏನೆಂದರೆ ಸಣ್ಣ ರೈತರ ಕಲ್ಯಾಣದ ಬಗ್ಗೆ ವಿದೇಶಿ ಸಂಸ್ಥೆಗಳ ಕಾಣಿಕೆ ಎನು, ಚಿಲ್ಲರೆ ವಲಯದಲ್ಲಿ ಸರ್ಕಾರ ನೇಮಕ ಮಾಡಿರುವ ಮಂಡಿ ಮತ್ತು ಮಧ್ಯವರ್ತಿಗಳ ರೈತರಿಗೆ ಸಹಾಯ ಮಾಡುವ ಬದಲು ಶೋಷಣೆ ಮಾಡುತ್ತಿರುವುದು. ಎಫ್‌ಡಿಐ ಮತ್ತು ಬಡತನದ ಮೇಲೆ ಅದರ ಪರಿಣಾಮ ಬಗ್ಗೆ ಸಾಕಷ್ಟು ಸಾಹಿತ್ಯವಿದ್ದರೂ (ಹಾರೂನ್, 1999, ಬ್ಯಾನಿಸ್ಟರ್, 2001) ಎಫ್‌ಡಿಐ ಗ್ರಾಮಾಂತರ ಪ್ರದೇಶದ ಬಡ ಜನತೆಯನ್ನು ತಲುಪುತ್ತಿದ್ದರೂ ಕೂಡಾ ಅದರ ಯಾಂತ್ರಿಕ ಕೌಶಲ್ಯದ ಬಗ್ಗೆ ಹೆಚ್ಚು ಬರೆದಿಲ್ಲದಿರುವುದು. ಬಡ ಗ್ರಾಹಕರೊಂದಿಗಿನ ವಿದೇಶಿ ಸಂಸ್ಥೆಗಳ ಸಂಬಂಧ ಕುರಿತಾದ ಒಂದು ಅಧ್ಯಯನದಂತೆ ಬಡ ರೈತರು ತಮ್ಮ ಉತ್ಪನ್ನಗಳನ್ನು ಹೆಚ್ಚು ಮಾಡಿಕೊಳ್ಳಲು ಅವರಿಗೆ ಎಫ್‌ಡಿಐ ಇನ್ನು ಹೆಚ್ಚಿನ ಸಹಾಯ ಮಾಡಬಹುದಾಗಿದೆ.

ಬಹುರಾಷ್ಟ್ರೀಯ ಸಂಸ್ಥೆಗಳು ಮೂಲತಃ ಗರಿಷ್ಠ ಪ್ರಮಾಣದ ಲಾಭ ಮಾಡಿಕೊಳ್ಳುವವರು ಎಂದು ವಾದ ಮಾಡಬಹುದು. ಅವರಿಂದ ಸಾಮಾಜಿಕ ಜವಾಬ್ದಾರಿಯಾದ ಬಡತನ ನಿರ್ಮೂಲನೆಯನ್ನು ಅವರಿಂದ ನಿರೀಕ್ಷಿಸುವುದು ಅಗದ ಮಾತು. ಅದರೆ ಅವರು ಸಾಮಾಜಿಕ ಕಾರ್ಯಗಳಿಗೆ ತಮ್ಮ ಲಾಭದಲ್ಲಿ ಸ್ವಲ್ಪ ಭಾಗವನ್ನು ಕಾಣಿಕೆಯಾಗಿ ನೀಡಬಹುದಾಗಿದೆ. ವಿಶೇಷವಾಗಿ ಭಾರತದಲ್ಲಿ ಹೆಚ್ಚಿನ ಸಂಖ್ಯೆಯ ಜನರು ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಿದ್ದು, ಮಿಲಿಯನ್‌ಗಟ್ಟಲೆ ಜನರು ಬಡತನದಲ್ಲೇ ತಮ್ಮ ಜೀವನ ಸಾಗಿಸುತ್ತಿದ್ದಾರೆ. ವಿದೇಶಿ ಸಂಸ್ಥೆಗಳು ಮಾರುಕಟ್ಟೆ ಮಾಡಲು ಬಯಸುವ ಉತ್ಪನ್ನಗಳಿಗೆ ದೊಡ್ಡ ಸಂಖ್ಯೆಯ ಗ್ರಾಹಕರು ತಮಗೆ ಬೇಕಾದ ಉತ್ಪನ್ನಗಳಿಗಾಗಿ ಬೇಡಿಕೆ ಇರಿಸುತ್ತಾರೆ. ಉತ್ಪದಕರೂ ಅವರೆ ಆಗಿರುವ ಕಡಿಮೆ ಆದಾಯದ ಗ್ರಾಹಕರೊಂದಿಗಿನ ವಿದೇಶಿ ಸಂಸ್ಥೆಗಳ ಸಂಬಂಧ, ಅದು ಕೇವಲ ಮಾರುಕಟ್ಟೆಗಿಂತಲೂ ಹೆಚ್ಚಿನದಾಗಿದೆ. ಅವರು ಕಡಿಮೆ ಮಟ್ಟದ ತಂತ್ರಜ್ಞಾನ ಬಳಕೆಯ ಉತ್ಪಾದಕರು, ಅದಕ್ಕೆ ಬೇಕಾದ ವಸ್ತುಗಳ ಪಡೆಯಲು ಮತ್ತು ತಮ್ಮ ಉತ್ಪನ್ನಗಳನ್ನು ಮಾರುಕಟ್ಟೆ ಮಾಡಲು ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ರೈತರಿಗೆ ತಕ್ಕುದಾದ ತಂತ್ರಜ್ಞಾನ, ಬೀಜಗಳು ಮತ್ತು ಗೊಬ್ಬರವನ್ನು ವಿದೇಶಿ ಸಂಸ್ಥೆಗಳು ಒದಗಿಸಿ ಅವರ ಲಾಭ ಹೆಚ್ಚಾಗುವಂತೆ ಮಾಡಬೇಕು ಮತ್ತು ಬಡ ರೈತರ ಕಲ್ಯಾಣವನ್ನು ಪ್ರೋತ್ಸಾಹಿಸಬೇಕು. ಮಾಹಿತಿ ತಂತ್ರಜ್ಞಾನ ಯುಗದಲ್ಲಿ ವಿದೇಶಿ ಸಂಸ್ಥೆಗಳು ಇಂಟರ್‌ನೆಟ್ ಮೂಲಕ ರೈತರನ್ನು ತಲುಪಲು ಸಾಧ್ಯ. ಸ್ಲೈಡ್ ಶೋಗಳ ಮೂಲಕ ಮತ್ತು ಸಾಕ್ಷ್ಯಚಿತ್ರಗಳ ಮೂಲಕ ಹೊಸ ವೈವಿಧ್ಯಮಯ ಬೀಜಗಳು ಮತ್ತು ಗೊಬ್ಬರಗಳ ಸಾಮರ್ಥ್ಯವನ್ನು ರುಜುವಾತು ಪಡಿಸಬೇಕು. ಭಾರತದಲ್ಲಿರುವ ವಿದೇಶಿ ಸಂಸ್ಥೆಗಳಾದ ಹಿಂದೂಸ್ತಾನ ಲಿವರ್, ಪೆಪ್ಸಿಕೊ ಅವರು ತಮ್ಮ ಸಂಸ್ಥೆ ಮತ್ತು ರೈತರ ಉಪಯೋಗಕ್ಕಾಗಿ ಕಡಿಮೆ ಆದಾಯದ ರೈತರೊಂದಿಗೆ ಜತೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

### ಮುಕ್ತಾಯ

ಭಾರತದ ಚಿಲ್ಲರೆ ವಲಯದಲ್ಲಿ ಎಫ್‌ಡಿಐ ಬಗೆಗಿನ ಚರ್ಚೆಯನ್ನು ಈ ಲೇಖನದಲ್ಲಿ ವಿಮರ್ಶೆ ಮಾಡಲಾಗಿದೆ. ಇಲ್ಲಿ




ವಾದ ಮಂಡಿಸಿರುವಂತೆ ದೊಡ್ಡ ಮಟ್ಟದ ವಿದೇಶಿ ಸಂಸ್ಥೆಗಳಿಂದಾಗಿ ಹೆಚ್ಚಿನ ಸಣ್ಣ ಚಿಲ್ಲರೆ ವ್ಯಾಪಾರಸ್ಥರು – ಕಿರಾಣಗಳು ವ್ಯವಹಾರದಿಂದ ಹೊರಗುಳಿಯಬೇಕಾಗುತ್ತದೆ ಎಂಬ ಭಯ ಹೆಚ್ಚಿನ ಮಟ್ಟಿಗೆ ನಿರಾಧಾರವಾದುದು. ಭಾರತದ ಚಿಲ್ಲರೆ ವಲಯ ಇಬ್ಬಗೆಯ ಮಾರುಕಟ್ಟೆಯನ್ನು ಹೊಂದಿದೆ – ಕಿರಾಣ ಅಂಗಡಿಗಳು ತಳಮಟ್ಟದಿಂದ ಮಧ್ಯಮ ಆದಾಯದ ಅಪಾರವಾದ ಸಂಖ್ಯೆಯುಳ್ಳ ಜನರ ಅಗತ್ಯಗಳನ್ನು ಪೂರೈಸುತ್ತವೆ. ಅದರೆ ಸೂಪರ್ ಮಾರುಕಟ್ಟೆಗಳು ಶ್ರೀಮಂತರ ಅಗತ್ಯಗಳನ್ನು ಪೂರೈಸುತ್ತವೆ. ಇವೆರಡೂ ಪರಸ್ಪರ ಸ್ಪರ್ಧಿಸುವುದಿಲ್ಲ. ಈ ಲೇಖನದಲ್ಲಿ ಚರ್ಚಿಸಿರುವಂತೆ ಸೂಪರ್ ಮಾರುಕಟ್ಟೆಗಳು ಕಿರಾಣ ಮಾರುಕಟ್ಟೆಗಳನ್ನು ಆಕ್ರಮಿಸಿಕೊಳ್ಳುವ ಯಾವುದೇ ಬೆದರಿಕೆ ಇಲ್ಲ. ಈ ಲೇಖನದಲ್ಲಿ ಮುಖ್ಯ ಒತ್ತು ನೀಡಿ ಸಲಹೆ ನೀಡಿರುವಂತೆ ವಿದೇಶಿ ಸಂಸ್ಥೆಗಳು ಸಮರ್ಥವಾದ ತಂತ್ರಜ್ಞಾನದ ಬೆಂಬಲ ಮತ್ತು ಬಡ ರೈತರಿಗೆ ಪ್ರಾಯೋಗಿಕ ತಾಂತ್ರಿಕ ಜ್ಞಾನದ ಮಾಹಿತಿ ನೀಡಬೇಕು. ಮೊದಲೇ ಮಾಡಿಕೊಂಡ ಒಪ್ಪಂದದ ದರದಂತೆ ರೈತರ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವ ಭರವಸೆ ನೀಡಬೇಕು. ❑

## ಅಭಿನಂದನೆ

ಯೋಜನಾ ಪತ್ರಿಕೆಯ
ಸಂಪಾದಕರಾಗಿದ್ದ
**ಶ್ರೀ ಕೆ.ಎಸ್. ಅಚ್ಯುತನ್**
ಅವರು
ರಾಜ್ಯೋತ್ಸವ ಪ್ರಶಸ್ತಿಗೆ
ಭಾಜನರಾಗಿದ್ದಾರೆ.
ಅವರಿಗೆ "ಯೋಜನಾ"ದ
ಅಭಿನಂದನೆಗಳು.

# ಕೇಂದ್ರ ಸಚಿವ ಸಂಪುಟ

**1. ಪ್ರಧಾನ ಮಂತ್ರಿ ನರೇಂದ್ರ ಮೋದಿ – ಸಿಬ್ಬಂದಿ, ಸಾರ್ವಜನಿಕ ಕುಂದು ಕೊರತೆ, ಪಿಂಚಣಿ, ಪರಮಾಣು ಶಕ್ತಿ, ಬಾಹ್ಯಾಕಾಶ, ಹಂಚಿಕೆಯಾಗದ ಎಲ್ಲ ಖಾತೆಗಳು ಹಾಗೂ ಎಲ್ಲ ಪ್ರಮುಖ ನೀತಿ ವಿಷಯ**

## ಸಂಪುಟ ದರ್ಜೆ ಸಚಿವರು

| | | |
|---|---|---|
| 2 | ರಾಜನಾಥ್ ಸಿಂಗ್ | ಗೃಹ ವ್ಯವಹಾರ |
| 3 | ಸುಷ್ಮಾ ಸ್ವರಾಜ್ | ವಿದೇಶಾಂಗ ಮತ್ತು ಸಾಗರೋತ್ತರ ವ್ಯವಹಾರ |
| 4 | ಅರುಣ್ ಜೇಟ್ಲಿ | ಹಣಕಾಸು, ಕಾರ್ಪೋರೇಟ್ ವ್ಯವಹಾರ, ಮಾಹಿತಿ ಮತ್ತು ಪ್ರಸಾರ ಖಾತೆಗಳು |
| 5 | ಎಂ. ವೆಂಕಯ್ಯ ನಾಯ್ಡು | ನಗರಾಭಿವೃದ್ಧಿ, ವಸತಿ, ನಗರ ಬಡತನ ನಿರ್ಮೂಲನೆ, ಸಂಸದೀಯ ವ್ಯವಹಾರ |
| 6 | ನಿತಿನ್ ಜೈರಾಂ ಗಡ್ಕರಿ | ರಸ್ತೆ ಸಾರಿಗೆ ಮತ್ತು ಹೆದ್ದಾರಿ, ನೌಕಾಯಾನ |
| 7 | ಮನೋಹರ್ ಪರಿಕ್ಕರ್ | ರಕ್ಷಣೆ |
| 8 | ಸುರೇಶ್ ಪ್ರಭು | ರೈಲ್ವೆ |
| 9 | ಡಿ.ವಿ. ಸದಾನಂದ ಗೌಡ | ಕಾನೂನು ಮತ್ತು ನ್ಯಾಯಾಂಗ |
| 10 | ಉಮಾ ಭಾರತಿ | ಜಲ ಸಂಪನ್ಮೂಲ, ನದಿ ಅಭಿವೃದ್ಧಿ, ಗಂಗಾ ಪುನರುಜ್ಜೀವನ |
| 11 | ನಜ್ಮಾ ಹೆಫ್ತುಲ್ಲಾ | ಅಲ್ಪ ಸಂಖ್ಯಾತ ವ್ಯವಹಾರಗಳು |
| 12 | ರಾಮವಿಲಾಸ್ ಪಾಸ್ವಾನ್ | ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣೆ |
| 13 | ಕಲ್ರಾಜ್ ಮಿಶ್ರಾ | ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಪ್ರಮಾಣ ಉದ್ದಿಮೆಗಳು |
| 14 | ಮೇನಕಾ ಗಾಂಧಿ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ |
| 15 | ಅನಂತ ಕುಮಾರ್ | ರಾಸಾಯನಿಕ ಮತ್ತು ರಸಗೊಬ್ಬರಗಳು |
| 16 | ರವಿಶಂಕರ ಪ್ರಸಾದ್ | ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ |
| 17 | ಜಗತ್ ಪ್ರಕಾಶ್ ನಡ್ಡಾ | ಆರೋಗ್ಯ ಮತ್ತು ಕುಟುಂಬ ಕಲ್ಯಾಣ |
| 18 | ಅಶೋಕ್ ಗಜಪತಿ ರಾಜು | ನಾಗರಿಕ ವಿಮಾನಯಾನ |
| 19 | ಅನಂತ ಗೀತೆ | ಬೃಹತ್ ಕೈಗಾರಿಕೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳು |
| 20 | ಹರ್ಸಿಮ್ರತ್ ಕೌರ್ ಬಾದಲ್ | ಆಹಾರ ಸಂಸ್ಕರಣಾ ಕೈಗಾರಿಕೆಗಳು |
| 21 | ನರೇಂದ್ರ ಸಿಂಗ್ ತೋಮರ್ | ಗಣಿಗಳು ಮತ್ತು ಉಕ್ಕು |
| 22 | ಚೌಧರಿ ಬೀರೇದರ್ ಸಿಂಗ್ | ಗ್ರಾಮೀಣ ಅಭಿವೃದ್ಧಿ ಪಂಚಾಯತಿ ರಾಜ್, ಕುಡಿಯುವ ನೀರು ಹಾಗೂ ನಿರ್ಮಲೀಕರಣ |
| 23 | ಜುವಲ್ ಓರಮ್ | ಬುಡಕಟ್ಟು ವ್ಯವಹಾರಗಳು |
| 24 | ರಾಧಾ ಮೋಹನ್ ಸಿಂಗ್ | ಕೃಷಿ |
| 25 | ತಾವರ್ ಚಂದ್ ಗೆಹ್ಲಾಟ್ | ಸಾಮಾಜಿಕ ನ್ಯಾಯ ಮತ್ತು ಸಶಕ್ತೀಕರಣ |
| 26 | ಸ್ಮೃತಿ ಜುಬಿನ್ ಇರಾನಿ | ಮಾನವ ಸಂಪನ್ಮೂಲ ಅಭಿವೃದ್ಧಿ |
| 27 | ಡಾ. ಹರ್ಷ ವರ್ಧನ್ | ವಿಜ್ಞಾನ ಮತ್ತು ತಂತ್ರಜ್ಞಾನ, ಭೂವಿಜ್ಞಾನ |

## ರಾಜ್ಯ ಸಚಿವರು

| | | |
|---|---|---|
| 28 | ಜನರಲ್ ವಿ.ಕೆ. ಸಿಂಗ್ | ಸಂಖ್ಯಾಶಾಸ್ತ್ರ ಮತ್ತು ಕಾರ್ಯಕ್ರಮ ಜಾರಿ (ಸ್ವತಂತ್ರ), ವಿದೇಶಾಂಗ ಮತ್ತು ಸಾಗರೋತ್ತರ ವ್ಯವಹಾರಗಳು |
| 29 | ಇಂದರ್‌ಜಿತ್ ಸಿಂಗ್ ರಾವ್ | ಯೋಜನೆ (ಸ್ವತಂತ್ರ), ರಕ್ಷಣೆ |
| 30 | ಸಂತೋಷ್ ಕುಮಾರ್ ಗಂಗ್ವಾರ್ | ಜವಳಿ (ಸ್ವತಂತ್ರ) |
| 31 | ಬಂಡಾಯ ದತ್ತಾತ್ತೇಯ | ಕಾರ್ಮಿಕ ಮತ್ತು ಉದ್ಯೋಗ (ಸ್ವತಂತ್ರ) |

# ಕೇಂದ್ರ ಸಚಿವ ಸಂಪುಟ

| | | |
|---|---|---|
| 32 | ರಾಜೀವ್ ಪ್ರತಾಪ್ ರೂಡಿ | ಕೌಶಲ್ಯ ಅಭಿವೃದ್ಧಿ / ಉದ್ಯಮ ಶೀಲತೆ (ಸ್ವತಂತ್ರ) ಸಂಸದೀಯ ವ್ಯವಹಾರಗಳು |
| 33 | ಶ್ರೀಪಾದ್ ಯೆಸ್ಸೊ ನಾಯ್ಕ್ | ಆಯುಷ್ (ಸ್ವತಂತ್ರ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ |
| 34 | ಧರ್ಮೇಂದ್ರ ಪ್ರಧಾನ್ | ಪೆಟ್ರೋಲಿಯಂ / ನೈಸರ್ಗಿಕ ಅನಿಲ (ಸ್ವತಂತ್ರ) |
| 35 | ಸರ್ಬಾನಂದ ಸೊನೊವಾಲ್ | ಯುವ ವ್ಯವಹಾರಗಳು ಮತ್ತು ಕ್ರೀಡೆಗಳು (ಸ್ವತಂತ್ರ) |
| 36 | ಪ್ರಕಾಶ್ ಜಾವಡೇಕರ್ | ಪರಿಸರ, ಅರಣ್ಯ ಹಾಗೂ ಹವಾಮಾನ ವೈಪರೀತ್ಯ (ಸ್ವತಂತ್ರ) |
| 37 | ಪಿಯೂಶ್ ಗೋಯಲ್ | ವಿದ್ಯುತ್, ಕಲ್ಲಿದ್ದಲು, ನವ ಮತ್ತು ಮರುಬಳಕೆ ಇಂಧನ (ಸ್ವತಂತ್ರ) |
| 38 | ಡಾ. ಜಿತೇಂದ್ರ ಸಿಂಗ್ | ಈಶಾನ್ಯ ಪ್ರಾಂತ್ಯಗಳ ಅಭಿವೃದ್ಧಿ (ಸ್ವತಂತ್ರ), ಪ್ರಧಾನಿ ಕಾರ್ಯಾಲಯ, ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಹಾಗೂ ಪಿಂಚಣಿ, ಪರಮಾಣು ಇಂಧನ ಹಾಗೂ ಬಾಹ್ಯಾಕಾಶ |
| 39 | ನಿರ್ಮಲಾ ಸೀತಾರಾಮನ್ | ವಾಣಿಜ್ಯ ಮತ್ತು ಕೈಗಾರಿಕೆ (ಸ್ವತಂತ್ರ) |
| 40 | ಡಾ. ಮಹೇಶ್ ಶರ್ಮ | ಸಂಸ್ಕೃತಿ, ಪ್ರವಾಸೋದ್ಯಮ ನಾಗರಿಕ ವಿಮಾನಯಾನ |
| 41 | ಮುಖ್ತಾರ್ ಅಬ್ಬಾಸ್ ನಕ್ವಿ | ಅಲ್ಪ ಸಂಖ್ಯಾತ ಮತ್ತು ಸಂಸದೀಯ ವ್ಯವಹಾರ |
| 42 | ರಾಮ್ ಕೃಪಾಲ್ ಯಾದವ್ | ಕುಡಿಯುವ ನೀರು ಮತ್ತು ನಿರ್ಮಲೀಕರಣ |
| 43 | ಹರಿಭಾಯಿ ಪಾರ್ಥೀಭಾಯಿ ಚೌಧರಿ | ಗೃಹ ವ್ಯವಹಾರಗಳು |
| 44 | ಸನ್ವರ್‌ಲಾಲ್ ಜಾಟ್ | ಜಲಸಂಪನ್ಮೂಲ, ನದಿ ಅಭಿವೃದ್ಧಿ ಮತ್ತು ಗಂಗಾ ಪುನರುಜ್ಜೀವನ |
| 45 | ಮೋಹನ್‌ಭಾಯಿ ಕುಂಡರಿಯ | ಕೃಷಿ |
| 46 | ಗಿರಿರಾಜ್ ಸಿಂಗ್ | ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳು |
| 47 | ಹನ್ಸ್‌ರಾಜ್ ಗಂಗಾರಾಮ್ | ಅಹಿರ್ ರಸಾಯನಿಕ ಮತ್ತು ರಸಗೊಬ್ಬರ |
| 48 | ಜಿ. ಎಂ. ಸಿದ್ದೇಶ್ವರ | ಬೃಹತ್ ಕೈಗಾರಿಕೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳು |
| 49 | ಮನೋಜ್ ಸಿನ್ಹಾ | ರೈಲ್ವೆ |
| 50 | ನಿಹಾಲ್ ಚಂದ್ | ಪಂಚಾಯಿತಿ ರಾಜ್ |
| 51 | ಉಪೇಂದ್ರ ಕುಶ್ವಾಹ | ಮಾನವ ಸಂಪನ್ಮೂಲ ಅಭಿವೃದ್ಧಿ |
| 52 | ರಾಧಾ ಕೃಷ್ಣನ್ ಪಿ. | ರಸ್ತೆ ಸಾರಿಗೆ, ಹೆದ್ದಾರಿ ಮತ್ತು ನೌಕಾಯಾನ |
| 53 | ಕಿರಣ್ ರಿಜಿಜು | ಗೃಹ ವ್ಯವಹಾರ |
| 54 | ಕೃಷ್ಣನ್ ಪಾಲ್ | ಸಾಮಾಜಿಕ ನ್ಯಾಯ ಮತ್ತು ಸಶಕ್ತೀಕರಣ |
| 55 | ಡಾ. ಸಂಜೀವ್ ಕುಮಾರ್ | ಕೃಷಿ |
| 56 | ಡಾ. ಮನುಷ್ಕ್‌ಭಾಯಿ ಧನ್‌ಜಿಭಾಯಿ | ಬುಡಕಟ್ಟು ವ್ಯವಹಾರ |
| 57 | ರಾವ್ ಸಾಹೇಬ್ ದಾದಾರಾವ್ ದನ್ವೆ | ಗ್ರಾಹಕ ವ್ಯವಹಾರ, ಆಹಾರ ಮತ್ತು ಸಾರ್ವಜನಿಕ ವಿತರಣೆ |
| 58 | ವಿಷ್ಣುದೇವ್ ಸಾಯಿ | ಗಣಿ ಮತ್ತು ಉಕ್ಕು |
| 59 | ಸುದರ್ಶನ್ ಭಗತ್ | ಗ್ರಾಮೀಣಾಭಿವೃದ್ಧಿ |
| 60 | ಪ್ರೊ. ರಾಮ್ ಶಂಕರ್ | ಮಾನವ ಸಂಪನ್ಮೂಲ ಅಭಿವೃದ್ಧಿ |
| 61 | ವೈ. ಎಸ್. ಚೌಧರಿ | ವಿಜ್ಞಾನ, ತಂತ್ರಜ್ಞಾನ ಮತ್ತು ಭೂ ವಿಜ್ಞಾನ |
| 62 | ಜಯಂತ್ ಸಿನ್ಹಾ | ಹಣಕಾಸು |
| 63 | ರಾಜ್ಯವರ್ಧನ್ ಸಿಂಗ್ ರಾಥೋಡ್ | ವಾರ್ತಾ ಮತ್ತು ಪ್ರಸಾರ |
| 64 | ಬಾಬುಲ್ ಸುಪ್ರಿಯಾ ಬಾರಲ್ | ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ನಗರ ಬಡತನ ನಿರ್ಮೂಲನೆ |
| 65 | ಸಾಧ್ವಿ ನಿರಂಜನ್ ಜ್ಯೋತಿ | ಆಹಾರ ಸಂಸ್ಕರಣಾ ಕೈಗಾರಿಕೆಗಳು |
| 66 | ವಿಜಯ್ ಸಂಪ್ಲಾ | ಸಾಮಾಜಿಕ ನ್ಯಾಯ ಮತ್ತು ಸಶಕ್ತೀಕರಣ |

# ಹೊರ ಜಗತ್ತಿನೊಂದಿಗೆ ಆರ್ಥಿಕ ಸಂಬಂಧ

ತ್ರಿದೇವ ಸಿಂಗ್ ಮೈನಿ
ಕನ್ನಡಕ್ಕೆ : ಬಿ.ಸಿ. ಶೋಭಾ




ಹೊರ ಜಗತ್ತಿನೊಂದಿಗೆ ಭಾರತದ ಸಂಬಂಧಗಳಲ್ಲಿ ರಾಜ್ಯಗಳ ನಿಗದಿತ ಪಾತ್ರವೇನು ಎಂಬುದರ ಬಗ್ಗೆ ಈವರೆಗೂ ಯಾವುದೇ ಸ್ಪಷ್ಟ ಚಿತ್ರಣವಿಲ್ಲ, ಆದಾಗ್ಯೂ ಹೊರಜಗತ್ತಿನೊಂದಿಗಿನ ದೇಶದ ಅರ್ಥಿಕ ಸಂಬಂಧಗಳಲ್ಲಿ ರಾಜ್ಯಗಳ ಪಾತ್ರ ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿದೆ. ಅದರಲ್ಲೂ ವಿಶೇಷವಾಗಿ ತಮ್ಮ ರಾಜ್ಯಗಳನ್ನು ಹೂಡಿಕೆದಾರರ ತಾಣವನ್ನಾಗಿ ಬಿಂಬಿಸಲು ಸರ್ಕಾರಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಶ್ರಮಿಸುತ್ತಿವೆ. ವಿದೇಶಾಂಗ ನೀತಿ, ಅದರಲ್ಲೂ ಆರ್ಥಿಕ ಪಾಲುದಾರಿಕೆಯಲ್ಲಿ ರಾಜ್ಯಗಳ ಪಾತ್ರವೇನಿರಬೇಕು ಎಂಬ ಬಗ್ಗೆ ಚರ್ಚೆಗಳು ನಡೆಯುತ್ತಿವೆ.

> **ಅಭಿವೃದ್ಧಿ ಹೊಂದದ ರಾಜ್ಯಗಳಲ್ಲಿ ಹೂಡಿಕೆ ಮಾಡುವುದರಿಂದ ಅಲ್ಲಿ ಮೂಲಸೌಕರ್ಯ ವೃದ್ಧಿಯಾಗುವುದಲ್ಲದೆ, ಮಾರುಕಟ್ಟೆ ಅವಕಾಶಗಳು ತೆರೆದುಕೊಳ್ಳುತ್ತವೆ ಮತ್ತು ಅದು ವಿದೇಶಿ ಹೂಡಿಕೆದಾರರಿಗೆ ಬಂಡವಾಳ ಹೂಡಲು ಉತ್ತೇಜನ ನೀಡುತ್ತದೆ. ಹೆಚ್ಚಿನ ಸ್ವದೇಶಿ ಹೂಡಿಕೆ ರಾಜ್ಯಗಳಿಗೆ ಬಂದರೆ ಅದು ಅಲ್ಲಿ ಉತ್ತಮ ವ್ಯಾಪಾರಿ ವಾತಾವರಣ ನಿರ್ಮಿಸುವುದಲ್ಲದೆ ಭಾರೀ ಪ್ರಮಾಣದ ಎಫ್‌ಡಿಐ ಆಕರ್ಷಿಸಲು ಸಹಾಯಕವಾಗುತ್ತದೆ.**

ದೇಶ ಹೊರಜಗತ್ತಿನೊಂದಿಗೆ ಹೊಂದಿರುವ ಆರ್ಥಿಕ ಸಂಬಂಧಗಳಲ್ಲಿ ರಾಜ್ಯ ಸರ್ಕಾರಗಳ ಪಾತ್ರಗಳ ಬಗ್ಗೆ ಭಾರತೀಯ ಸಂವಿಧಾನದಲ್ಲಿ ಯಾವುದೇ ಉಲೇಖವಿಲ್ಲ. ಕೇಂದ್ರದ ವಿಷಯಗಳ ಪಟ್ಟಿ (ಸಂವಿಧಾನದ 7ನೇ ಪರಿಚ್ಛೇದ, ಕಲಂ 246ರಲ್ಲಿ ಉಲ್ಲೇಖಿಸಿರುವಂತೆ) ಯಲ್ಲಿ ವಿದೇಶಾಂಗ ನೀತಿಯಲ್ಲಿ ಈ ಕೆಳಗಿನ ಅಂಶಗಳನ್ನು ಪ್ರಸ್ತಾಪಿಸಲಾಗಿದೆ.

1. ವಿದೇಶಾಂಗ ವ್ಯವಹಾರಗಳು: ಯಾವುದೇ ವಿದೇಶಗಳ ಕುರಿತ ಸಂಬಂಧಗಳು ಇದರಡಿ ಬರುತ್ತವೆ.
2. ರಾಜತಾಂತ್ರಿಕ, ರಾಯಭಾರ ಮತ್ತು ವ್ಯಾಪಾರಿ ಪಾಲುದಾರಿಕೆ.
3. ವಿಶ್ವ ಸಂಸ್ಥೆ (ಯುಎನ್‌ಓ)
4. ಅಂತಾರಾಷ್ಟ್ರೀಯ ಸಮಾವೇಶ, ಸಂಸ್ಥೆ ಹಾಗೂ ಇತರ ಸಂಘಟನೆಗಳಲ್ಲಿ ಪಾಲ್ಗೊಳ್ಳುವಿಕೆ ಮತ್ತು ಅಲ್ಲಿ ತೆಗೆದುಕೊಳ್ಳುವ ನಿರ್ಧಾರಗಳ ಅನುಷ್ಠಾನ.
5. ವಿದೇಶಗಳ ಜೊತೆ ತಿಳಿವಳಿಕೆ ಪತ್ರ ಅಥವ ಒಡಂಬಡಿಕೆಗಳನ್ನು ಮಾಡಿಕೊಳ್ಳುವುದು. ವಿದೇಶ ಗಳೊಂದಿಗೆ ಮಾಡಿಕೊಂಡಿರುವ ಒಪ್ಪಂದ, ಒಡಂಬಡಿಕೆಗಳನ್ನು ಅನುಷ್ಠಾನಗೊಳಿಸುವುದು (http// www.consituion.org/cons/india/shedo7.htm).

ದೇಶದ ರಾಜಕೀಯ ಮತ್ತು ಆರ್ಥಿಕ ಸ್ಥಿತಿ ಇಂದು ಮೊದಲಿಗಿಂತಲೂ ಭಿನ್ನವಾಗಿದೆ ಮತ್ತು ಹೊರಜಗತ್ತಿನೊಂದಿಗಿನ ಭಾರತದ ಸಂಬಂಧಗಳು ಇನ್ನೂ ಆಳವಾಗಿದ್ದು, ಅವು ಹಲವು ಕಾರಣಗಳಿಂದಾಗಿ ದೆಹಲಿಗೆ ಮಾತ್ರ ಸೀಮಿತಗೊಂಡಿಲ್ಲ.

### ವಿಚಾರದ ಪ್ರಸ್ತುತತೆ

ಹೊರ ಜಗತ್ತಿನೊಂದಿಗಿನ ದೇಶದ ಆರ್ಥಿಕ ಸಂಬಂಧಗಳಲ್ಲಿ ರಾಜ್ಯ ಸರ್ಕಾರಗಳ ಪಾತ್ರ ಮೊದಲಿಗಿಂತಲೂ ಹೆಚ್ಚಾಗುತ್ತಿದೆ.ಭಾರತದಲ್ಲಿ ಆಗುತ್ತಿರುವ ಬದಲಾವಣೆಗಳಿಂದಾಗಿ ಅದರಲ್ಲೂ ವಿಶೇಷವಾಗಿ ಭಾರತ ಆರ್ಥಿಕ ಸ್ಥಿತಿಗತಿಯಲ್ಲಿ ರಾಜ್ಯಗಳು ಪ್ರಮುಖ ಪಾತ್ರ ವಹಿಸುತ್ತಿವೆ.

ಹೊರಜಗತ್ತಿನೊಂದಿಗಿನ ಆರ್ಥಿಕ ಒಪ್ಪಂದಗಳಲ್ಲಿ ರಾಜ್ಯಗಳಿಗೆ ಹೆಚ್ಚಿನ ಸ್ವಾತಂತ್ರ್ಯ ನೀಡುವುದು ಪ್ರಸ್ತುತ ಸರ್ಕಾರದ ಪ್ರಮುಖ ಆಶಯವಾಗಿದೆ. ಹಾಗಾಗಿ ಹೊರಜಗತ್ತಿನೊಂದಿಗಿನ ಆರ್ಥಿಕ

ಅರ್ಥಶಾಸ್ತ್ರ ಸಂಶೋಧಕರು. e-mail : tsinghmaini2012@gmail.com

ಸಂಬಂಧಗಳಲ್ಲಿನ ರಾಜ್ಯ ಸರ್ಕಾರದ ಪಾತ್ರ ಪ್ರಾಮುಖ್ಯತೆ ಪಡೆದುಕೊಳ್ಳುತ್ತಿದೆ,

ಅಕ್ಟೋಬರ್ 2014ರಲ್ಲಿ ಇಂದೋರ್‌ನಲ್ಲಿ ನಡೆದ ಮಧ್ಯಪ್ರದೇಶ ಹೂಡಿಕೆದಾರರ ಸಮಾವೇಶವನ್ನು ಉದ್ದೇಶಿಸಿ ಭಾಷಣ ಮಾಡಿದ ಪ್ರಧಾನಮಂತ್ರಿ "100 ಬಿಲಿಯನ್‌ಗೂ ಅಧಿಕ ವಿದೇಶಿ ನೇರ ಬಂಡವಾಳ ದೇಶಕ್ಕೆ ಹರಿದುಬರಲಿದ್ದು, ಅದನ್ನು ಸಮರ್ಪಕವಾಗಿ ಬಳಸಿಕೊಳ್ಳುವುದು ರಾಜ್ಯ ಸರ್ಕಾರಗಳ ಕೈಯಲ್ಲಿದೆ "ಎಂದು ಹೇಳಿದ್ದಾರೆ.

ಸೆಪ್ಟಂಬರ್ 2014ರಲ್ಲಿ ನವದೆಹಲಿಯಲ್ಲಿ 'ಮೇಕ್ ಇನ್ ಇಂಡಿಯಾ' ಯೋಜನೆಗೆ ಚಾಲನೆ ನೀಡುವಾಗ ದೇಶದ ಪ್ರಧಾನಮಂತ್ರಿಗಳು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಒಗ್ಗೂಡಿ ದುಡಿಯಬೇಕಾದ ಅಗತ್ಯತೆಯನ್ನು ಪ್ರತಿಪಾದಿಸಿದ್ದಾರೆ. "ರಾಜ್ಯಗಳ ಅಭಿವೃದ್ಧಿ ಅತಿ ಪ್ರಮುಖವಾದುದು. ಬಂಡವಾಳ ಆಕರ್ಷಣೆಗೆ ರಾಜ್ಯಗಳು ಮತ್ತು ಕೇಂದ್ರ ಸರ್ಕಾರ ಜೊತೆಯಾಗಿ ಶ್ರಮಿಸಬೇಕು" "ರಾಜ್ಯಗಳ ಅಭಿವೃದ್ಧಿಯೇ ದೇಶದ ಅಭಿವೃದ್ಧಿ" ಎಂದು ಹೇಳಿದ್ದಾರೆ.

ಗುಜರಾತ್ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗಿನಿಂದಲೂ ಶ್ರೀ ನರೇಂದ್ರ ಮೋದಿ ಅವರು ವಿದೇಶಗಳ ವಾಣಿಜ್ಯ ಮತ್ತು ವ್ಯಾಪಾರ ಸಂಬಂಧಗಳಲ್ಲಿ ರಾಜ್ಯಗಳನ್ನೂ ಪಾಲುದಾರರನ್ನಾಗಿ ಮಾಡಬೇಕು ಎಂದು ಬಲವಾದ ವಾದ ಮಂಡಿಸುತ್ತಿದ್ದರು. ಈ ವಾದ ಇನ್ನಷ್ಟು ಬಲಗೊಂಡಿದ್ದು, 2003ರ ವೈಬ್ರೆಂಟ್ ಗುಜರಾತ್ ಸಮಾವೇಶದಲ್ಲಿ. ಸಮಾವೇಶದಲ್ಲಿ ಕೇವಲ ಕೈಗಾರಿಕೋದ್ಯಮಿಗಳಷ್ಟೇ ಭಾಗವಹಿಸಿರಲಿಲ್ಲ, ಏಷ್ಯಾ, ಆಫ್ರಿಕಾ ಮತ್ತು ಯುರೋಪ್ ರಾಷ್ಟ್ರಗಳ ಹಲವು ರಾಯಭಾರಿಗಳು ಪಾಲ್ಗೊಂಡಿದ್ದರು. ಆಗಿನ ಗುಜರಾತ್ ಮುಖ್ಯಮಂತ್ರಿಗಳು ತಾವೇ ಸ್ವತಃ ಸಿಂಗಾಪುರ್, ಚೀನಾ ಮತ್ತು ಜಪಾನ್ ದೇಶಗಳಿಗೆ ವಾಣಿಜ್ಯ ನಿಯೋಗಗಳನ್ನು ಕೊಂಡೊಯ್ದಿದ್ದರು.

ಇತ್ತೀಚಿನ ದಿನಗಳಲ್ಲಿ ಹಲವು ದೇಶಗಳ ನಡುವಿನ ಸಂಬಂಧ ಬಲವರ್ಧನೆಯಲ್ಲಿ ಗುಜರಾತ್ ಮುಂಚೂಣಿಯಲ್ಲಿದೆ. 1990ರ ದಶಕದಲ್ಲೇ ಮುಖ್ಯಮಂತ್ರಿಗಳು ತಮ್ಮ ರಾಜ್ಯದ ಬ್ರಾಂಡ್ ಅಂಬಾಸಿಡರ್ ಆಗಿ ಸಹಿ ಹಾಕಿದ್ದರು. ದೇಶದಲ್ಲಿನ ಆರ್ಥಿಕ ಸುಧಾರಣೆಗಳು ಹಾಗೂ ವಿಶ್ವ ಮಟ್ಟದಲ್ಲಿ ಭಾರತದ ವರ್ಚಸ್ಸು ಬದಲಾವಣೆ ಆಗುತ್ತಿರುವುದು ಮತ್ತು ವಿದೇಶದಲ್ಲಿ ನೆಲೆಸಿರುವ ಭಾರತೀಯರು ಹಾಗೂ ಮಾಹಿತಿ ಮತ್ತು ತಂತ್ರಜ್ಞಾನ ಯುಗದಲ್ಲಿ ದೇಶದ ಅರ್ಥಿಕ ಶಕ್ತಿವರ್ಧನೆಗೆ ಪೂರಕವಾಗಿವೆ. ಒಕ್ಕೂಟ ವ್ಯವಸ್ಥೆ ಮತ್ತು ಜಾಗತಿಕರಣ ಈ ಎರಡು ಅಂಶಗಳು ಆ ದಿಕ್ಕನ್ನು ಬದಲಾಯಿಸುತ್ತಿವೆ. ಎರಡೂ ಅತಿಬಲವಾದ ಅಂಶಗಳೇ. ಜೆನ್‌ಕಿನ್ಸ್ ಏಷ್ಯಾ ಕುರಿತಾದ ತನ್ನ ಸಮೀಕ್ಷೆಯ ಲೇಖನ "ಒಕ್ಕೂಟ ವ್ಯವಸ್ಥೆ ಭಾರತೀಯ ದೇಶೀಯ ರಾಜಕಾರಣ ಹೇಗೆ ವಿಶ್ವ ವ್ಯಾಪಾರ ಸಂಸ್ಥೆ (ಡಬ್ಲೂಟಿಒ) ಜೊತೆಗಿನ ಸಂಬಂಧಗಳ ಮೇಲೆ ಪರಿಣಾಮ ಬೀರಬಲ್ಲದು (ಅದೇ ಹೇಗೆ ಪ್ರಕ್ರಿಯೆಗೆ ತೊಂದರೆಯಾಗಲಿದೆ)" ದಲ್ಲಿ ಈ ವಾದ ಮಂಡಿಸಿದ್ದಾರೆ.

"ಭಾರತದ ವಿಷಯದಲ್ಲಿ ಜಾಗತೀಕರಣ ಮತ್ತು ಒಕ್ಕೂಟ ಪ್ರಜಾಪ್ರಭುತ್ವ ವ್ಯವಸ್ಥೆ ಪ್ರಾಯೋಗಿಕವಾಗಿ ಹಲವು ಸನ್ನಿವೇಶಗಳಲ್ಲಿ ಸಂದಿಸುತ್ತವೆ. ಅದಕ್ಕೆ ಒಂದು ಕಾರಣವೆಂದರೆ ಒಕ್ಕೂಟ ವ್ಯವಸ್ಥೆ ಮತ್ತು ನಿರಂತರವಾಗಿ ಬೆಳವಣಿಗೆ ಹೊಂದುತ್ತಿರುವ ಜಾಗತೀಕರಣ. ಜಾಗತೀಕರಣವಂತೂ ಸದಾ ಬದಲಾಗುತ್ತಿರುತ್ತದೆ, ಅದೇ ರೀತಿ ಒಕ್ಕೂಟ ವ್ಯವಸ್ಥೆಯೂ ಸಹ. ಎರಡು ಸಂದರ್ಭಗಳಲ್ಲಿ ಅದು ಬದಲಾಗುತ್ತದೆ. ಮೊದಲನೆಯದಾಗಿ ಒಕ್ಕೂಟ ವ್ಯವಸ್ಥೆಯಲ್ಲಿ ಸತತ ಸುಧಾರಣೆಗಳು ನಡೆಯುತ್ತಿರುತ್ತವೆ. ಎರಡನೆಯದಾಗಿ ಕೇಂದ್ರ ಮತ್ತು ರಾಜ್ಯಗಳ ನಡುವಿನ ರಾಜಕೀಯ ಸಂಬಂಧಗಳು ಬದಲಾವಣೆಗೊಳಗಾಗುತ್ತವೆ. ಅದ್ದರಿಂದ ವ್ಯವಸ್ಥೆಯಲ್ಲಿ ಸಾಕಷ್ಟು ಬದಲಾವಣೆಯಾಗುವುದಲ್ಲದೆ, ಅಂತರ ಸರ್ಕಾರ ವ್ಯವಸ್ಥೆಯಲ್ಲೂ ಬದಲಾವಣೆಗಳಾಗುತ್ತವೆ".

ಮೊದಲ ಅತ್ಯುತ್ತಮ ಉದಾಹರಣೆ ಎಂದರೆ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಶ್ರೀ ಚಂದ್ರಬಾಬು ನಾಯ್ಡು, ತಮ್ಮ ರಾಜ್ಯವನ್ನು ಬಿಂಬಿಸಿದ್ದು, ಶ್ರೀ ನಾಯ್ಡು ಮೈಕ್ರೋಸಾಫ್ಟ್ ಮುಖ್ಯಸ್ಥ ಶ್ರೀ ಬಿಲ್‌ಗೇಟ್ಸ್ ಅವರನ್ನು 1997ರಲ್ಲಿ ಭೇಟಿಮಾಡಿ, ತಮ್ಮ ಮುನ್ನೋಟದಿಂದ ಅವರ ಗಮನ ಸೆಳೆದಿದ್ದರು, ಅದರ ಪರಿಣಾಮ ಮೈಕ್ರೋಸಾಫ್ಟ್ ಮುಖ್ಯಸ್ಥರು ಮೊದಲ ಬಾರಿಗೆ ಭಾರತದಲ್ಲಿ, ಅಭಿವೃದ್ಧಿ ಕೇಂದ್ರವನ್ನು ಹೈದರಾಬಾದ್‌ನಲ್ಲಿ ತೆರೆದಿದ್ದರು. (ಹೈದರಾಬಾದ್ ಇದೀಗ ತೆಲಂಗಾಣ ರಾಜಧಾನಿ ಆಗಿದೆ. ಹಿಂದೆ



ಅದು ಆಂಧ್ರಪ್ರದೇಶದ ರಾಜಧಾನಿ ಆಗಿತ್ತು) ಇದರಿಂದಾಗಿ ಹೈದರಾಬಾದ್ ನಗರ ಐಟಿ ಕ್ಷೇತ್ರದಲ್ಲಿ ತನ್ನ ವರ್ಚಸ್ಸು ವೃದ್ಧಿಸಿಕೊಂಡು ಅದು ಸೈಬರಾಬಾದ್ ಎಂದು ಕರೆಸಿಕೊಂಡಿತು. ರುಡೋಲ್ಫ್ ಮತ್ತು ರುಡೋಲ್ಫ್ "ಚಂದ್ರಬಾಬು ಅವರ ಸ್ಥಳೀಯತೆ: ಭಾರತೀಯ ಒಕ್ಕೂಟ ಮಾರುಕಟ್ಟೆ ಅರ್ಥವ್ಯವಸ್ಥೆಯಲ್ಲಿ ಸರ್ವಾಧಿಕಾರ ಹಂಚಿಕೆ" ಎಂಬ ಶೀರ್ಷಿಕೆ ಇರುವ ದಿ ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿಗೆ 2001ರಲ್ಲಿ ಬರೆದ ಲೇಖನದಲ್ಲಿ ಅವರು ಶ್ರೀ ನಾಯ್ಡು ಮತ್ತು ಆಗ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಶ್ರೀ ಎಸ್.ಎಂ. ಕೃಷ್ಣ ಅವರು ತಮ್ಮ ನಗರಗಳನ್ನು ಐಟಿ ತಾಣಗಳನ್ನಾಗಿ ಮಾಡಲು ನಡೆಸಿದ ಪ್ರಯತ್ನವನ್ನು ಉಲ್ಲೇಖಿಸಿದ್ದಾರೆ. ಅದಾದ ನಂತರ ಕಳೆದ ಎರಡು ದಶಕದಲ್ಲಿ ಹಲವಾರು ಬದಲಾವಣೆಗಳಾಗಿದ್ದು, ಹಲವು ರಾಜ್ಯಗಳು ತಮ್ಮ ತಮ್ಮಲ್ಲೇ ಸ್ಪರ್ಧೆಗೆ ಬಿದ್ದಿವೆ. ಉಭಯ ನಾಯಕರು ಮಾಹಿತಿ ತಂತ್ರಜ್ಞಾನ ವಲಯವನ್ನು ಬಹುವಾಗಿ ಪ್ರತಿಪಾದಿಸಿದರು. ಬೇರೆ ರಾಷ್ಟ್ರಗಳ ನಾಯಕರೊಂದಿಗೆ ಸಮಾಲೋಚಿಸಿ ತಮ್ಮ ಸಾಮರ್ಥ್ಯವನ್ನು ಅರಿವು ಮಾಡಿಕೊಟ್ಟರು. ಅಮೆರಿಕದ ಅಧ್ಯಕ್ಷ ಬಿಲ್ ಕ್ಲಿಂಟನ್ ಮತ್ತು ಅವರ ಉತ್ತರಾಧಿಕಾರಿ ಜಾರ್ಜ್ ಡಬ್ಲ್ಯೂ ಬುಷ್ ಕ್ರಮವಾಗಿ 2000 ಹಾಗೂ 2006ರಲ್ಲಿ ಹೈದರಾಬಾದ್‌ಗೆ ಭೇಟಿ ನೀಡಿದರು. ಚೀನಾದ ಪ್ರಧಾನಿ ಶ್ರೀ ಲಿ ಪೆಂಗ್ 2001ರಲ್ಲಿ ಬೆಂಗಳೂರಿಗೆ ಭೇಟಿ ನೀಡಿದ್ದರು.

### ರಾಜ್ಯ ಹೂಡಿಕೆದಾರರ ಸಮಾವೇಶಗಳು

ರಾಜ್ಯ ಹೂಡಿಕೆದಾರರ ಸಮಾವೇಶಗಳತ್ತ ನೋಡುವುದಾದರೆ, ಗುಜರಾತ್‌ನಲ್ಲಿ 2003ರಲ್ಲಿ ವೈಬ್ರೆಂಟ್ ಗುಜರಾತ್ ಸಮಾವೇಶ ಆರಂಭವಾದ ನಂತರ ಬಿಹಾರ, ಮಧ್ಯಪ್ರದೇಶ,

ಪಂಜಾಬ್ ಮತ್ತು ತ್ರಿಪುರಾ ರಾಜ್ಯಗಳೂ ಸಹ ಅದನ್ನೇ ಅನುಕರಿಸಿದವು, ಈ ಹೂಡಿಕೆದಾರರ ಸಮಾವೇಶಗಳ ಸ್ವಭಾವ ಮತ್ತು ಕೇಂದ್ರ ಬಿಂದು ಬೇರೆಯೇ ಆಗಿತ್ತು. ಬಿಹಾರದಲ್ಲಿ 2012ರಲ್ಲಿ ನಡೆದ ಸಮಾವೇಶ ವಿಶೇಷವಾಗಿತ್ತು. ಏಕೆಂದರೆ ಮುಖ್ಯಮಂತ್ರಿ ಶ್ರೀ ನಿತೀಶ್‌ಕುಮಾರ್ ಸಮಾವೇಶಕ್ಕೆ ಹಿಂದಿನ ನೇಪಾಳ ಪ್ರಧಾನಮಂತ್ರಿ ಶ್ರೀ ಬಾಬುರಾಮ್ ಭಟ್ಟಾಯ್ ಅವರನ್ನು ಆಹ್ವಾನಿಸಿದ್ದರು. ಅಲ್ಲದೆ ಬಿಹಾರದ ಮುಖ್ಯಮಂತ್ರಿಗಳು ಸಮಗ್ರ ಅಭಿವೃದ್ಧಿ ಎಂದರೆ ದೇಶದ ಎಲ್ಲ ಭಾಗಗಳ ಅಭಿವೃದ್ಧಿ ಜೊತೆ ಜೊತೆಯಲ್ಲಿ ಸಾಗಬೇಕು, ಕೇವಲ ಕೆಲವು ಭೌಗೋಳಿಕ ಅನುಕೂಲವಿರುವ ಪ್ರಾಂತ್ಯಗಳು ಅಭಿವೃದ್ಧಿಯಾದರೆ ಸಾಲದು ಎಂದು ಪ್ರತಿಪಾದಿಸಿದರು.

2013ರಲ್ಲಿ ನಡೆದ ಪ್ರಗತಿಪರ ಪಂಜಾಬ್ ಹೂಡಿಕೆದಾರರ ಸಮಾವೇಶದ ಕೇಂದ್ರ ಬಿಂದು ಸ್ವದೇಶಿ ಖಾಸಗಿ ಹೂಡಿಕದಾರರಿಂದ ಬಂಡವಾಳ ಆಕರ್ಷಿಸುವುದಾಗಿತ್ತು. ಆ ನಂತರ ಪಂಜಾಬ್‌ನಲ್ಲಿ ಪ್ರವಾಸಿ ಪಂಜಾಬ್ ಸಮ್ಮೇಳನ ಎಂದು ನಾಮಕರಣ ಮಾಡಲಾಯಿತು. ಪಂಜಾಬ್ ಮೂಲದ ವಾಣಿಜ್ಯೋದ್ಯಮಿಗಳು ಹಾಗೂ ಕೆನಡಾದ ರಾಜಕಾರಣಿಗಳು ಮೇಳದಲ್ಲಿ ಭಾಗವಹಿಸಿದ್ದರು. ಕೇವಲ ಸಮಾವೇಶಗಳಲ್ಲದೆ ಹಲವು ಮುಖ್ಯಮಂತ್ರಿಗಳು ಇತರೆ ರಾಷ್ಟ್ರಗಳಿಗೆ ನಿಯೋಗಗಳನ್ನು ಕೊಂಡೊಯ್ದಿದ್ದಾರೆ. ಪೂರ್ವ ಏಷ್ಯಾ ರಾಷ್ಟ್ರಗಳಿಗೆ ಹಲವು ಮುಖ್ಯಮಂತ್ರಿಗಳು ತೀರಾ ಇತ್ತೀಚಿನವರೆಗೂ ನಿಯೋಗಗಳ ನೇತೃತ್ವ ವಹಿಸಿದ್ದರು. ಇದರಲ್ಲಿ ತೆಲಂಗಾಣ ಮುಖ್ಯಮಂತ್ರಿ (ಶ್ರೀ ಕೆ.ಸಿ.ಆರ್. ರಾವ್), ಪಶ್ಚಿಮಬಂಗಾಳ ಮುಖ್ಯಮಂತ್ರಿ (ಕುಮಾರಿ ಮಮತಾ ಬ್ಯಾನರ್ಜಿ) ಮತ್ತು ರಾಜಸ್ಥಾನ ಮುಖ್ಯಮಂತ್ರಿ (ಶ್ರೀಮತಿ ವಸುಂಧರಾ ರಾಜೆ ಸಿಂಧಿಯಾ) ಸಿಂಗಾಪುರ ಪ್ರವಾಸ ಕೈಗೊಂಡಿದ್ದರು. 2013ರಲ್ಲಿ ಕರ್ನಾಟಕದ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಚೀನಾಕ್ಕೆ ಭೇಟಿ ನೀಡಿದ್ದರು.

ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸುವುದು ಮಾತ್ರವಲ್ಲದೆ, ಹಲವು ನಾಯಕರು ವಿಶ್ವಬ್ಯಾಂಕ್ ಸೇರಿದಂತೆ ಹಲವು ಮಹತ್ವದ ಸಂಸ್ಥೆಗಳ ಜತೆ ಒಪ್ಪಂದಗಳನ್ನು ಮಾಡಿಕೊಂಡಿವೆ. ಕೃಷಿ ಸೇರಿದಂತೆ ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವನ್ನು ತನ್ನ ಜತೆ ಸೇರಿಸಿಕೊಂಡು ರಾಜ್ಯಗಳು ಸಮಾಲೋಚನೆಗಳನ್ನು ನಡೆಸಿವೆ.

ಹೊರ ದೇಶಗಳೊಂದಿಗಿನ ಭಾರತದ ಆರ್ಥಿಕ ಸಂಬಂಧಗಳಲ್ಲಿ ರಾಜ್ಯ ಸರ್ಕಾರಗಳ ಪಾತ್ರ ಹೆಚ್ಚುತ್ತಿದ್ದು, ಅದು ಇನ್ನಷ್ಟು ಬಲಗೊಳ್ಳುವ ಅಗತ್ಯವಿದೆ.

### ಆರ್ಥಿಕ ರಾಜತಂತ್ರ

ಪ್ರಸಕ್ತ ಸರ್ಕಾರ ಭಾರತವನ್ನು ಉತ್ಪಾದನಾ ತಾಣವನ್ನಾಗಿ ರೂಪಿಸುವ ಗುರಿ ಹೊಂದಿದೆ. ಜತೆಗೆ ಎಲ್ಲ ರಾಜ್ಯಗಳೊಂದಿಗೂ ಸಹಭಾಗಿತ್ವದ ಸಂಬಂಧ ಹೊಂದುವ ಉದ್ದೇಶ ಹೊಂದಿದೆ. ಅದಕ್ಕಾಗಿ ನೀತಿಗಳಲ್ಲಿ ಹಾಗೂ ಮನೋಭಾವಗಳಲ್ಲಿ ಹಲವು ಅಡ್ಡಿ ಆತಂಕಗಳಿದ್ದು, ಅವುಗಳನ್ನು ಬಗೆಹರಿಸುವತ್ತ ಗಮನಹರಿಸುತ್ತಿದೆ.

ಅದರಲ್ಲಿ ಮೊದಲನೆಯ ವಿಷಯವೆಂದರೆ ಸರ್ಕಾರದಿಂದ ಅಗತ್ಯವಿರುವ ಅನುಮತಿ ಪಡೆಯುವುದು ಮತ್ತು ರಫ್ತು ಮಂಡಳಿಗಳ ಪಾತ್ರ. ಪ್ರಧಾನಮಂತ್ರಿಗಳು ಇತ್ತೀಚೆಗೆ ಸಮಸ್ಯೆಗಳನ್ನು ಸರಿಪಡಿಸುವ ಬಗ್ಗೆ ಮಾತನಾಡುತ್ತಾ ರಾಜ್ಯಗಳೂ ಸಹ ರಫ್ತು ಉತ್ತೇಜನ ಮಂಡಳಿಗಳನ್ನು ಹೊಂದಬೇಕು ಹಾಗೂ ಅವುಗಳಿಗೆ ಹೆಚ್ಚಿನ ಅಧಿಕಾರ ನೀಡಬೇಕು ಎಂದು ಹೇಳಿದರು. ಅದಕ್ಕಾಗಿ ಕೆಲವು ನೀತಿಗಳಲ್ಲಿ ಬದಲಾವಣೆಗಳಾಗಬೇಕು. ಅಷ್ಟೇ ಅಲ್ಲ ಮನೋಭಾವವು ಬದಲಾಗಬೇಕು.

ಎರಡನೆ ಸಂಗತಿ ಎಂದರೆ ಅಸಮಾನತೆಗಳನ್ನು ಹೋಗಲಾಡಿಸುವ ಅಗತ್ಯತೆ ಇದೆ. ಕೆಲವು ರಾಜ್ಯಗಳು ಹೆಚ್ಚು ವಿದೇಶಿ ನೇರ ಬಂಡವಾಳ ಪಡೆದರೆ, ಉಳಿದ ರಾಜ್ಯಗಳಿಗೆ ಯಾವುದೇ ಎಫ್‌ಡಿಐ ಸಿಗುತ್ತಿಲ್ಲ, ಮಹಾರಾಷ್ಟ್ರ, ನವದೆಹಲಿ, ಗುಜರಾತ್ ಮತ್ತು ತಮಿಳುನಾಡು ಎಫ್‌ಡಿಐನಲ್ಲಿ ಸಿಂಹಪಾಲು ಪಡೆಯುತ್ತಿವೆ. ಇದಕ್ಕೆ ಅವುಗಳ ಭೌಗೋಳಿಕ ವಿನ್ಯಾಸ ಕಾರಣ. ಮಾರುಕಟ್ಟೆ ತಜ್ಞ ಶ್ರೀ ಮುಖರ್ಜಿ ಅವರು "ಭಾರತಕ್ಕೆ ಹರಿದುಬರುತ್ತಿರುವ ವಿದೇಶಿ ನೇರ ಬಂಡವಾಳದಲ್ಲಿ ಪ್ರಾದೇಶಿಕ ಅಸಮಾನತೆ; ಸಮಸ್ಯೆಗಳು ಮತ್ತು ಪರಿಹಾರಗಳು" ಕುರಿತ ಲೇಖನದಲ್ಲಿ ಈ ಅಂಶಗಳನ್ನು ಪ್ರಸ್ತಾಪಿಸಿದ್ದಾರೆ.

"ಏಪ್ರಿಲ್ 2000ದಿಂದ ಜೂನ್ 2012ರ ನಡುವಿನ ಅವಧಿಯಲ್ಲಿ ದೇಶಕ್ಕೆ ಹರಿದು ಬಂದಿರುವ ಒಟ್ಟಾರೆ ಎಫ್‌ಡಿಐನಲ್ಲಿ ಶೇಕಡ 70ರಷ್ಟು ವಿದೇಶಿ



ನೇರ ಬಂಡವಾಳವನ್ನು ದೇಶದ 6 ಪ್ರಮುಖ ರಾಜ್ಯಗಳು, ಮಹಾರಾಷ್ಟ್ರ, ದೆಹಲಿ, ಕರ್ನಾಟಕ, ತಮಿಳುನಾಡು, ಗುಜರಾತ್ ಮತ್ತು ಆಂಧ್ರಪ್ರದೇಶ ಆಕರ್ಷಿಸಿವೆ. ಇದು ಎಫ್‌ಡಿಐ ಒಂದೇ ಕಡೆ ಕೇಂದ್ರೀಕೃತವಾಗುತ್ತಿದೆ ಎಂಬುದನ್ನು ಬಿಂಬಿಸುತ್ತಿದೆ.

ಇದಕ್ಕೆ ಯಾವುದೇ ಅಡ್ಡದಾರಿಗಳಿಲ್ಲ ಆದರೆ ಯಾವ ರಾಜ್ಯಗಳು ಹಿಂದುಳಿದಿವೆಯೊ ಅವುಗಳಿಗೆ ಹೆಚ್ಚಿನ ಸಹಾಯ ಬೇಕಿದೆ. ಯಾವುದನ್ನು ಚೀನಾ ಸಾಧಿಸಿದೆಯೊ ಅದನ್ನು ಭಾರತ ಸಾಧಿಸಲಾಗುತ್ತಿಲ್ಲ, ತೀರ ಹಿಂದುಳಿದ ರಾಜ್ಯಗಳನ್ನು ಆರ್ಥಿಕ ತಾಣಗಳನ್ನಾಗಿ ರೂಪುಗೊಳಿಸಲಾಗಿಲ್ಲ, ಬಿಹಾರ ಮತ್ತು ಮಧ್ಯಪ್ರದೇಶ ಸಾಕಷ್ಟು ಪ್ರಗತಿ ಸಾಧಿಸಿದ್ದರೂ ಸಹ ಅವುಗಳು ಹೂಡಿಕೆದಾರರ ತಾಣಗಳಾಗಿ ಪರಿವರ್ತನೆಗೊಳ್ಳಲು ಇನ್ನು ಬಹುದೂರ ಕ್ರಮಿಸಬೇಕು ಎಂಬುದು ಅಷ್ಟೇ ಸತ್ಯ. ಪೂರ್ವದ ಇತರ ರಾಷ್ಟ್ರಗಳು ಮತ್ತು ಈಶಾನ್ಯ ರಾಜ್ಯಗಳತ್ತ ಇನ್ನು ಹೆಚ್ಚಿನ ಗಮನ ಹರಿಸಬೇಕಿದೆ. ವಾರಾಣಸಿಯಲ್ಲಿ ವ್ಯಾಪಾರ ಸಹಕಾರ ಕೇಂದ್ರಕ್ಕೆ ಶಂಕುಸ್ಥಾಪನೆ ನೆರವೇರಿಸಿದ ನಂತರ ನೇಕಾರರನ್ನುದ್ದೇಶಿಸಿ ಭಾಷಣ ಮಾಡಿದ ಪ್ರಧಾನಮಂತ್ರಿ ಈ ಎರಡೂ ಪ್ರಾಂತ್ಯಗಳ ಅಭಿವೃದ್ಧಿಯ ಅಗತ್ಯತೆಯನ್ನು ಪ್ರತಿಪಾದಿಸಿದರು. ದೇಶದ ಪಶ್ಚಿಮದ ರಾಜ್ಯಗಳು ಮಾತ್ರ ಆರ್ಥಿಕ ಪ್ರಗತಿ ಹೊಂದಿದರೆ ಸಾಲದು, ಅಭಿವೃದ್ಧಿ ಸಮಾನವಾಗಿರಬೇಕು ಎಂದು ಹೇಳಿದ್ದರು.

ಚಟರ್ಜಿ ಎಸ್., ಮಿಶ್ರಾ ಪಿ. ಮತ್ತು ಚಟರ್ಜಿ ಬಿ. ಅವರು 2013ರಲ್ಲಿ ನಡೆಸಿದ ಎಫ್‌ಡಿಐ ಹರಿವಿನಲ್ಲಿ ಅಂತರರಾಜ್ಯ

ವ್ಯತ್ಯಯಗಳು ಕುರಿತ ಸಮೀಕ್ಷೆಯಲ್ಲಿ ದೇಶೀಯ ಬಂಡವಾಳ ಆಕರ್ಷಣೆ ಯಶಸ್ಸಿಗೆ ಕೆಲವು ಅಂಶಗಳನ್ನು ಪಟ್ಟಿ ಮಾಡಿದ್ದಾರೆ. ಅವುಗಳೆಂದರೆ ಸಾರಿಗೆ ಮತ್ತು ಸಂವಹನ ಮತ್ತು ಮೂಲಸೌಕರ್ಯ,


ಕೇಂದ್ರ ಸರ್ಕಾರ ತನ್ನ ಭಾಗವಾಗಿ ಹೆಚ್ಚು ಹೆಚ್ಚು ಮೂಲಸೌಕರ್ಯ ಯೋಜನೆಗಳಿಗೆ ಆದ್ಯತೆ ನೀಡಬೇಕಿದೆ, ಈಶಾನ್ಯ ರಾಜ್ಯಗಳಲ್ಲಿ ದೊಡ್ಡ ಯೋಜನೆಗಳನ್ನು ಕೈಗೊಳ್ಳಬೇಕಿದೆ, ಆ ಮೂಲಕ ಭಾರತ ಮತ್ತು ಮ್ಯಾನ್ಮಾರ್ ನಡುವಿನ ಸಂಬಂಧ ಇನ್ನಷ್ಟು ವರ್ಧಿಸಲಿದೆ. ಇದರಿಂದಾಗಿ ದೇಶೀಯ ಹೂಡಿಕೆ ಹೆಚ್ಚಳವಾಗುವುದಲ್ಲದೆ, ಅದು ಎಫ್‌ಡಿಐ ಹೆಚ್ಚಳಕ್ಕೂ ಕಾರಣವಾಗಲಿದೆ.

ಅಭಿವೃದ್ಧಿ ಹೊಂದದ ರಾಜ್ಯಗಳಲ್ಲಿ ದೇಶೀಯ ಹೂಡಿಕೆ ಆಗುವುದರಿಂದ ಅಲ್ಲಿ ಮೂಲಸೌಕರ್ಯ ವೃದ್ಧಿಯಾಗುವುದಲ್ಲದೆ, ಮಾರುಕಟ್ಟೆ ಅವಕಾಶಗಳು ತೆರೆದುಕೊಳ್ಳುತ್ತವೆ ಮತ್ತು ಅದು ವಿದೇಶಿ ಹೂಡಿಕೆದಾರರಿಗೆ ಬಂಡವಾಳ ಹೂಡಲು ಉತ್ತೇಜನ ನೀಡುತ್ತದೆ. ಹೆಚ್ಚಿನ ಸ್ವದೇಶಿ ಹೂಡಿಕೆ ರಾಜ್ಯಗಳಿಗೆ ಬಂದರೆ ಅದು ಅಲ್ಲಿ ಉತ್ತಮ ವ್ಯಾಪಾರಿ ವಾತಾವರಣ ನಿರ್ಮಿಸುವುದಲ್ಲದೆ ಭಾರೀ ಪ್ರಮಾಣದ ಎಫ್‌ಡಿಐ ಆಕರ್ಷಿಸಲು ಸಹಾಯಕವಾಗುತ್ತದೆ.

ಈಶಾನ್ಯ ಭಾಗದ ರಾಜ್ಯಗಳನ್ನು ಅಭಿವೃದ್ಧಿ ಪಡಿಸುವುದರಿಂದ ವಿಶೇಷವಾಗಿ ಪಶ್ಚಿಮ ಬಂಗಾಳ ಸೇರಿದಂತೆ ಹಲವು ರಾಜ್ಯಗಳ ಅಭಿವೃದ್ಧಿಗೆ ನೆರವಾಗಲಿದೆ ಎಂಬುದು ಗಮನಿಸಲೇಬೇಕಾದ ಅಂಶ. ಕೋಲ್ಕತಾ ಪೂರ್ವ ಭಾರತದ ತಾಣವಾಗಿ ರೂಪುಗೊಳ್ಳಲಿದೆ. ತಡವಾಗಿಯಾದರೂ ಆ ರಾಜ್ಯ ಹೂಡಿಕೆದಾರರನ್ನು ಆಕರ್ಷಿಸಲು ಪ್ರಯತ್ನಿಸುತ್ತಿದೆ. ಚೀನಾದ ಯುನಾನ್ ಪ್ರಾಂತ್ಯದ ರಾಜಧಾನಿ ಕುನ್ಮಿಂಗ್ ಅಭಿವೃದ್ಧಿಗೆ ಚೀನಾ ಆಕ್ರಮಣಕಾರಿಯಾಗಿ ಮಾರುಕಟ್ಟೆ ಅವಕಾಶಗಳನ್ನು ಸೆಳೆದುಕೊಳ್ಳಲು ವಾರ್ಷಿಕ ಚೀನಾ–ದಕ್ಷಿಣ ಏಷ್ಯಾ ಮೇಳದ ಮೂಲಕ ಪ್ರಯತ್ನಿಸುತ್ತಿದೆ. ಇದು ಚೀನಾ ಮತ್ತು ಮ್ಯಾನ್ಮಾರ್ ನಡುವೆ ಪ್ರಮುಖ ಸೇತುವೆಯಾಗಿ ಮಾರ್ಪಾಟಾಗಿದ್ದು ಜತೆಗೆ ಮ್ಯಾನ್ಮಾರ್ ಮತ್ತು ಬಾಂಗ್ಲಾದೇಶದ ನಡುವಿನ ಸಂಪರ್ಕ ವ್ಯವಸ್ಥೆ ಬಲಗೊಳಿಸಿದೆ.

ಮೂರನೆಯದಾಗಿ ಯಾವ ರಾಜ್ಯಗಳು ಆರ್ಥಿಕ ಬಂಡವಾಳ ಆಕರ್ಷಣೆಗೆ ಮುಂದಾಗುತ್ತಿವೆಯೊ ಅವುಗಳು ಸಾಗರೋತ್ತರ ದೇಶಗಳಲ್ಲಿ ವ್ಯಾಪಾರಿ ಕಚೇರಿಗಳನ್ನು ತೆರೆಯಲು ಅನುಮತಿ ನೀಡುವುದಕ್ಕೆ ಇದು ಸಕಾಲ. ಈ ಪದ್ಧತಿ ಅಮೆರಿಕ, ಚೀನಾ ಮತ್ತು ಜಪಾನ್‌ಗಳಲ್ಲಿ ಸಾಮಾನ್ಯವಾಗಿದ್ದು, ಅವುಗಳು ಸಾಗರೋತ್ತರ ದೇಶಗಳಲ್ಲಿ ವ್ಯಾಪಾರಿ ಕೇಂದ್ರಗಳನ್ನು ತೆರೆಯಲು ತನ್ನ ಪ್ರಾಂತ್ಯಗಳಿಗೆ ಅವಕಾಶ ಕಲ್ಪಿಸುತ್ತವೆ. ಪ್ರಧಾನಮಂತ್ರಿಗಳು ಈ ಅಂಶವನ್ನು ಹಲವು ಬಾರಿ ಉಲ್ಲೇಖಿಸಿದ್ದಾರೆ. ಈ ಬಗ್ಗೆ ಹೆಚ್ಚಿನ ಗಮನ ಹರಿಸುವ ಅಗತ್ಯವಿದೆ. ಇದು ಪರಿಣಾಮಕಾರಿಯಾಗಿ ಜಾರಿಗೊಂಡರೆ ನಿರೀಕ್ಷಿತ ಫಲಿತಾಂಶ ಸಿಗಲಿದೆ ಎಂದು ಹೇಳಿದ್ದಾರೆ.

ರಾಜ್ಯಗಳು ವೈಯಕ್ತಿಕವಾಗಿ ವ್ಯಾಪಾರಿ ಕೇಂದ್ರಗಳನ್ನು ತೆರೆಯಲೇಬೇಕು ಎಂಬ ಒತ್ತಾಯವೇನಿಲ್ಲ, ಸಾಗರೋತ್ತರ ವ್ಯಾಪಾರ ಕೇಂದ್ರಗಳ ಬಗ್ಗೆ ಸಂಶೋಧನೆ ನಡೆಸಿರುವ ಆ್ಯಂಡ್ರ್ಯೊ ಜೆ ಕ್ಯಾಸಿ (2012 : 5) ತನ್ನ ಅಮೆರಿಕಾದ ಸಾಗರೋತ್ತರ ವ್ಯಾಪಾರಿ ಕೇಂದ್ರಗಳು ಕುರಿತ ಲೇಖನದಲ್ಲಿ ಈ ರೀತಿ ವಾದಿಸಿದ್ದಾರೆ. ಗ್ರೇಟ್ ಲೇಖ್ ಸ್ಟೇಟ್ಸ್ ಮಂಡಳಿ ಆಸ್ಟ್ರೇಲಿಯಾ, ಬ್ರೆಜಿಲ್, ಕೆನಡಾ, ಚಿಲಿ, ಚೀನಾ ಮತ್ತು ದಕ್ಷಿಣ ಆಫ್ರಿಕಾದಲ್ಲಿನ ಸಾಗರೋತ್ತರ ಕೇಂದ್ರಗಳ ಉಸ್ತುವಾರಿ ನೋಡಿಕೊಳ್ಳುತ್ತದೆ. ಈ ಮಂಡಳಿಯ ಸದಸ್ಯ ರಾಜ್ಯಗಳೆಂದರೆ ಇಲ್ಲೋಯಿಸ್, ಇಂಡಿಯಾನ, ಮಿಚಿಗನ್, ಮಿನೆಸೋಟಾ, ನ್ಯೂಯಾರ್ಕ್, ಓಹಿಯಾ, ಪೆನ್ಸಿಲ್‌ವೇನಿಯಾ ಮತ್ತು ವಿಸ್ಕೋಸಿನ್ ಈ ಯಾವುದಾದರೂ ರಾಜ್ಯಗಳಲ್ಲಿ ಕಚೇರಿಗಳನ್ನು ತೆರೆಯಬಹುದು. ಕೆಲವು ಸಂದರ್ಭಗಳಲ್ಲಿ ಭಾರತವೂ ಸಹ ಜಂಟಿ ವ್ಯಾಪಾರಿ ಕಚೇರಿಗಳ ಬಗ್ಗೆ ಚಿಂತಿಸಬಹುದು. ಇದು ಬಲಿಷ್ಠ ವ್ಯಾಪಾರ ಮತ್ತು ವಾಣಿಜ್ಯ ಸಂಬಂಧ ಹೊಂದಿರುವ ದೇಶಗಳಿಗೆ ಅತಿಮುಖ್ಯ. ಉದಾಹರಣೆಗೆ ಗುಜರಾತ್ ಮತ್ತು ತಮಿಳುನಾಡು, ಸಿಂಗಾಪುರದಲ್ಲಿ ಜಂಟಿ ವ್ಯಾಪಾರಿ ಕೇಂದ್ರವನ್ನು ತೆರೆಯಬಹುದು. ಗುಜರಾತ್ ಆ ದೇಶದೊಂದಿಗೆ ಬಲಿಷ್ಠ ಆರ್ಥಿಕ ಸಂಬಂಧ ಹೊಂದಿದ್ದರೆ ತಮಿಳುನಾಡು ಆ ದೇಶದೊಂದಿಗೆ ಬಲವಾದ ಐತಿಹಾಸಿಕ ಸಂಬಂಧ ಹೊಂದಿದೆ. ಅದೇ ರೀತಿ ಹಲವು ರಾಜ್ಯಗಳು ಅಮೆರಿಕದಲ್ಲಿ ಜಂಟಿ ವ್ಯಾಪಾರಿ ಕೇಂದ್ರಗಳನ್ನು ತೆರೆಯಬಹುದು. ಅದರಲ್ಲೂ ಭಾರತೀಯರು ಹೆಚ್ಚಿನ ಸಂಖ್ಯೆಯಲ್ಲಿ



ನೆಲೆಸಿರುವ ಕ್ಯಾಲಿಫೋರ್ನಿಯಾ, ನ್ಯೂಯಾರ್ಕ್, ನ್ಯೂಜೆರ್ಸಿ ಮತ್ತು ಟೆಕ್ಸಾಸ್‌ಗಳಲ್ಲಿ ಕೇಂದ್ರಗಳನ್ನು ತೆರೆಯಲು ಅವಕಾಶವಿದೆ. ಇದಲ್ಲದೆ ನೆರೆಯ ರಾಷ್ಟ್ರಗಳಲ್ಲೂ ವ್ಯಾಪಾರಿ ಕೇಂದ್ರಗಳನ್ನು ತೆರೆಯುವ ಅಗತ್ಯವಿದೆ. ಈಶಾನ್ಯ ರಾಜ್ಯಗಳು ಮ್ಯಾನ್ಮಾರ್ ಮತ್ತು ಬಾಂಗ್ಲಾದೇಶಗಳಲ್ಲಿ ತನ್ನ ಕಚೇರಿಗಳನ್ನು ಆರಂಭಿಸುವ ಬಗ್ಗೆ ಚಿಂತಿಸಬಹುದು.

ಕೊನೆಯದಾಗಿ ರಾಜ್ಯಗಳಲ್ಲಿ ನಡೆಯುವ ಹೂಡಿಕೆದಾರರ ಸಮಾವೇಶಗಳಿಗೆ ರಾಷ್ಟ್ರೀಯ ನಾಯಕರು ಆಗಮಿಸಿದರೆ ಆ ತಾಣಗಳು ಹೂಡಿಕೆದಾರರಿಗೆ ಮುಖ್ಯವಲ್ಲದಿದ್ದರೂ ಸಹ ಅವು ತಮ್ಮ ವರ್ಚಸ್ಸು ವೃದ್ಧಿಸಿಕೊಳ್ಳಲು ಆ ರಾಜ್ಯಗಳಿಗೆ ಕನಿಷ್ಠ ಗಮನವನ್ನಾದರೂ ನೀಡಿ ಹೂಡಿಕೆ ಮಾಡಬಹುದು. ಪ್ರಧಾನಮಂತ್ರಿಗಳು ಸಿಗಲಿಲ್ಲವಾದರೆ ಯಾರು ವಾಣಿಜ್ಯ ಸಚಿವರಾಗಿರುತ್ತಾರೊ ಅವರು ರಾಜ್ಯಗಳು ನಡೆಸುವ ಹೂಡಿಕೆದಾರರ ಸಮಾವೇಶಗಳಲ್ಲಿ ಅದರಲ್ಲೂ ವಿಶೇಷವಾಗಿ ಈಶಾನ್ಯ ರಾಜ್ಯಗಳ ಸಮಾವೇಶದಲ್ಲಿ ಭಾಗವಹಿಸುವುದು ಒಳ್ಳೆಯದು.

ರಾಜ್ಯ ಮತ್ತು ಕೇಂದ್ರ ಸರ್ಕಾರಗಳಲ್ಲದೆ ಹಲವು ಇತರ ಸಂಸ್ಥೆಗಳನ್ನು ಈ ಕಾರ್ಯದಲ್ಲಿ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ವಾಣಿಜ್ಯ ಮತ್ತು ವಾಣಿಜ್ಯ ಸಂಘ ಸಂಸ್ಥೆಗಳು, ಬುದ್ಧಿಜೀವಿಗಳು, ಅನಿವಾಸಿ ಭಾರತೀಯರನ್ನು ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಬಳಸಿಕೊಳ್ಳಬೇಕು. ದೇಶದಲ್ಲಿನ ರಾಜ್ಯ ಸರ್ಕಾರಗಳು ತಮ್ಮ ರಾಜ್ಯವನ್ನು ಮಾರುಕಟ್ಟೆ ಮಾಡಲು ಹೊಸ ಹೊಸ ಮಾರ್ಗಗಳ ಮೂಲಕ ಪ್ರಯತ್ನಿಸಬೇಕು. ❑

# ಕಾನೂನು – ಸಂದಿಗ್ಧದಲ್ಲಿ ಅನಿವಾಸಿ ಭಾರತೀಯರು

ಅನಿಲ್ ಮಲ್ಹೋತ್ರಾ

ಕನ್ನಡಕ್ಕೆ : ವಿ. ನಾಗರಾಜು




**ಅನಿವಾಸಿ ಭಾರತೀಯರಿಗೆ ನಮ್ಮ ದೇಶಕ್ಕೆ ಆಗಮಿಸಲು ಮುಕ್ತವಾದ ವ್ಯವಸ್ಥೆಯನ್ನು ಮಾಡಬೇಕಾದರೆ, ಅವರು ಬದುಕಲು ಸಂತೋಷದಾಯಕವಾದ ಕೌಟುಂಬಿಕ ಜೀವನ ಮತ್ತು ಸುಖಕರವಾದ ಸಾಮಾಜಿಕ ಜೀವನದ ಸವಲತ್ತುಗಳನ್ನು ಅವರಿಗೆ ಕೊಡಬೇಕಾಗುತ್ತದೆ. ಭಾರತದ ಕಾನೂನುಗಳು ಅವಾಸ್ತವವಾಗಿ ಇರಲು ಸಾಧ್ಯವಿಲ್ಲ. ಅವುಗಳು ವಿದೇಶಗಳ ಕಾನೂನುಗಳ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳಲೇ ಬೇಕಾಗಿದೆ.**

ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರು ದಕ್ಷಿಣ ಆಫ್ರಿಕಾದಿಂದ ಸ್ವದೇಶಕ್ಕೆ ಮರಳಿ 2015 ಕ್ಕೆ ಒಂದು ಶತಮಾನವಾಗುತ್ತದೆ. ಈ ಅಭೂತಪೂರ್ವ ಸಂದರ್ಭದ ಸ್ಮರಣಾರ್ಥ 2015 ರ ಜನವರಿಯಲ್ಲಿ ಗುಜರಾತಿನ ಅಹಮದಾಬಾದ್‌ನಲ್ಲಿ ಪ್ರವಾಸಿ 'ಭಾರತೀಯ ದಿವಸ್' ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ಸಮಾರಂಭದಲ್ಲಿ ಭಾಗವಹಿಸುವಂತೆ ಎಲ್ಲ ಅನಿವಾಸಿ ಭಾರತೀಯರಿಗೆ ಆಹ್ವಾನ ನೀಡಲಾಗಿದೆ. ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಅಮೆರಿಕೆಗೆ ಭೇಟಿ ನೀಡಿದ ಸಂದರ್ಭದಲ್ಲಿ ನ್ಯೂಯಾರ್ಕ್‌ನ ಮೆಡಿಸನ್ ಸ್ಟೇಡಿಯಂನಲ್ಲಿ ಭಾರಿ ಪ್ರಮಾಣದಲ್ಲಿ ಜಮಾಯಿಸಿದ್ದ ಅನಿವಾಸಿ ಭಾರತೀಯರನ್ನುದ್ದೇಶಿಸಿ ಭಾಷಣ ಮಾಡುತ್ತಾ, ವಿಶ್ವದಲ್ಲಿ ಚದುರಿ ಹೋಗಿರುವ ಭಾರತದ ಪಾಸ್‌ಪೋರ್ಟ್ ಹೊಂದಿರುವ ಭಾರತೀಯರಿಗೆ ಯಾವುದೇ ತೊಂದರೆ ಇಲ್ಲದೆ ಜೀವಿತಾವಧಿಯ ಭಾರತೀಯ ವೀಸಾ ನೀಡಿ, ಅನಿವಾಸಿ ಭಾರತೀಯರಿಗೆ ದೊರೆಯುವ ಎಲ್ಲ ಯೋಜನೆಗಳ ಸೌಲಭ್ಯಗಳನ್ನು ನೀಡಲಾಗುವುದು ಎಂದು ಘೋಷಿಸಿದರು. ಅದರಂತೆ ಕೇಂದ್ರ ಸರ್ಕಾರದ ಗೃಹ ಸಚಿವಾಲಯ ಕಳೆದ ಸೆಪ್ಟೆಂಬರ್ 30 ರಂದು ಜಾರಿಗೆ ಬರುವಂತೆ ಪ್ರಕಟಣೆ ಹೊರಡಿಸಿ, ಭಾರತದ ಪಾಸ್‌ಪೋರ್ಟ್ ಹೊಂದಿರುವ ಅನಿವಾಸಿ ಭಾರತೀಯರು, ಭಾರತಕ್ಕೆ ಬಂದಾಗ ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿಯ ಜೊತೆಗೆ ಪೊಲೀಸ್‌ಗೆ ತಿಳಿಸುವುದರಿಂದ ವಿನಾಯಿತಿ ನೀಡಲಾಗಿದೆ ಎಂದು ತಿಳಿಸಲಾಗಿದೆ. ಈ ವ್ಯವಸ್ಥೆಯಿಂದ ಅನಿವಾಸಿ ಭಾರತೀಯರು ಸ್ವದೇಶಕ್ಕೆ ಪ್ರವಾಹದೋಪಾದಿಯಲ್ಲಿ ಬಂದರೆ ಏನು ಗತಿ? ಈ ರೀತಿ ಅವರಿಗೆ ಸ್ವಾಗತದ ಹೆಬ್ಬಾಗಿಲನ್ನು ತೆರೆದಾಗ ನಾವು ದೇಶಕ್ಕೆ ಮರಳುವ ನಮ್ಮ ಸಹೋದರ ಸಹೋದರಿಯರಿಗೆ ನಮ್ಮ ಕಾನೂನಿನಡಿಯಲ್ಲಿ ಸಮಾಜ ಮತ್ತು ಕುಟುಂಬ ಅವರನ್ನು ಯಾವ ರೀತಿ ಅಪ್ಪಿಕೊಳ್ಳುತ್ತದೆ ಎಂಬುದರ ಬಗ್ಗೆ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗುತ್ತದೆ. ಇಂದು ವೇಗವಾಗಿ ಆಗುತ್ತಿರುವ ಅಭಿವೃದ್ಧಿ ಮತ್ತು ಬೆಳವಣಿಗೆ ಹಿನ್ನೆಲೆಯಲ್ಲಿ, ಅನಿವಾಸಿಗಳು ಇಲ್ಲಿಗೆ ಬಂದು ಪುನಃ ವಾಸ ಮಾಡುವಾಗ ಸಮಾಜ ಯಾವ ರೀತಿ ಸ್ಪಂದಿಸುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ಅನಿವಾಸಿಗಳ ಅಗತ್ಯಗಳನ್ನು ಪೂರೈಸುವಲ್ಲಿ ನಮ್ಮ ಕಾನೂನುಗಳು ಮತ್ತು ಅವುಗಳ ಅಗತ್ಯಗಳನ್ನು ಪರಾಮರ್ಶಿಸಬೇಕಾಗುತ್ತದೆ. ವಿದೇಶಾಂಗ ಸಚಿವಾಲಯದ ಅಂಕಿ ಅಂಶಗಳ ಪ್ರಕಾರ ಸುಮಾರು 200 ದೇಶಗಳಲ್ಲಿ 2,19,09875 ಭಾರತೀಯರು ನೆಲೆಸಿ ಯಶಸ್ವಿಯಾಗಿ ಜೀವನ ನಡೆಸುತ್ತಿದ್ದಾರೆ. ಅಂತಾರಾಷ್ಟ್ರೀಯ ಭಾರತೀಯರು ಅವರಷ್ಟಕ್ಕೆ ಅವರೇ ಒಂದು ದೇಶವಾಸಿಗಳು ಎನಿಸಿಕೊಳ್ಳುತ್ತಾರೆ. ಆದ್ದರಿಂದ ಅವರ ಸಂಘರ್ಷಗಳನ್ನು ನಿಭಾಯಿಸಲು ಜಾಗತಿಕ ಕಾನೂನಿನ ಅಗತ್ಯ ಎದ್ದು ಕಾಣುತ್ತಿದೆ. ಅನಿವಾಸಿ ಭಾರತೀಯರು, ಭಾರತ ಮತ್ತು ವಿದೇಶಗಳಲ್ಲಿ ನೆಲೆಸಿರುವ ತಮ್ಮ ವಂಶಸ್ಥರ ಸಂಪರ್ಕ ಮತ್ತು ಸಂಬಂಧಗಳಿಗೆ ಸಂಬಂಧಿಸಿದಂತೆ, ವಲಸೆಹೋಗುವಿಕೆ, ರಾಷ್ಟ್ರೀಯತೆ, ವಿವಾಹ, ವಿವಾಹವಿಚ್ಛೇದನ, ಬಲವಂತದ ವಿವಾಹಗಳು, ಅಂತಾರಾಷ್ಟ್ರೀಯ ಪೋಷಕರ ಮಕ್ಕಳ ನಿರ್ಗಮನ, ಪತಿ ಅಥವಾ ಪತ್ನಿಯನ್ನು ನೋಡಿಕೊಳ್ಳುವುದು, ವೈವಾಹಿಕ ಆಸ್ತಿ ಹಂಚಿಕೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ ದತ್ತು ಪಡೆಯುವುದು, ಆಸ್ತಿಯ ಹಕ್ಕುದಾರಿಕೆ,

ಹಿರಿಯ ನ್ಯಾಯವೇತ್ತರು. e-mail : anilmalhotra1960@gmail.com

ಭಾರತದ ಆಸ್ತಿಯ ಬಾಡಿಗೆ ಹಾಗೂ ಕೊನೆಯದಾಗಿ ಪ್ರತಿನಿಧಿಯ ವ್ಯವಸ್ಥೆಗಳ ಬಗ್ಗೆ ಗಮನ ಹರಿಸಬೇಕಾಗುತ್ತದೆ. ಅನಿವಾಸಿ ಭಾರತೀಯರ ಈ ಸಮಸ್ಯೆಗಳಿಗೆ ಸೂಕ್ತವಾದ ಪರಿಹಾರಗಳನ್ನು ಕಂಡುಕೊಳ್ಳಲು ಭಾರತೀಯ ಕಾನೂನುಗಳು ನವೀಕರಣಗೊಳ್ಳದಿರುವುದು ಮತ್ತು ಕಾನೂನುಗಳಿಗೆ ಸೂಕ್ತ ತಿದ್ದುಪಡಿಗಳಿಲ್ಲದಿರುವುದರ ಹಿನ್ನೆಲೆಯಲ್ಲಿ ವಿದೇಶಿ ನ್ಯಾಯಾಲಯಗಳು ಮತ್ತು ವಿದೇಶಿ ವಕೀಲರು ಪ್ರಸಕ್ತ ಸನ್ನಿವೇಶಗಳ ಹಿನ್ನೆಲೆಯಲ್ಲಿ ಈ ಕಾನೂನುಗಳನ್ನು ವ್ಯಾಖ್ಯಾನಿಸಬೇಕಾಗುತ್ತದೆ. ವಿದೇಶಿ ಕಾನೂನುಗಳನ್ನು ಇಲ್ಲಿ ಅಳವಡಿಸಿಕೊಳ್ಳುವಿಕೆ, ವಿದೇಶಗಳಲ್ಲಿ ಆಗಿರುವ ನ್ಯಾಯಾಲಯಗಳ ತೀರ್ಪುಗಳ ಅರ್ಹತೆ ಮತ್ತು ಭಾರತದ ನ್ಯಾಯಾಲಯಗಳ ತೀರ್ಪುಗಳ ವ್ಯಾಖ್ಯಾನಗಳಿಂದ ಉದ್ಭವಿಸುವ ಪರಿಣಾಮಗಳನ್ನು ಗಮನಿಸಬೇಕಾಗುತ್ತದೆ. ವಿದೇಶಿ ಪ್ರಜೆಗಳಾಗಿದ್ದು ಮತ್ತು ವಿದೇಶಿ ಪೌರತ್ವವನ್ನು ಹೊಂದಿರುವ ಅನಿವಾಸಿ ಭಾರತೀಯರು ಹಾಗೂ ಜಾಗತಿಕ ಭಾರತೀಯರನ್ನು ನಿಯಂತ್ರಿಸುವ ವೈಯಕ್ತಿಕ ಕಾನೂನುಗಳಿವೆ. ಇವು ಐದು ದಶಕಗಳಷ್ಟು ಹಳೆಯ ಕಾನೂನುಗಳಾಗಿವೆ. ಅಂತಾರಾಷ್ಟ್ರೀಯ ಹಿನ್ನೆಲೆಯಲ್ಲಿ ಇವರ ಕೌಟುಂಬಿಕ ಸಮಸ್ಯೆಗಳಿಗೆ ಈಗಿನ ಕಾಲಕ್ಕೆ ಬದಲಾವಣೆಯಾಗದ ಕಾನೂನುಗಳಿಂದ ಪರಿಹಾರ ಕಂಡುಕೊಳ್ಳುವುದು ಕಷ್ಟವಾಗುತ್ತದೆ. ನ್ಯಾಯಾಲಯಗಳ ವ್ಯಾಪ್ತಿಯ ಸಂಘರ್ಷಗಳು ಇವರ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವುದಕ್ಕಿಂತ ಸಮಸ್ಯೆಗಳು ಉಲ್ಬಣಗೊಳ್ಳುವಂತಾಗಿ ಮನೆಗಳು ಮತ್ತು ಕುಟುಂಬಗಳು ಛಿದ್ರವಾಗಲು ಕಾರಣವಾಗುತ್ತದೆ. ಇದರಿಂದ ಎಲ್ಲ ಕಡೆ ಒಡಕು ಮೂಡಿಬರುತ್ತವೆ.

### ಹಿನ್ನೆಲೆ

ಪಾಸ್‌ಪೋರ್ಟ್ ಎಂಬುದು ಒಂದು ದಾಖಲೆಯಾಗಿದ್ದು, ಅದನ್ನು ಹೊಂದಿರುವ ವ್ಯಕ್ತಿಯು ಅದನ್ನು ಕೊಟ್ಟಿರುವ ದೇಶದ ನಾಗರಿಕ ಎಂಬುದನ್ನು ಗುರುತಿಸಿ , ಅವನ ವಿನಂತಿಯ ಮೇರೆಗೆ ಇತರೆ ದೇಶಗಳು ಉಚಿತವಾಗಿ ತಮ್ಮ ದೇಶದೊಳಗೆ ಪ್ರವೇಶಿಸಲು ಅನುಮತಿ ನಿಡುವ ರಹದಾರಿಯಾಗಿರುತ್ತದೆ. ಇದನ್ನು ಹೊಂದಿರುವ ವ್ಯಕ್ತಿಯು ಈ ದೇಶಕ್ಕೆ ಸೇರಿದ ವ್ಯಕ್ತಿಯಾಗಿದ್ದು, ಅದನ್ನು ಅಗತ್ಯ ಮಾಹಿತಿಗಳೊಂದಿಗೆ ಆ ದೇಶದ ಅಧಿಕೃತ ಸಂಸ್ಥೆ ಪುಷ್ಟೀಕರಿಸಿರುತ್ತದೆ. ಆದ್ದರಿಂದ ಭಾರತದ ಪಾಸ್‌ಪೋರ್ಟ್ ಹೊಂದಿರುವವನು ಭಾರತೀಯ ನಾಗರಿಕ ಎಂಬುದನ್ನು ಪುಷ್ಟೀಕರಿಸುತ್ತದೆ. ಈ ಪಾಸ್‌ಪೋರ್ಟ್‌ನ್ನು ಪಾಸ್‌ಪೋರ್ಟ್ ಕಾಯಿದೆ ಪ್ರಕಾರ ಕೆಲವು ನಿಬಂಧನೆಗಳೊಂದಿಗೆ ವಶಪಡಿಸಿಕೊಳ್ಳಬಹುದು, ವಶಪಡಿಸಿ ಕೊಂಡದ್ದನ್ನು ವಾಪಾಸು ಕೊಡಬಹುದು ಅಥವಾ ರದ್ದುಪಡಿಸಬಹುದು. ಆದರೆ, ಪಾಸ್‌ಪೋರ್ಟ್ ಕೊಡುವುದನ್ನು ನಿರಾಕರಿಸುವುದು ವ್ಯಕ್ತಿಯ ವೈಯಕ್ತಿಕ ಹಕ್ಕುಗಳ ದಮನಕ್ಕೆ ಸಮನಾಗುತ್ತದೆ ಮತ್ತು ಅದನ್ನು ವಶಪಡಿಸಿಕೊಳ್ಳುವ ಆದೇಶವು ಮೂಲಭೂತ ಹಕ್ಕುಗಳಿಗೆ ವ್ಯತಿರಿಕ್ತವಾಗಿರಬಾರದು ಎಂದು ಸುಪ್ರಿಂ ಕೋರ್ಟು ತೀರ್ಪು ನೀಡಿದೆ.

### ವಿವಾದ

ಬ್ರಿಟಿಷರ ಕಾಲದಲ್ಲಿ ಭಾರತೀಯ ರೈಲ್ವೆ ನಿರ್ಮಾಣ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಜಾರಿಗೆ ತಂದಿರುವ ಕಾನೂನುಗಳನ್ನು ಈಗಲೂ ಬಳಸುತ್ತಿರುವುದರ ಬಗ್ಗೆ ಚರ್ಚೆ ಇನ್ನೂ ಮುಂದುವರೆದಿದ್ದು, ಗ್ರೇಟ್ ಬ್ರಿಟನ್ ತಾನು 1849 ರಿಂದ 1942 ರ ನಡುವೆ ರೂಪಿಸಿದ್ದ 38 ಕಾನೂನುಗಳನ್ನು ಹಿಂಪಡೆಯಲು ಕ್ರಮ ತೆಗೆದುಕೊಂಡಿದೆ. ಆದರೂ ಬ್ರಿಟಿಷರ ಕಾಲದಲ್ಲಿ ಜಾರಿಗೆ ಬಂದಿದ್ದು, ಈಗ ಅವು ತೀರ ಅಪ್ರಸ್ತುತವಾಗಿದ್ದರೂ ಅವುಗಳನ್ನು ರದ್ದುಪಡಿಸುವ ಪ್ರಕ್ರಿಯೆ ಭಾರತದಲ್ಲಿ ಚುರುಕಾಗಿ ನಡೆಯದೆ ನಿಧಾನಗತಿಯಲ್ಲಿ ನಡೆಯುತ್ತಿದೆ. ಸಂಸತ್ತು 1967 ರಲ್ಲಿ ಪಾಸ್‌ಪೋರ್ಟ್ ಕಾಯಿದೆ, 1955 ರಲ್ಲಿ ಪೌರತ್ವ ಕಾಯಿದೆ ಮತ್ತು 2005 ರಲ್ಲಿ 'ಭಾರತದ ವಿದೇಶಿ ನಾಗರಿಕರು' ಕಾಯಿದೆ ಜಾರಿಗೆ ತಂದಿದ್ದರೂ, ಈಗಲೂ ಸಹಾ ಅನೇಕ ಉದ್ದೇಶಗಳಿಗೆ 1920 ರ ಪಾಸ್‌ಪೋರ್ಟ್ (ಭಾರತಕ್ಕೆ ಪ್ರವೇಶಿಸುವ) ಕಾಯಿದೆ, 1939 ರ ವಿದೇಶಿಯರ ನೊಂದಣಿ ಕಾಯಿದೆ, ಮತ್ತು 1946 ರ ವಿದೇಶಿಯರ ಕಾಯಿದೆಗಳನ್ನು ಅವಲಂಬಿಸಲಾಗಿದೆ. ಬ್ರಿಟಿಷರ ಕಾಲದಲ್ಲಿ ರಚನೆಯಾಗಿದ್ದು ಈಗ ಅಪ್ರಸ್ತುತವೆನಿಸಿ, ಈಗಿನ ಸಹಜ ನ್ಯಾಯದ ತತ್ವಗಳ ಪರೀಕ್ಷೆಯಲ್ಲಿ ಸೋತಿರುವ ಈ ರೀತಿಯ ಅನೇಕ ಕಾಯಿದೆಗಳು ರದ್ದಾಗಬೇಕಾಗಿದೆ. ಆದರೆ ಅವುಗಳು ಇನ್ನೂ ಮುಂದುವರೆದಿವೆ.




### ಪೂರ್ಣ ಪ್ರಮಾಣದ ಕಾನೂನು

ಪಾಸ್‌ಪೋರ್ಟ್ ಕೊಡಲು ಮತ್ತು ಪ್ರವಾಸ ದಾಖಲೆಗಳಿಗೆ ಸಂಬಂಧಿಸಿದಂತೆ, 1967 ರ ಪಾಸ್‌ಪೋರ್ಟ್ ಕಾಯಿದೆ ಸಮಗ್ರವಾಗಿ ಪೂರ್ಣ ಪ್ರಮಾಣದ್ದಾಗಿದ್ದು, ಈ ಕಾಯಿದೆ ಪ್ರಕಾರ ವ್ಯತ್ಯಾಸಗಳಿಗೆ, ಮುಟ್ಟುಗೋಲಿಗೆ ಮತ್ತು ಮುಟ್ಟುಗೋಲನ್ನು ರದ್ದುಪಡಿಸುವುದಕ್ಕೆ ಸಂಬಂಧಿಸಿ ಅಪರಾಧಿ ಎಂದು ಪರಿಗಣಿಸಿ ಮತ್ತು ದಂಡವನ್ನು ಹಾಕಿಸಿಕೊಂಡಿದ್ದ ವ್ಯಕ್ತಿಗೆ ಕಾನೂನಿನ ರಕ್ಷಣಾತ್ಮಕ ವಿಧಾನಗಳನ್ನು ಒದಗಿಸುತ್ತದೆ. ಆದರೂ ಈ ಕಾಯಿದೆ ಜೊತೆಗೆ ಅಸ್ತಿತ್ವದಲ್ಲಿರುವ 1920 ರ ಪಾಸ್‌ಪೋರ್ಟ್(ಭಾರತಕ್ಕೆ ಪ್ರವೇಶಿಸುವ) ಕಾಯಿದೆ ಮತ್ತು , 1946 ರ ವಿದೇಶಿಯರ ಕಾಯಿದೆಗಳು, ಯಾವುದೇ ವ್ಯಕ್ತಿಯನ್ನು ಯಾವುದೇ ನಿಗದಿತ ಪ್ರಕ್ರಿಯೆಗಳನ್ನು ಜಾರಿಗೊಳಿಸದೆ ಅಥವಾ ನ್ಯಾಯಾಂಗದ ವಿಮರ್ಶೆಗೆ ಅವಕಾಶ ಕೊಡದೆ ಏಕಾಏಕಿಯಾಗಿ ದೇಶದಿಂದ ಹೊರದಬ್ಬುವ ಅವಕಾಶವನ್ನು ಕಲ್ಪಿಸಿಕೊಡುತ್ತವೆ. ಈ ಕಾಯಿದೆಗಳ ಪ್ರಕಾರ ಗೃಹ ಬಂಧನ, ಬಂಧನದಲ್ಲಿಡುವುದು, ಏಕಾಂತವಾಸವಿಡುವುದು, ಮತ್ತು ಯಾವುದೇ ಕಾರಣ ನೀಡದೆ ದೇಶದಿಂದ ಹೊರಹಾಕುವುದು ಸಂವಿಧಾನ ವ್ಯಕ್ತಿಗೆ ನೀಡಿರುವ ಮೂಲಭೂತಹಕ್ಕುಗಳ ಉಲ್ಲಂಘನೆಯಾಗುತ್ತದೆ. ಆದ್ದರಿಂದ ಮೂಲಭೂತ ಹಕ್ಕುಗಳಿಗೆ ಚ್ಯುತಿ ತರುವ ಈ ಕಾಯಿದೆಗಳನ್ನು ಇಟ್ಟುಕೊಂಡು ಮುಂದುವರೆಸಿಕೊಂಡು ಹೋಗುವುದು ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗುತ್ತದೆ.

### ಪೌರತ್ವದ ಕಾನೂನು ಸಂಹಿತೆ

1955 ರ ಪೌರತ್ವದ ಕಾಯಿದೆಯು ಭಾರತದ ಪೌರತ್ವವನ್ನು ಪಡೆದುಕೊಳ್ಳುವುದು ಮತ್ತು ನಿಗದಿಪಡಿಸುವುದರ ಬಗ್ಗೆ ಸೆಕ್ಷನ್ 9 ರ ಪ್ರಕಾರ, ಭಾರತದ ಪೌರತ್ವ



ಹೊಂದಿದವರು, ಸ್ವಪ್ರೇರಣೆಯಿಂದ ಇತರೆ ದೇಶದ ಪೌರತ್ವವನ್ನು ಪಡೆದುಕೊಂಡರೆ ಭಾರತದ ಪೌರತ್ವವನ್ನು ಕಳೆದುಕೊಳ್ಳುತ್ತಾರೆ. ಇತರೆ ದೇಶದ ಪೌರತ್ವವನ್ನು ಪಡೆದುಕೊಂಡ ನಂತರ ಭಾರತದ ಪೌರತ್ವವನ್ನು ಕಳೆದುಕೊಳ್ಳಬೇಕಾಗುತ್ತದೆ ಎಂಬುದನ್ನು ಸೆಕ್ಷನ್ 9 ಸ್ಪಷ್ಟವಾಗಿ ವಿವರಿಸಿದೆ. ಪೌರತ್ವದ ಕಾಯಿದೆಯಡಿಯಲ್ಲಿ ದತ್ತವಾಗಿರುವ ಅಧಿಕಾರದನ್ವಯ ಕೇಂದ್ರ ಸರ್ಕಾರ 2009 ರಲ್ಲಿ ಪೌರತ್ವ ನಿಯಮಗಳನ್ನು ಜಾರಿಗೆ ತಂದಿತು. ನಿಯಮ 40ರ ಪ್ರಕಾರ ಭಾರತದ ಪೌರತ್ವ ಹೊಂದಿರುವ ಯಾವುದೇ ವ್ಯಕ್ತಿ ಯಾವಾಗ ಮತ್ತು ಹೇಗೆ ಇತರೆ ದೇಶದ ಪೌರತ್ವ ಪಡೆದುಕೊಂಡ, ಹಾಗೆ ಮಾಡುವಾಗ ಅವನು ಪೌರತ್ವ ಕಾಯಿದೆಯ ನಿಯಮಗಳಡಿಯಲ್ಲಿರುವ ಶೆಡ್ಯೂಲ್ 3 ರಲ್ಲಿ ವಿವರಿಸಿರುವ ನಿಮಗಳನ್ನು ಸರಿಯಾಗಿ ಪಾಲಿಸಲಾಗಿದೆಯೇ ಎಂದು ಕೇಳುತ್ತದೆ.

ಪೌರತ್ವದ ನಿಯಮಗಳ ಶೆಡ್ಯೂಲ್ 3 ರ ಮುಖ್ಯವಾದ ನಿಯಮಗಳು ಈ ಮುಂದಿನಂತಿವೆ : 1) ಭಾರತದ ಪೌರತ್ವ ಪಡೆದಿರುವ ವ್ಯಕ್ತಿ ಇತರೆ ದೇಶದ ಪೌರತ್ವವನ್ನು ಸ್ವ ಇಚ್ಛೆಯಿಂದ ಪಡೆದುಕೊಂಡಿಲ್ಲ ಎಂಬುದನ್ನು ನಿಗದಿಪಡಿಸಿದ ಅವಧಿಯೊಳಗೆ ಕೇಂದ್ರ ಸರ್ಕಾರಕ್ಕೆ ಸಾಬೀತು ಪಡಿಸಬೇಕಾಗುತ್ತದೆ. 2) ಭಾರತದ ಪೌರತ್ವ ಹೊಂದಿರುವ ವ್ಯಕ್ತಿ ಇತರೆ ದೇಶದ ಪೌರತ್ವವನ್ನು ಪಡೆದುಕೊಂಡಿರುವುದನ್ನು ಖಾತರಿಪಡಿಸಿಕೊಳ್ಳಲು ಆ ದೇಶದಲ್ಲಿರುವ ಭಾರತದ ರಾಯಭಾರ ಕಚೇರಿಗೆ ಅಥವಾ ಸಂಬಂಧಿಸಿದ ದೇಶದ ಸರ್ಕಾರದಿಂದ ಮಾಹಿತಿ ಪಡೆದುಕೊಳ್ಳಲು ಭಾರತ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. 3) ಭಾರತದ ಪೌರತ್ವವನ್ನು ಹೊಂದಿರುವ ವ್ಯಕ್ತಿ ಇತರೆ ದೇಶದ ಸರ್ಕಾರ ಕೊಡುವ ಪಾಸ್‌ಪೋರ್ಟ್‌ನ್ನು ಪಡೆದುಕೊಂಡಿರುವ ದಿನಾಂಕಕ್ಕಿಂತ ಮೊದಲೇ ಆ ದೇಶದ ಪೌರತ್ವವನ್ನು ಪಡೆದುಕೊಂಡಿದ್ದಾನೆ ಎಂಬುದನ್ನು ಇದು ಸಾಬೀತು ಪಡಿಸುತ್ತದೆ.

### ಸುಪ್ರೀಂ ಕೋರ್ಟು ಇತ್ಯರ್ಥ ಪಡಿಸಿದ ಕಾನೂನು

ಭಾರತದ ಪೌರತ್ವವನ್ನು ಹೊಂದಿರುವ ವ್ಯಕ್ತಿ ಇತರೆ ದೇಶದ ಪೌರತ್ವವನ್ನು ಸ್ವ ಇಚ್ಛೆಯಿಂದ ಪಡೆದುಕೊಂಡಿದ್ದರೆ, ಅಂತಹ ವ್ಯಕ್ತಿ ಭಾರತದ ಪೌರತ್ವವನ್ನು ಕಳೆದುಕೊಳ್ಳುತ್ತಾನೆ ಎಂಬುದನ್ನು ನಿಗದಿಪಡಿಸುವ ಏಕಮಾತ್ರ ಅಧಿಕಾರ ಭಾರತ ಸರ್ಕಾರಕ್ಕಿದೆ ಎಂಬುದನ್ನು 1955 ರ ಪೌರತ್ವ ಕಾಯಿದೆಯ ಸೆಕ್ಷನ್ 9 (2) ಅಡಿಯ 1956 ರ ಪೌರತ್ವದ ನಿಯಮಗಳ 30 ಖಾತರಿ ಪಡಿಸುತ್ತದೆ. ಇದರ ಬಗ್ಗೆ ಕೇಂದ್ರ ಸರ್ಕಾರ ನಿರ್ಧಾರ ತೆಗೆದುಕೊಂಡು ನಂತರ ತನಿಖೆ ನಡೆಸಿ ಇತರೆ ದೇಶದ ಪಾಸ್‌ಪೋರ್ಟ್ ಪಡೆಯಲಾಗಿದೆ ಎಂಬ ಕಾರಣದಿಂದ ಸೆಕ್ಷನ್ 9(2) ಮತ್ತು ನಿಯಮ 30 ಪ್ರಕಾರ ಆತನ್ನು ದೇಶದಿಂದ ಹೊರಹಾಕಲು ಅಥವಾ ಶಿಕ್ಷೆಗೆ ಗುರಿಪಡಿಸಲು ಬರುವುದಿಲ್ಲ. ಈ ಅಂಶ ಎರಡು ಪ್ರಕರಣಗಳಲ್ಲಿ ನ್ಯಾಯಾಲಯದ ಪರಾಮರ್ಶೆಗೆ ಒಳಪಟ್ಟಿದೆ. ಆದ್ದರಿಂದ ರಾಷ್ಟ್ರೀಯತೆಯನ್ನು ನಿಗದಿಪಡಿಸುವಿಕೆಯು ಕಾನೂನು ಪ್ರಕಾರವಾಗಿ ಇತ್ಯರ್ಥವಾಗಿದೆ ಎಂದಾಯಿತು.

### ಹೊಸ ವರ್ಗಗಳು

ಭಾರತದ 120 ಕೋಟಿ ಜನರಿಗೆ 180 ದೇಶಗಳಲ್ಲಿ 30 ದಶಲಕ್ಷ ಅನಿವಾಸಿ ಭಾರತೀಯರು ಇರುವುದರಿಂದ ದ್ವಿರಾಷ್ಟ್ರೀಯತೆಯ ಬಗ್ಗೆ ಹೊಂದಾಣಿಕೆಗೆ ದಾರಿ ಮಾಡಿಕೊಡಲಾಗಿದೆ. ಹೊಂದಾಣಿಕೆ ಆಗದಿದ್ದರೆ ಸಂವಿಧಾನದ ಪರಿಚ್ಛೇದ 9 ಮತ್ತು ಪೌರತ್ವ ಕಾಯಿದೆಯ ಸೆಕ್ಷನ್ 9 ರ ಪ್ರಕಾರ ಪೌರತ್ವ ನಿಷೇಧಕ್ಕೊಳಪಡುತ್ತದೆ. ಭಾರತದಲ್ಲಿ ಹುಟ್ಟಿದವರಿಗೆ ಕೆಲವು ಸೀಮಿತ ಅನುಕೂಲಗಳನ್ನು ಕೊಡುವ ದೃಷ್ಟಿಯಿಂದ "ಭಾರತ ಮೂಲದ ವ್ಯಕ್ತಿಗಳು" ಮತ್ತು "ಅನಿವಾಸಿ ಭಾರತೀಯರು" ಎಂಬುದಾಗಿ ಎರಡು ವಿಭಾಗಗಳನ್ನು ಮಾಡಲಾಗಿದೆ. ಆದ್ದರಿಂದ "ಭಾರತ ಮೂಲದ ವ್ಯಕ್ತಿಗಳು" ಮತ್ತು "ಅನಿವಾಸಿ ಭಾರತೀಯರು" ಯಾವುದೇ ವೀಸಾ, ನೋಂದಣಿ, ಮಂಜೂರು ಅಥವಾ ಇತರೆ ಅನುಮತಿಗಳ ಅಗತ್ಯವಿಲ್ಲದೆ ಭಾರತದಲ್ಲಿ ನಿವಾಸಿಗಳ ಹಕ್ಕುಗಳನ್ನು ಅನುಭವಿಸುತ್ತಾರೆ. ಇದಲ್ಲದೆ, ಸಂವಿಧಾನದ ಪರಿಚ್ಛೇದ 5 ರ ಪ್ರಕಾರ, ಭಾರತದಲ್ಲಿ ವಾಸವಾಗಿರುವ ಮತ್ತು ಭಾರತದಲ್ಲಿ ಜನಿಸಿದ ಅಥವಾ ಯಾರ ತಂದೆ ತಾಯಿಯರು ಭಾರತದಲ್ಲಿ ಜನಿಸಿರುತ್ತಾರೋ ಅಥವಾ ಸಂವಿಧಾನ ಜಾರಿಯಾಗುವುದಕ್ಕೆ ಮೊದಲು 5 ವರ್ಷಗಳಿಗೆ ಕಡಿಮೆ ಇಲ್ಲದಂತೆ ಭಾರತದಲ್ಲಿ ಸಾಮಾನ್ಯ ಪ್ರಜೆಯಾಗಿ ವಾಸವಿರುವವರು ಭಾರತದ ಪೌರತ್ವ ಪಡೆದಿರುತ್ತಾರೆ. ಅದ್ದರಿಂದ ಭಾರತದ ರಾಷ್ಟ್ರೀಯತೆಯ ಭಾರತದ ಕಾನೂನಿನ ತೀರ್ಮಾನ ಮತ್ತು ವ್ಯಾಖ್ಯಾನದ ಮೇಲೆ ತೀರ್ಮಾನವಾಗುತ್ತದೆ.

### ರಾಷ್ಟ್ರೀಯತೆಯ ನಿಗದಿ

1964 ರ ಕಾಯಿದೆ ಪ್ರಕಾರ, ವಿದೇಶಿಯನೊಬ್ಬನನ್ನು ಒಂದು ರಾಷ್ಟ್ರಕ್ಕಿಂತ ಹೆಚ್ಚಿನ ರಾಷ್ಟ್ರಗಳು ಅವನ ರಾಷ್ಟ್ರೀಯತೆಯನ್ನು ನಿಗದಿಪಡಿಸುವ ವಿವಾದಕ್ಕೆ ಸಂಬಂಧಿಸಿದಂತೆ ಅಥವಾ ವಿದೇಶಿಯನೊಬ್ಬನಿಗೆ ಯಾವ ರಾಷ್ಟ್ರೀಯತೆಯನ್ನು ನಿಗದಿ ಮಾಡಬೇಕು ಎಂಬ ಸಂದಿಗ್ಧ ಉದ್ಭವಿಸಿದಾಗ, ಆ ವ್ಯಕ್ತಿ ಯಾವ ದೇಶದೊಂದಿಗೆ ಹೆಚ್ಚು ನಿಕಟವಾಗಿದ್ದಾನೆ ಎಂಬುದನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. 1920 ಮತ್ತು 1946 ರ ಕಾಯಿದೆಗಳು, ವಿದೇಶಿಯನೊಬ್ಬನ ರಾಷ್ಟ್ರೀಯತೆಯನ್ನು ನಿಗದಿಪಡಿಸುವುದಕ್ಕೆ ಸಂಬಂಧಿಸಿದ ಪ್ರಶ್ನೆಯನ್ನು ಇತ್ಯರ್ಥಪಡಿಸಲು ಯಾವುದಾದರೊಂದು ವೇದಿಕೆ ಅಥವಾ ನಿಯಮಾವಳಿಗಳನ್ನು

## ಪೌರತ್ವ ಮತ್ತು ವಿದೇಶಿಯರ ಕಾನೂನುಗಳ ಒಂದು ನೋಟ

- 1939 ರ ವಿದೇಶಿಯರ ನೋಂದಣಿ ಕಾಯಿದೆ– ಭಾರತದಲ್ಲಿ ವಿದೇಶಿಯರ ನೋಂದಣಿಗೆ ಈ ಕಾಯಿದೆ ಅವಕಾಶ ಕೊಡುತ್ತದೆ.
- 1992 ರ ವಿದೇಶಿಯರ ನೋಂದಣಿ ನಿಯಮಗಳನ್ನು 1939 ರ ವಿದೇಶಿಯರ ನೋಂದಣಿ ನಿಯಮಗಳ ಬದಲಿಗೆ ತರಲಾಯಿತು. ಈ ನಿಯಮಗಳನ್ನು 1939 ರ ಕಾಯಿದೆ ಪ್ರಕಾರ ರೂಪಿಸಲಾಯಿತು.
- 1946 ರ ವಿದೇಶಿಯ ಕಾಯಿದೆ–ವಿದೇಶಿಯರ ಮೇಲೆ ಕೆಲವು ಅಧಿಕಾರಗಳನ್ನು ಹೊಂದಲು ಕೇಂದ್ರ ಸರ್ಕಾರಕ್ಕೆ ಅವಕಾಶವನ್ನು ಈ ಕಾಯಿದೆ ಕೊಡುತ್ತದೆ.
- 1948 ವಿದೇಶಿಯರ ಆದೇಶ–ಇದನ್ನು 1946 ರ ಕಾಯಿದೆಯ ಸೆಕ್ಷನ್ 3 ರ ಪ್ರಕಾರ ರೂಪಿಸಲಾಗಿದ್ದು, ವಿದೇಶಿಯರನ್ನು ದೇಶದಿಂದ ಹೊರಹಾಕಲು ಭಾರತ ಸರ್ಕಾರಕ್ಕೆ ಕೆಲವು ಅಧಿಕಾರಗಳನ್ನು ಕೊಡುತ್ತದೆ.
- 1964 ರ ವಿದೇಶಿಯರ (ಟ್ರೈಬುನಲ್‌ಗಳ) ಆದೇಶಗಳು– ಈ ಆದೇಶಗಳನ್ನು 1964 ರ ಕಾಯಿದೆಯ ಸೆಕ್ಷನ್ 3 ರ ಅಡಿಯಲ್ಲಿ ರೂಪಿಸಲಾಗಿದ್ದು, ವ್ಯಕ್ತಿ ವಿದೇಶಿಯನೇ ಎಂಬುದನ್ನು ನಿರ್ಧರಿಸಲು ಟ್ರೈಬುನಲ್‌ಗಳಿಗೆ ಅಧಿಕಾರ ನೀಡಲಾಗಿದೆ.
- 1950 ಪಾಸ್‌ಪೋರ್ಟ್(ಭಾರತಕ್ಕೆ ಆಗಮಿಸಲು) ನಿಯಮಗಳು– ನಿಯಮಗಳನ್ನು 1950 ಕಾಯಿದೆಯಡಿಯಲ್ಲಿ ರೂಪಿಸಲಾಗಿದೆ.
- 1967 ರ ಪಾಸ್‌ಪೋರ್ಟ್ ಕಾಯಿದೆ– ದೇಶದಿಂದ ಹೊರಗೆ ಹೋಗುವುದನ್ನು ನಿಯಂತ್ರಿಸಲು ಪಾಸ್‌ಪೋರ್ಟ್ ಮತ್ತು ಪ್ರಯಾಣ ದಾಖಲೆಗಳನ್ನು ನೀಡುವುದು.
- 1955 ರ ಪೌರತ್ವ ಕಾಯಿದೆ.– ಭಾರತದ ಪೌರತ್ವ ಪಡೆದುಕೊಳ್ಳಲು ಮತ್ತು ನಿರ್ಧರಿಸಲು ತರಲಾದ ಕಾಯಿದೆ.
- 2009 ರ ಪೌರತ್ವ ನಿಯಮಗಳು–1955 ರ ಪೌರತ್ವ ಕಾಯಿದೆ ಅಡಿಯಲ್ಲಿ ಈ ನಿಯಮಗಳನ್ನು ರೂಪಿಸಲಾಗಿದೆ.

ಪಾಲಿಸದೆ ಆತನನ್ನು ಭಾರತದಿಂದ ಹೊರಹಾಕಲು ಅವಕಾಶ ಕೊಡುವುದಿಲ್ಲ. ಈ ಪ್ರಶ್ನೆಗಳನ್ನು ತೀರ್ಮಾನಿಸಲು ಯಾವುದೇ ಟ್ರೈಬುನಲ್‌ಗಳು ಅಸ್ತಿತ್ವದಲ್ಲಿಲ್ಲ. ಆದರೆ, ಇಂದು ಪೌರತ್ವ ಕಾಯಿದೆ 1955 ಮತ್ತು ಪೌರತ್ವ ನಿಯಮಗಳು 2009 ರ ಪ್ರಕಾರ, ಯಾವುದೇ ವ್ಯಕ್ತಿ ಇನ್ನೊಂದು ದೇಶದ ಪೌರತ್ವವನ್ನು ಯಾವಾಗ ಮತ್ತು ಹೇಗೆ ಪಡೆದುಕೊಂಡ ಎಂಬುದನ್ನು ಕೇಂದ್ರ ಸರ್ಕಾರ ಮೊದಲು ತೀರ್ಮಾನಿಸಬೇಕಾಗುತ್ತದೆ. ಸುಪ್ರೀಂ ಕೋರ್ಟು ಈ ನಿಯಮಗಳನ್ನು ವ್ಯಾಖ್ಯಾನಿಸುತ್ತಾ, ಭಾರತದ ಪೌರತ್ವವನ್ನು ಕಳೆದುಕೊಂಡಿರುವ ವ್ಯಕ್ತಿಯನ್ನು ದೇಶದಿಂದ ಹೊರಹಾಕುವುದಕ್ಕೆ ಮುಂಚೆ ಕೇಂದ್ರ ಸರ್ಕಾರ ಅರೆ ನ್ಯಾಯಾಧಿಕರಣದ ಮುಖಾಂತರ ವಿಚಾರಣೆ ನಡೆಸಿ ಪ್ರಜ್ಞಾಪೂರ್ವಕವಾದ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ ಎಂದು ತಿಳಿಸಿದೆ. ಒಬ್ಬ ವ್ಯಕ್ತಿ ಬೇಷರತ್ತಾಗಿ ವಿದೇಶಿ ಪಾಸ್‌ಪೋರ್ಟ್ ಹೊಂದಿದ್ದರೆ, ಅಂತಹವನನ್ನು ಸುಮ್ಮನೆ ವಿದೇಶಿ ಎಂದು ಪರಿಗಣಿಸಲಾಗದು ಮತ್ತು ಅವನ ರಾಷ್ಟ್ರೀಯತೆಯನ್ನು ನಿಗದಿಪಡಿಸಿಕೊಳ್ಳುವ ಮೂಲಭೂತ ಹಕ್ಕು ಅವನಿಗಿದೆ ಎಂದು ನ್ಯಾಯಾಲಯ ಹೇಳಿದೆ. ಆದ್ದರಿಂದ ನಮ್ಮ ಸಂಸತ್ತು ಈ ರೀತಿಯ ಸ್ವಾತಂತ್ರ್ಯದ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳಲು ಇದು ಸಕಾಲವಾಗಿದ್ದು, ವ್ಯಕ್ತಿಯ ವೈಯಕ್ತಿಕ ಸ್ವಾತಂತ್ರ್ಯ ಮತ್ತು ಸಾಮಾನ್ಯ ನ್ಯಾಯಗಳು ರಾಷ್ಟ್ರೀಯತೆಯನ್ನು ನಿಗದಿ ಮಾಡಲು ಪ್ರಮುಖ ಪಾತ್ರ ವಹಿಸುತ್ತವೆ ಎಂಬುದನ್ನು ಗಮನಿಸಬೇಕಾಗುತ್ತದೆ.



### ಚರ್ಚಿಸಬಹುದಾದ ಪ್ರಶ್ನೆ

ಇಂದಿನ ಸಾಮಾಜಿಕ ಸನ್ನಿವೇಶದಲ್ಲಿ, ಅಂತಾರಾಷ್ಟ್ರೀಯ ಭಾರತೀಯರು "ಭಾರತ ಮೂಲದ ವ್ಯಕ್ತಿಗಳು" ಅಥವಾ "ಅನಿವಾಸಿ ಭಾರತೀಯರಾಗಿ" ಅರ್ಹತೆ ಪಡೆಯಬೇಕಾಗುತ್ತದೆ. ಅವರು ತಮ್ಮ ಮಾತೃಭೂಮಿಯೊಂದಿಗೆ ಪುನಃ ಸಂಪರ್ಕ ಹೊಂದಲು ಬಯಸಿದರೆ, ಅವರನ್ನು 1920 ಮತ್ತು 1946 ರ ಕಾಯಿದೆಗಳ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸುವ ವಸಾಹತುಶಾಹಿ ಪರಿಚ್ಛೇದಗಳನ್ನು ಬಳಸಿಕೊಂಡು ಸಾರಾಸಗಟಾಗಿ ಅವರನ್ನು ವಿದೇಶಿಯರು ಎಂದು ಕರೆಯಬೇಕಾಗಿಲ್ಲ. 1955 ರ ಪೌರತ್ವ ಕಾಯಿದೆ ಸೌಹಾರ್ದತೆಯನ್ನು ಸಾರುತ್ತದೆ. ವಿದೇಶಿ ಪಾಸ್‌ಪೋರ್ಟ್‌ನ್ನು ಹಿಡಿದಿಟ್ಟುಕೊಳ್ಳುವುದು ವ್ಯಕ್ತಿಯನ್ನು ಸಾರಾಸಗಟಾಗಿ ದೇಶದಿಂದ ಹೊರದಬ್ಬುವಂತಾಗಬಾರದು. 1946 ರಲ್ಲಿದ್ದ ಪರಿಸ್ಥಿತಿಯಲ್ಲಿ ವಿದೇಶಿಯರು ದೇಶದೊಳಗೆ ಪ್ರವೇಶಿಸುವುದನ್ನು ನಿರ್ಬಂಧಿಸಲು 1920 ಮತ್ತು 1946 ರ ಕಾಯಿದೆಗಳನ್ನು ಬಳಸಲಾಗುತ್ತಿತ್ತು. ಈಗ ಆ ಕಾಯಿದೆಗಳನ್ನು ಮುಂದುವರೆಸಿಕೊಂಡು ಹೋಗುವುದರಲ್ಲಿ ಅರ್ಥವಿದೆಯೇ? ಈ ವಿಷಯ ತೀರಾ ಪ್ರಮುಖವಾಗಿದ್ದು, ಇದರ ಬಗ್ಗೆ ಸಂಸತ್ತು ತೀವ್ರವಾಗಿ ಗಮನ ಹರಿಸಬೇಕಾಗಿದೆ.

### ಈಗ ಆಗಬೇಕಾಗಿರುವುದು

ಇಂದು, ಭಾರತದಲ್ಲಿ ಹುಟ್ಟಿದ ವ್ಯಕ್ತಿಯು ಜಾಗತಿಕ ಮೂಲದ ಅಥವಾ ರಾಷ್ಟ್ರೀಯತೆಯನ್ನು ಹೊಂದಿ ವಿದೇಶದಲ್ಲಿ ನೆಲೆಸಿರುವ ತನ್ನ ಜೀವನ ಸಂಗಾತಿಯ ಜೊತೆಗಿನ ವೈವಾಹಿಕ ಭಿನ್ನಾಭಿಪ್ರಾಯಗಳು ಮುಖ್ಯವಾಗುತ್ತಿವೆ. ಇಂದು ಈ ಸಮಸ್ಯೆಗಳನ್ನು ಬಗೆಹರಿಸಲು ಕಾನೂನಿನ ಚೌಕಟ್ಟಿನಲ್ಲಿ ಸಮರ್ಪಕವಾದ ವೇದಿಕೆ ಅಥವಾ ಅಥಾರಿಟಿಗಳನ್ನು ರೂಪಿಸುವುದು, ಅವುಗಳು ಸಮಸ್ಯೆಗಳನ್ನು ಹೇಳಿಕೊಳ್ಳಲು ಅವಕಾಶ ನೀಡಿ ಅದರಂತೆ ಬಗೆಹರಿಸುವುದು, ಅದು ಮಾಡದೆ ವ್ಯಕ್ತಿಯನ್ನು ದೇಶದಿಂದ ಹೊರಹಾಕಿ ವಿದೇಶಿ ವ್ಯಾಪ್ತಿಗೆ ಅವನನ್ನು ದೂಡುವುದು ನಾವು ವಿದೇಶಿ ವ್ಯವಸ್ಥೆಗೆ ಶರಣಾದಂತೆ. ಈ ಹಿನ್ನೆಲೆಯಲ್ಲಿ ಭಾರತದಲ್ಲಿ ಹುಟ್ಟಿ ಬೆಳೆದ ವ್ಯಕ್ತಿಯ ರಾಷ್ಟ್ರೀಯತೆಯ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು, ಸಮಾಜವಾದಿ ಜಾತ್ಯತೀತ ಸರ್ವತಂತ್ರ ಸ್ವತಂತ್ರ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತ ಎಲ್ಲ ರೀತಿಯ ಸಾಮರ್ಥ್ಯ ಹೊಂದಿದೆ. ನಮ್ಮ ಸಂವಿಧಾನದಲ್ಲಿ ನೀಡಿರುವ ಮೂಲಭೂತ ಹಕ್ಕುಗಳನ್ನು ಕಾಪಾಡುವಲ್ಲಿ ನಮ್ಮ ರಾಷ್ಟ್ರ ಹಾಗೂ ನಮ್ಮ ನ್ಯಾಯಾಂಗ ವ್ಯವಸ್ಥೆ ರಾಷ್ಟ್ರೀಯತೆಯ ಸಮಸ್ಯೆಯನ್ನು ಬಗೆಹರಿಸಲು ಸಮರ್ಥವಾಗಿದೆ. ಆದ್ದರಿಂದ ದ್ವಂದ್ವದಲ್ಲಿರುವ ಸ್ವಾತಂತ್ರ್ಯಪೂರ್ವ ಕಾನೂನುಗಳು ನಮ್ಮ ಕಾನೂನಿನ

(38ನೇ ಪುಟಕ್ಕೆ)

# ಸಾಫ್ಟ್‌ವೇರ್ ರಫ್ತು : ಕರ್ನಾಟಕದ ಸಾಧನೆ

ಮಾಧವ

ಹಿರಿಯ ಪತ್ರಕರ್ತರು.



**ಕರ್ನಾಟಕ ರಾಜ್ಯವು ಇತ್ತೀಚಿನ ವರ್ಷಗಳಲ್ಲಿ ಸಾಫ್ಟ್ ವೇರ್ ರಂಗದಲ್ಲಿ ತನ್ನದೇ ಆದ ಛಾಪು ಮೂಡಿಸುವಲ್ಲಿ ಸಫಲವಾಗಿದೆ. ಸಾಫ್ಟ್ ವೇರ್ ಮತ್ತು ಸಾಫ್ಟ್ ವೇರ್ ಸೇವೆ ರಫ್ತಿನಲ್ಲಿ ಇಡೀ ವಿಶ್ವವೇ ಬೆರಗುಗೊಳಿಸುವ ಸಾಧನೆ ಮಾಡಿದೆ. ಇದು ರಾಜ್ಯದ ಜನರು ಹೆಮ್ಮೆಪಡುವ ಸಂಗತಿಯಾಗಿದೆ.**

ದೇಶದ ಅರ್ಥ ವ್ಯವಸ್ಥೆಯ ಜಾಗತೀಕರಣ ಮತ್ತು ಉದಾರೀಕರಣದ ನಂತರ ಮಾಹಿತಿ ತಂತ್ರಜ್ಞಾನ ರಂಗದಲ್ಲಿ ಕರ್ನಾಟಕ ರಾಜ್ಯವು ಅದರಲ್ಲೂ ವಿಶೇಷವಾಗಿ ರಾಜಧಾನಿ ಬೆಂಗಳೂರು ನಗರ ದಾಪುಗಾಲು ಹಾಕುತ್ತ ಇಡೀ ವಿಶ್ವದ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದೆ. ಭಾರತದ 'ಸಿಲಿಕಾನ್ ಸಿಟಿ' / ಸಾಫ್ಟ್ ವೇರ್ ರಾಜಧಾನಿ ಎನ್ನುವ ಅಭಿವಾದನಕ್ಕೂ ಪಾತ್ರವಾಗಿದೆ. ಇದಕ್ಕೆ ರಾಜ್ಯ ಸರ್ಕಾರವು ಐ.ಟಿ ಉದ್ದಿಮೆಗೆ ವರ್ಷಗಳ ಉದ್ದಕ್ಕೂ ನೀಡುತ್ತ ಬಂದಿರುವ ಉತ್ತೇಜನ ಮತ್ತು ಇದರ ಪ್ರಯೋಜನ ಪಡೆದುಕೊಳ್ಳಲು ಬಹುರಾಷ್ಟ್ರೀಯ ಸಂಸ್ಥೆಗಳು ಉತ್ಸುಕತೆ ತೋರಿಸಿದ್ದೂ ಕಾರಣವಾಗಿದೆ.

ಬೆಂಗಳೂರಿನಲ್ಲಿಯೇ ಕೇಂದ್ರೀಕೃತಗೊಂಡಿದ್ದ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳ ಕಚೇರಿಗಳು ವರ್ಷಗಳು ಉರುಳಿದಂತೆ ಕ್ರಮೇಣ ಸಾಂಸ್ಕೃತಿಕ ನಗರಿ ಮೈಸೂರು ಮತ್ತು ಮಂಗಳೂರಿನತ್ತಲೂ ಮುಖಮಾಡಿದವು. ಹುಬ್ಬಳ್ಳಿಯಲ್ಲಿಯೂ ಕೆಲ ಸಂಸ್ಥೆಗಳು ನೆಲೆವೂರಲು ಯತ್ನಿಸಿದರೂ ಈ ಪ್ರಯತ್ನ ನಿರೀಕ್ಷಿಸಿದಷ್ಟು ಯಶಸ್ವಿಯಾಗಿಲ್ಲ.

ಮಾಹಿತಿ, ಸಂವಹನ ಮತ್ತು ತಂತ್ರಜ್ಞಾನ (ಐಸಿಟಿ) ರಂಗದ ಉದ್ದಿಮೆಗಳು ಬೆಂಗಳೂರಿನಲ್ಲಿ ಪೈಪೋಟಿ ಮೇಲೆ ನೆಲೆವೂರಲು ಆರಂಭಿಸುತ್ತಿದ್ದಂತೆ, ವಿಶ್ವದಾದ್ಯಂತ 'ಬೆಂಗಳೂರು ಬ್ರ್ಯಾಂಡ್'ನ ಜನಪ್ರಿಯತೆಯೂ ಹೆಚ್ಚತೊಡಗಿತು.

ದೇಶದ 2 ಮತ್ತು 3ನೆ ಅತಿದೊಡ್ಡ ಸಾಫ್ಟ್ ವೇರ್ ದೈತ್ಯ ಸಂಸ್ಥೆಗಳಾದ ಇನ್ಫೊಸಿಸ್ ಮತ್ತು ವಿಪ್ರೊ ಟೆಕ್ನಾಲಜೀಸ್ ನ ಮುಖ್ಯ ಕಚೇರಿ ಬೆಂಗಳೂರು ಆಗಿರುವುದಲ್ಲದೇ, ಇತರ ಬಹುರಾಷ್ಟ್ರೀಯ ಸಂಸ್ಥೆಗಳೂ ಇಲ್ಲಿಯೇ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳನ್ನು ಆರಂಭಿಸಿವೆ.

ಬೆಂಗಳೂರು ನಗರದಲ್ಲಿ ಮಷಿನ್ ಟೂಲ್ಸ್, ದೂರಸಂಪರ್ಕ ಸಲಕರಣೆ, ಎಲೆಕ್ಟ್ರಾನಿಕ್ಸ್ ಉತ್ಪನ್ನ, ವಾಹನ ಬಿಡಿಭಾಗ ತಯಾರಿಕೆಯ ಉದ್ದಿಮೆಗಳು ಬೇರು ಬಿಟ್ಟಿದ್ದರೂ, ಸಾಫ್ಟ್ ವೇರ್ ಉದ್ದಿಮೆಯು ಅಲ್ಪಾವಧಿಯಲ್ಲಿ ಶರವೇಗದಿಂದ ಬೆಳೆದು ಅಚ್ಚರಿ ಮೂಡಿಸಿದೆ.

ಬಹುರಾಷ್ಟ್ರೀಯ ಸಾಫ್ಟ್ ವೇರ್ ಸಂಸ್ಥೆಗಳಾದ ಕಾಗ್ನಿಜಂಟ್, ಟೆಕ್ಸಾಸ್ ಇನ್ ಸ್ಟ್ರುಮೆಂಟ್ಸ್, ಇಂಟೆಲ್, ಜನರಲ್ ಎಲೆಟ್ರಿಕ್, ಐಬಿಎಂ, ಅನಲಾಗ್ ಡಿವೈಸಸ್, ಫಿಲಿಪ್ಸ್ ಇನ್ನೊವೇಷನ್ ಕ್ಯಾಂಪಸ್, ಹ್ಯುಲೆಟ್ ಪಕಾರ್ಡ್, ಸನ್ ಮೈಕ್ರೊಸಿಸ್ಟಮ್ಸ್, ಸಿಸ್ಕೊ ಮುಂತಾದವು ಬೆಂಗಳೂರಿನಲ್ಲಿ ತಮ್ಮ ಸಾಫ್ಟ್ ವೇರ್ ಅಭಿವೃದ್ಧಿ ಮತ್ತು ಸಂಶೋಧನಾ ಕೇಂದ್ರಗಳನ್ನು ತೆರೆದಿವೆ.

ಇನ್ಫೊಸಿಸ್ ಸೇರಿದಂತೆ ಹಲವು ಪ್ರಮುಖ ಸಾಫ್ಟ್ ವೇರ್ ಸಂಸ್ಥೆಗಳು ಹೊರಗುತ್ತಿಗೆ ವಿಭಾಗಗಳನ್ನೂ ಹೊಂದಿವೆ. ಇದಲ್ಲದೇ ಮೋಟೊರೊಲ, ನೊರ್ಟೆಲ್, ಮತ್ತಿತರ ಸಣ್ಣ – ಪುಟ್ಟ ಸಂಸ್ಥೆಗಳೂ ಸಾಕಷ್ಟು ಸಂಖ್ಯೆಯಲ್ಲಿ ಸಾಫ್ಟ್ ವೇರ್ ರಫ್ತು ವಹಿವಾಟಿನಲ್ಲಿ ತೊಡಗಿಕೊಂಡಿವೆ. ಜ್ಞಾನಾಧಾರಿತ ಈ ಉದ್ದಿಮೆಯು ಲಕ್ಷಾಂತರ ಜನರಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಉದ್ಯೋಗ ಅವಕಾಶ ಕಲ್ಪಿಸಿರುವುದರ ಜತೆಗೆ

ರಾಜ್ಯ ಸರ್ಕಾರದ ಬೊಕ್ಕಸವನ್ನೂ ಭರ್ತಿ ಮಾಡಿವೆ.

### ಆರ್ಥಿಕತೆಗೆ ಗಮನಾರ್ಹ ಕೊಡುಗೆ

ಸಾಫ್ಟ್‌ವೇರ್ ಉದ್ದಿಮೆಯು ಕರ್ನಾಟಕ ರಾಜ್ಯದ ಅರ್ಥ ವ್ಯವಸ್ಥೆಯ ಆಧಾರ ಸ್ತಂಭಗಳಲ್ಲಿ ಒಂದಾಗಿದೆ. ಸಾಫ್ಟ್ ವೇರ್ ಸೇವಾ ರಫ್ತಿನಲ್ಲಿ ಮತ್ತು ರಫ್ತು ವರಮಾನದಲ್ಲಿ ರಾಜ್ಯವು ದೇಶದಲ್ಲಿಯೇ ಮುಂಚೂಣಿಯಲ್ಲಿ ಇದೆ. ಇದಕ್ಕೆ ದೇಶ – ವಿದೇಶಗಳ ಪ್ರಮುಖ ಸಾಫ್ಟ್ ವೇರ್ ಸಂಸ್ಥೆಗಳು ಬೆಂಗಳೂರನ್ನು ತಮ್ಮ ನೆಲೆಯನ್ನಾಗಿ ಮಾಡಿಕೊಂಡಿರುವುದೇ ಮುಖ್ಯ ಕಾರಣ.

ರಾಜ್ಯದಲ್ಲಿ ಸಾಫ್ಟ್ ವೇರ್ ಉದ್ದಿಮೆಗೆ ಅಗತ್ಯವಾದ ಮೂಲ ಸೌಕರ್ಯಗಳನ್ನು ಸಾಫ್ಟ್ ವೇರ್ ಟೆಕ್ನಾಲಜೀಸ್ ಪಾರ್ಕ್ ಆಫ್ ಇಂಡಿಯಾ (ಎಸ್ ಟಿ ಪಿಐ) ಒದಗಿಸಿದೆ.

ರಾಜ್ಯದ ಸಾಫ್ಟ್ ವೇರ್ ಉದ್ದಿಮೆಯು ಬ್ಯಾಂಕಿಂಗ್, ದತ್ತಾಂಶ, ಸಂಪರ್ಕ ಜಾಲ, ಸೆಮಿಕಂಡಕ್ಟರ್, ಮೊಬೈಲ್, ಅಂತರ್ಜಾಲ, ಹೊರಗುತ್ತಿಗೆ ಮತ್ತಿತರ ಕ್ಷೇತ್ರಗಳನ್ನು ಒಳಗೊಂಡಿದೆ. ಒಟ್ಟಾರೆ ತಂತ್ರಾಂಶ (ಸಾಫ್ಟ್ ವೇರ್) ಜಗತ್ತಿನ ಅಗತ್ಯಗಳನ್ನೆಲ್ಲ ಬೆಂಗಳೂರಿನ ಸಾಫ್ಟ್ ವೇರ್ ಉದ್ದಿಮೆ ಪೂರೈಸಲು ಶಕ್ತವಾಗಿದೆ.

### ಪ್ರಗತಿಯ ದಾಪುಗಾಲು

1980ರ ದಶಕದಲ್ಲಿಯೇ ಕರ್ನಾಟಕ ರಾಜ್ಯವು ದೇಶದ ಮಾಹಿತಿ ತಂತ್ರಜ್ಞಾನ ರಂಗದ ರಾಜಧಾನಿಯಾಗಿ ಬೆಳೆಯುವ ನಿಟ್ಟಿನಲ್ಲಿ ದೃಢವಾದ ದಾಪುಗಾಲು ಹಾಕತೊಡಗಿತು. ರಾಜ್ಯದಲ್ಲಿ ಈ ಉದ್ದಿಮೆಯು ಅಗಾಧವಾಗಿ ಬೆಳೆಯಲು ಬಹುರಾಷ್ಟ್ರೀಯ ಸಂಸ್ಥೆ ಟೆಕ್ಸಾಸ್ ಇನ್ ಸ್ಟ್ರುಮೆಂಟ್ ಸಂಸ್ಥೆಯು 1985ರಲ್ಲಿ ಭಾರತದಲ್ಲಿ ತನ್ನ ಸಾಗರೋತ್ತರ ಅಭಿವೃದ್ಧಿ ಕೇಂದ್ರ ಆರಂಭಿಸಲು ಉದ್ದೇಶಿಸಿದಾಗ ರಾಜ್ಯ ಸರ್ಕಾರವು ಎಚ್‌ಎಎಲ್ ವಿಮಾನ ನಿಲ್ದಾಣ ಬಳಿ ಸಂಸ್ಥೆಗೆ ಅಗತ್ಯವಾದ ಭೂಮಿ ಮಂಜೂರು ಮಾಡಿದ್ದೇ ಮುಖ್ಯ ಕಾರಣವಾಯಿತು.

### ಉನ್ನತ ಶೈಕ್ಷಣಿಕ ಸಂಸ್ಥೆಗಳ ಕೊಡುಗೆ

ರಾಜ್ಯದಲ್ಲಿ ಸಾಫ್ಟ್‌ವೇರ್ ಉದ್ದಿಮೆಯು ಬೇರುಬಿಡಲು ಇಲ್ಲಿಯ ಉನ್ನತಮಟ್ಟದ ವಿಜ್ಞಾನ ಸಂಸ್ಥೆಗಳು, ಎಂಜಿನಿಯರಿಂಗ್ ಕಾಲೇಜ್ ಗಳ ಕೊಡುಗೆಯೂ ಗಮನಾರ್ಹವಾಗಿದೆ. ಸಾಫ್ಟ್ ವೇರ್ ಉದ್ದಿಮೆಗೆ ಅಗತ್ಯವಾದ ಪರಿಣತ ಎಂಜಿನಿಯರುಗಳನ್ನು ಗಮನಾರ್ಹ ಪ್ರಮಾಣದಲ್ಲಿ ಕೊಡುಗೆಯಾಗಿ ನೀಡುವಲ್ಲಿ ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳೂ ಮಹತ್ವದ ಪಾತ್ರ ನಿರ್ವಹಿಸಿವೆ.

ಹೊಸ ಸಾಫ್ಟ್‌ವೇರ್ ಅಭಿವೃದ್ಧಿ ಪಡಿಸುವಲ್ಲಿ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳಾದ ಬಿಇಎಲ್, ಎಚ್ ಎಎಲ್, ಬಿಎಚ್‌ಇಎಲ್, ಐಟಿಐ, ಬಿಇಎಂಎಲ್ ಮತ್ತಿತರ ಸಂಸ್ಥೆಗಳ ಕೊಡುಗೆಯೂ ಗಮನಾರ್ಹವಾಗಿತ್ತು. ನ್ಯಾಷನಲ್ ಏರೊನಾಟಿಕ್ಸ್ ಲಿಮಿಟೆಡ್, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಮತ್ತಿತರ ಸಂಸ್ಥೆಗಳು ಕೂಡ ಸಾಫ್ಟ್ ವೇರ್ ಅಭಿವೃದ್ಧಿಗೆ ಅಗತ್ಯವಾದ ಮೂಲ ಜ್ಞಾನ ಒದಗಿಸಿಕೊಟ್ಟವು. ಅಧಿಕಾರಕ್ಕೆ ಬಂದ ಪ್ರತಿಯೊಂದು ಸರ್ಕಾರವೂ ಈ ಉದ್ದಿಮೆಯ ಬೆಳವಣಿಗೆಗೆ ಅಗತ್ಯವಾದ ಎಲ್ಲ ಬಗೆಯ ನೆರವನ್ನೂ ನೀಡಿದವು. ನಗರದ ತಂಪು ಹವೆಯ ವಾತಾವರಣವೂ ಈ ಉದ್ದಿಮೆಯ ಬೆಳವಣಿಗೆಗೆ ನೆರವಾಯಿತು.

### ಪರಿಣಾಮಗಳು

ಸರ್ಕಾರದ ಉತ್ತೇಜನ, ಪರಿಣತ ಪದವೀಧರರ ಲಭ್ಯತೆ, ಉನ್ನತ ಶಿಕ್ಷಣಕ್ಕೆ ದೊರೆತ ಪ್ರೋತ್ಸಾಹ ಮತ್ತಿತರ ಕಾರಣಗಳಿಂದ ಸಾಫ್ಟ್‌ವೇರ್ ಉದ್ದಿಮೆಯು ಅಲ್ಪಾವಧಿಯಲ್ಲಿ ಗಮನಾರ್ಹ ಬೆಳವಣಿಗೆ ದಾಖಲಿಸಿತು. ಇದರಿಂದ ರಾಜ್ಯದ ತಲಾ ಆದಾಯ ಹೆಚ್ಚಳಗೊಂಡಿತು. ಸಾಫ್ಟ್ ವೇರ್ ಎಂಜಿನಿಯರುಗಳು ಕೈತುಂಬ ಸಂಬಳ ಪಡೆಯುವಂತಾಯಿತು.

ತಮ್ಮ ಪಾಲಕರು ನಿವೃತ್ತಿ ಸಂದರ್ಭದಲ್ಲಿ ಪಡೆಯುತ್ತಿದ್ದ ವೇತನವನ್ನು ಹೊಸ ತಲೆಮಾರಿನ ಯುವಕರು ಆರಂಭದಿಂದಲೇ ಪಡೆಯಲು ಆರಂಭಿಸಿದರು. ಇದು ಒಟ್ಟಾರೆ ಮಧ್ಯಮ ವರ್ಗದ ಜೀವನಶೈಲಿಯನ್ನೇ ಬದಲಿಸಿತು. ದ್ವಿಚಕ್ರ ವಾಹನ, ಕಾರು, ಮನೆ, ಖರೀದಿಗೆ ಜನರು ಹೆಚ್ಚು ಒಲವು ತೋರತೊಡಗಿದರು. ಇದರಿಂದ ನಗರದ ಸುತ್ತಮುತ್ತ ರಿಯಲ್ ಎಸ್ಟೇಟ್ ವಹಿವಾಟು ಚುರುಕಾಗಿ ಬೆಳವಣಿಗೆ ಹೊಂದಿತು. ಭೂಮಿಗೆ ಚಿನ್ನದ ಬೆಲೆ ಬಂದಿತು.



### ರಫ್ತು ಗಳಿಕೆ

ಆರಂಭದ ವರ್ಷಗಳಿಂದಲೂ ರಾಜ್ಯ ಸರ್ಕಾರವು ಮಾಹಿತಿ ತಂತ್ರಜ್ಞಾನ (ಐಟಿ) ರಫ್ತು ವಹಿವಾಟಿನಿಂದ ಸಾಕಷ್ಟು ವರಮಾನ ಗಳಿಸುತ್ತಿದೆ.

ಸಾಫ್ಟ್ ವೇರ್ ಮತ್ತು ಸಾಫ್ಟ್ ವೇರ್ ಸೇವೆಯ ರಫ್ತು ವಹಿವಾಟು ನಿರಂತರವಾಗಿ ಏರಿಕೆ ದಾಖಲಿಸುತ್ತಲೇ ಬಂದಿದೆ. ವರ್ಷದಿಂದ ವರ್ಷಕ್ಕೆ ಏರುಗತಿಯಲ್ಲಿಯೇ ಇರುವ ಈ ರಫ್ತು ವಹಿವಾಟು ಈಗ ದೇಶದ ಐಟಿ ರಫ್ತಿನಲ್ಲಿ ಗಮನಾರ್ಹ ಪಾಲು ಹೊಂದಿರುವುದಷ್ಟೇ ಅಲ್ಲದೇ, ಮೊದಲ ಸ್ಥಾನವನ್ನೂ ಕಾಯ್ದುಕೊಂಡು ಬಂದಿದೆ.

ದೇಶಿ ಐಟಿ ರಫ್ತಿನಲ್ಲಿ ರಾಜ್ಯದ ಪಾಲು ಈಗ ಶೇ 44ರಷ್ಟು ಆಗಿದೆ. 2011–12 ನೆ ಹಣಕಾಸು ವರ್ಷದಲ್ಲಿ ರಾಜ್ಯದ ಐ.ಟಿ ರಫ್ತು ಶೇ 50ರಷ್ಟು (ರೂ 1.3 ಲಕ್ಷ ಕೋಟಿಗಳಷ್ಟು) ಏರಿಕೆ ದಾಖಲಿಸಿತು.

ಯೂರೋಪ್, ಏಷ್ಯಾ ಪ್ಯಾಸಿಫಿಕ್, ಲ್ಯಾಟಿನ್ ಅಮೆರಿಕ ಮತ್ತು ಆಫ್ರಿಕಾದಲ್ಲಿ ಹೊಸ ಮಾರುಕಟ್ಟೆಗಳಿಗೆ ವಹಿವಾಟು ವಿಸ್ತರಿಸಿದ್ದರಿಂದ ಇದು ಸಾಧ್ಯವಾಗಿದೆ.

ನೆರೆಹೊರೆಯ ಕೇರಳ, ತಮಿಳುನಾಡು ಮತ್ತು ಆಂಧ್ರಪ್ರದೇಶದ ತೀವ್ರ ಪೈಪೋಟಿ ನಡುವೆಯೂ ರಾಜ್ಯವು ಐ.ಟಿ ರಫ್ತಿನಲ್ಲಿ ಮುಂಚೂಣಿ ಸ್ಥಾನ ಕಾಯ್ದುಕೊಂಡು ಬಂದಿದೆ.

2014ನೇ ಹಣಕಾಸು ವರ್ಷದಲ್ಲಿ ರಫ್ತು ವಹಿವಾಟು 1.58 ಲಕ್ಷ ಕೋಟಿ ರೂಪಾಯಿಗಳಷ್ಟಾಗಿದೆ. ಇದು ದೇಶದ ಸಾಫ್ಟ್‌ವೇರ್ ರಫ್ತಿನ ಒಂದು ಮೂರಾಂಶದಷ್ಟಿದೆ. 2020ರಷ್ಟೊತ್ತಿಗೆ ರಾಜ್ಯದ ಐಟಿ ರಫ್ತು ವಹಿವಾಟು 4 ಲಕ್ಷ ಕೋಟಿ ರೂಪಾಯಿಗಳಷ್ಟಾಗುವ ಅಂದಾಜು ಇದೆ.

2012–13ನೇ ಹಣಕಾಸು ವರ್ಷದಲ್ಲಿ ಇದು 1.35 ಲಕ್ಷ ಕೋಟಿ ರೂಪಾಯಿಗಳಷ್ಟಿತ್ತು. ಇದರಲ್ಲಿ ಎರಡನೆ ಹಂತದ ನಗರಗಳಾದ ಮೈಸೂರು, ಮಂಗಳೂರು ಮತ್ತು ಹುಬ್ಬಳ್ಳಿ – ಧಾರವಾಡ ನಗರಗಳ ಕೊಡುಗೆಯು 2,680 ಕೋಟಿ ರೂಪಾಯಿಗಳಷ್ಟಿದೆ. ಕಲಬುರ್ಗಿ ಮತ್ತು ಶಿವಮೊಗ್ಗ ನಗರಗಳಲ್ಲಿಯೂ ಐಟಿ ಪಾರ್ಕ್‌ಗಳು ಈಗಾಗಲೇ ಕಾರ್ಯಾರಂಭ ಮಾಡಿವೆ.

**ಐ.ಟಿ ಹೂಡಿಕೆ ವಲಯ**

ಕೇಂದ್ರ ಸರ್ಕಾರವು ರಾಜ್ಯಕ್ಕೆ ಐಟಿ ಹೂಡಿಕೆ ವಲಯ ಮಂಜೂರು ಮಾಡಿದೆ. ಈ ವಲಯವು ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ 40 ಚದರ ಕಿ. ಮೀಟರ್ ವ್ಯಾಪ್ತಿಯಲ್ಲಿ ಅಸ್ತಿತ್ವಕ್ಕೆ ಬರಲಿದೆ.

ಇದು 12 ಲಕ್ಷ ನೇರ ಮತ್ತು 28 ಲಕ್ಷದಷ್ಟು ಪರೋಕ್ಷ ಉದ್ಯೋಗ ಅವಕಾಶಗಳನ್ನು ಸೃಷ್ಟಿಸಲಿದೆ. ಸದ್ಯಕ್ಕೆ ಅಂದಾಜು 8 ಲಕ್ಷದಷ್ಟು ಜನರಿಗೆ ಉದ್ಯೋಗ ಅವಕಾಶ ಕಲ್ಪಿಸಿರುವ ಈ ಉದ್ದಿಮೆಯು, 2020ರಷ್ಟೊತ್ತಿಗೆ 20 ಲಕ್ಷ ಜನರಿಗೆ ಉದ್ಯೋಗ ಅವಕಾಶ ಒದಗಿಸಲಿದೆ ಎಂದು ಅಂದಾಜಿಸಲಾಗಿದೆ. ಜತೆಗೆ ರಾಜ್ಯ ಸರ್ಕಾರದ ವರಮಾನ ಹೆಚ್ಚಳಕ್ಕೂ ನೆರವಾಗಲಿದೆ.

ಬೆಂಗಳೂರು ಸುತ್ತಮುತ್ತ ಬೇರುಬಿಟ್ಟಿರುವ ಸಾಫ್ಟ್ ವೇರ್ ಸಂಸ್ಥೆಗಳು ಜಿಲ್ಲಾ ಕೇಂದ್ರಗಳು ಮತ್ತು ಇತರ ಪಟ್ಟಣಗಳತ್ತ ಮುಖ ಮಾಡಿದರೆ ಅದರಿಂದ ಸಂಸ್ಥೆಗಳು ಮತ್ತು ರಾಜ್ಯ ಸರ್ಕಾರಕ್ಕೂ ಹೆಚ್ಚಿನ ಪ್ರಯೋಜನ ದೊರೆಯಲಿದೆ.

ಬಿಡದಿ, ಬಳ್ಳಾರಿ, ಬೆಳಗಾವಿ, ಕುಶಾಲನಗರ, ಕೋಲಾರ, ಶಿವಮೊಗ್ಗ ಮತ್ತು ತುಮಕೂರು ನಗರಗಳಲ್ಲಿಯೂ ಐಟಿ ಸಂಸ್ಥೆಗಳಿಗೆ ಕಡಿಮೆ ವೆಚ್ಚದಲ್ಲಿ ಮೂಲ ಸೌಕರ್ಯಗಳು ದೊರೆಯುತ್ತವೆ. ಕಾರ್ಯನಿರ್ವಹಣೆ ವೆಚ್ಚ ಕಡಿಮೆಯಾಗಲಿದೆ. ಕಡಿಮೆ ಸಂಬಳಕ್ಕೆ ಸಿಬ್ಬಂದಿಯೂ ಲಭ್ಯವಾಗಲಿದ್ದಾರೆ. ಬಂಡವಾಳ ಹೂಡಿಕೆ



ಆಕರ್ಷಿಸುವಲ್ಲಿ ಬೆಂಗಳೂರು ನಗರವು ವಿಶ್ವದ 16ನೆ ನಗರವಾಗಿದೆ ಎಂದು ವಿಶ್ವ ಬ್ಯಾಂಕ್ ಮತ್ತು ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆ (ಐಎಂಎಫ್) ಅಂದಾಜಿಸಿವೆ.

ಕರ್ನಾಟಕ ರಾಜ್ಯವು ಇತ್ತೀಚಿನ ವರ್ಷಗಳಲ್ಲಿ ಸಾಫ್ಟ್ ವೇರ್ ರಂಗದಲ್ಲಿ ತನ್ನದೇ ಆದ ಛಾಪು ಮೂಡಿಸುವಲ್ಲಿ ಸಫಲವಾಗಿದೆ. ಸಾಫ್ಟ್ ವೇರ್ ಮತ್ತು ಸಾಫ್ಟ್ ವೇರ್ ಸೇವೆ ರಫ್ತಿನಲ್ಲಿ ಇಡೀ ವಿಶ್ವವೇ ಬೆರಗುಗೊಳಿಸುವ ಸಾಧನೆ ಮಾಡಿದೆ. ಇದು ರಾಜ್ಯದ ಜನರು ಹೆಮ್ಮೆಪಡುವ ಸಂಗತಿಯಾಗಿದೆ. ❑

(35ನೇ ಪುಟದಿಂದ)

## ಕಾನೂನು – ಸಂದಿಗ್ಧದಲ್ಲಿ ಅನಿವಾಸಿ ಭಾರತೀಯರು

ಪುಸ್ತಕದಿಂದ ಹೋಗಬೇಕು. ಜೊತೆಗೆ ಅಪ್ರಸ್ತುತವಾಗಿರುವ ಕಾನೂನುಗಳು ಹೋಗಬೇಕು.

ಕಾನೂನುಗಳನ್ನು ರೂಪಿಸುವವರು ತೀವ್ರವಾಗಿ ಆಲೋಚಿಸಿ ಅಂತಾರಾಷ್ಟ್ರೀಯ ಭಾರತೀಯರ ಹಕ್ಕುಗಳನ್ನು ರಕ್ಷಿಸಲು ಕಾನೂನುಗಳನ್ನು ರೂಪಿಸಬೇಕಿದೆ. ಜರೂರಾಗಿ ಆಗಬೇಕಿರುವ ಕೆಲಸವೇನೆಂದರೆ, ಅಂತಾರಾಷ್ಟ್ರೀಯ ಪೋಷಕರು ತಮ್ಮ ವೈಯಕ್ತಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ತಮ್ಮ ಮುಗ್ಧ ಮಕ್ಕಳನ್ನು ಒಂದು ಅಸ್ತ್ರವಾಗಿ ಬಳಸಿಕೊಂಡು ದೇಶದಿಂದ ಹೊರದಬ್ಬುವುದನ್ನು ತಡೆಯುವುದು.

ಬಾಡಿಗೆ ತಾಯಿಯಾಗುವುದು ಭಾರತದಲ್ಲಿ ಒಂದು ಉದ್ಯಮವಾಗಿ ಬೆಳೆಯುತ್ತಿದ್ದು, ಇದನ್ನು ಒಂದು ವ್ಯಾಪಾರವಾಗಿ ಬಳಸಿಕೊಳ್ಳುವುದನ್ನು ತಪ್ಪಿಸಲು ಪರಿಣಾಮಕಾರಿಯಾದ ಕಾನೂನಿನ ಚೌಕಟ್ಟಿನಲ್ಲಿ ಇದನ್ನು ತರಬೇಕಿದೆ. ಭಾರತದ ಅಮೂಲ್ಯ ಆಸ್ತಿಯಾಗಿರುವ ಮಾನವ ಸಂಪನ್ಮೂಲವನ್ನು ದುರಾಸೆಯ ದಲ್ಲಾಳಿಗಳು ಭಾರತೀಯರನ್ನು ಕಾನೂನು ಬಾಹಿರವಾಗಿ ಕಳ್ಳಸಾಗಣೆ ಮುಖಾಂತರ ಇತರೆ ದೇಶಗಳಿಗೆ ವಲಸೆ ಹೋಗುವಂತೆ ಮಾಡುವುದನ್ನು ತಡೆಯಲು ಬಿಗಿಯಾದ ಕಾನೂನುಗಳನ್ನು ತರುವ ಅಗತ್ಯವಿದೆ. ಹಾಗೆಯೇ ನಮ್ಮ ದೇಶದ ಪತಿ ಯಾ ಪತ್ನಿಯ ಜೀವನಾಂಶದ ಹಕ್ಕುಗಳು ಮತ್ತು ವೈವಾಹಿಕ ಕಾನೂನುಗಳು ಅಂತಾರಾಷ್ಟ್ರೀಯ ಕುಟುಂಬ ಕಾನೂನು ಕಟ್ಟುಪಾಡಿಗೆ ಒಳಪಟ್ಟು ಕಾರ್ಯನಿರ್ವಹಿಸುವಂತೆ ಕ್ರಮ ತೆಗೆದುಕೊಳ್ಳಬೇಕು.

ಅಂತಾರಾಷ್ಟ್ರೀಯ ಮಕ್ಕಳನ್ನು ದತ್ತು ತೆಗೆದುಕೊಳ್ಳುವ ನಿಯಮಗಳು ಹೊಸ ಕಾನೂನಿನ ಪ್ರಕಾರ ನಿಯಂತ್ರಿಸುವ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಪ್ರಸ್ತುತ ಎಲ್ಲ ಶಕ್ತಿಯನ್ನು ವಾಣಿಜ್ಯಕ್ಕೆ ಸಂಬಂಧಿಸಿದ ಕಾನೂನುಗಳನ್ನು ರೂಪಿಸುವಲ್ಲಿ ಕೇಂದ್ರೀಕರಿಸಲಾಗುತ್ತಿದ್ದು, ಕುಟುಂಬ ಮತ್ತು ಸಮಾಜವನ್ನು ನಿರ್ವಹಿಸುವ ಕಾನೂನುಗಳನ್ನು ರೂಪಿಸುವಲ್ಲಿ ಮಲತಾಯಿ ಧೋರಣೆ ಅನುಸರಿಸಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಕಳೆದ 50 ವರ್ಷಗಳಲ್ಲಿ ದೇಶದಲ್ಲಿ ಯಾವುದೇ ಹೇಳಿಕೊಳ್ಳುವಂತಹ ಬದಲಾವಣೆ ಕಂಡು ಬಂದಿಲ್ಲ. ಈಗ ನಮ್ಮ ಆಲೋಚನೆ ಬದಲಾಗಬೇಕಿದೆ. ನಮ್ಮ ಗಮನವನ್ನು ಬೇರೆಡೆಗೆ ತಿರುಗಿಸಬೇಕಿದೆ.

ಅನಿವಾಸಿ ಭಾರತೀಯರಿಗೆ ನಮ್ಮ ದೇಶಕ್ಕೆ ಆಗಮಿಸಲು ಉಚಿತವಾದ ವ್ಯವಸ್ಥೆಯನ್ನು ಮಾಡಬೇಕಾದರೆ, ಅವರು ಬದುಕಲು ಸಂತೋಷದಾಯಕವಾದ ಕೌಟುಂಬಿಕ ಜೀವನ ಮತ್ತು ಸುಖಕರವಾದ ಸಾಮಾಜಿಕ ಜೀವನದ ಸವಲತ್ತುಗಳನ್ನು ಅವರಿಗೆ ಕೊಡಬೇಕಾಗುತ್ತದೆ. ಭಾರತದ ಕಾನೂನುಗಳು ಕೂಪಮಂಡೂಕಗಳಂತೆ ಇರಲು ಸಾಧ್ಯವಿಲ್ಲ. ಅವುಗಳು ವಿದೇಶಗಳ ಕಾನೂನುಗಳ ಜೊತೆಗೆ ಹೊಂದಣಿಕೆ ಮಾಡಿಕೊಳ್ಳಲೇ ಬೇಕಾಗಿದೆ. ❑

# ಹಣ್ಣು ಮತ್ತು ತರಕಾರಿ ರಫ್ತು – ಸವಾಲು

* ಡಾ. ಎಸ್.ಬಿ. ಹೊಸಮನಿ
** ವಿನಾಯಕ ಹೊಸಮನಿ



**ರಫ್ತು ಪ್ರಕ್ರಿಯೆಯನ್ನು ಬಲಪಡಿಸಲು, ಹೆಚ್ಚಿನ ಕೃಷಿ ಸರಕುಗಳನ್ನು ರಫ್ತು ಮಾಡಬೇಕಾದ ಅವಶ್ಯಕತೆಯನ್ನು ರೈತರಿಗೆ ತಿಳಿಸಿಕೊಡುವುದರೊಂದಿಗೆ ರೈತರು, ಸಂಸ್ಕರಣದಾರರು, ರಫ್ತುದಾರರು ಮತ್ತು ಗ್ರಾಹಕರ ನಡುವೆ ಹೊಂದಾಣಿಕೆಯನ್ನು ಏರ್ಪಡಿಸಬೇಕು.**

ಹಣ್ಣು ಮತ್ತು ತರಕಾರಿಗಳು ದಿನನಿತ್ಯ ನಮ್ಮ ಆಹಾರದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ ಹಾಗೂ ದೇಹಕ್ಕೆ ಬೇಕಾಗುವ ಹೆಚ್ಚಿನ ಪೋಷಕಾಂಶಗಳನ್ನು ಒದಗಿಸುತ್ತವೆ. ತರಕಾರಿಗಳು ಜೀವಸತ್ವಗಳನ್ನು ಒದಗಿಸುವ ಅತ್ಯುತ್ತಮ ಮೂಲಗಳಾಗಿವೆ. ಅವುಗಳಲ್ಲಿ ಪ್ರಮುಖವಾಗಿ ನಿಯಾಸಿನ್, ರಿಬೊಫ್ಲೆವಿನ್, ಥೈಮಿನ್ ಮತ್ತು 'ಎ', 'ಸಿ', 'ಬಿ', 'ಕೆ' ಜೀವಸತ್ವಗಳು ಹಾಗೂ ಪ್ರೋಟೀನ್, ಕಾರ್ಬೋಹೈಡ್ರೇಟ್‌ಗಳ ಜೊತೆಗೆ ಕ್ಯಾಲ್ಸಿಯಂ, ಕಬ್ಬಿಣ ಮುಂತಾದ ಖನಿಜಾಂಶಗಳನ್ನು ಒದಗಿಸುತ್ತವೆ. ಇವುಗಳನ್ನೆಲ್ಲ ಒಳಗೊಂಡ ತರಕಾರಿಗಳು ಮಾನವನ ಆರೋಗ್ಯಕ್ಕೆ ಅತಿ ಕಡಿಮೆ ಬೆಲೆಯ ಹಾಗೂ ಸ್ವಾಭಾವಿಕ ರಕ್ಷಣಾ ಕವಚವಾಗಿದೆ. ಪ್ರತಿಯೊಬ್ಬ ಮನುಷ್ಯನು ದಿನಕ್ಕೆ 300 ಗ್ರಾಂ ತರಕಾರಿಗಳನ್ನು ಸೇವಿಸಬೇಕು ಮತ್ತು ಹಾಗೆ ಸೇವಿಸುವುದರಿಂದ ಅವನು ಹೆಚ್ಚು ಆರೋಗ್ಯಶಾಲಿಯಾಗಿ ಜೀವನವನ್ನು ನಡೆಸಲು ಸಾಧ್ಯವಾಗುತ್ತದೆ. ಆದರೆ, ಬಹಳಷ್ಟು ಜನರು 130 ಗ್ರಾಂ ಮಾತ್ರ ಸೇವಿಸುತ್ತಾರಲ್ಲದೆ ಇದರಿಂದ ಆರೋಗ್ಯದ ಗುಣಮಟ್ಟವನ್ನು ಕಾಯ್ದುಕೊಳ್ಳುವಲ್ಲಿ ವಿಫಲರಾಗುತ್ತಾರೆ.

ಹಣ್ಣುಗಳು ನಮ್ಮ ಆರೋಗ್ಯ ಸಂರಕ್ಷಣೆಯಲ್ಲಿ ಮಹತ್ತರ ಪಾತ್ರ ವಹಿಸುತ್ತವೆ. ಇವುಗಳು 'ಎ', 'ಸಿ' ಮತ್ತು 'ಇ' ಜೀವಸತ್ವಗಳನ್ನು ಪೂರೈಸುತ್ತವೆ. ಉದಾಹರಣೆಗೆ – ಕಿತ್ತಳೆಯಲ್ಲಿ ಕೊಬ್ಬು, ಕ್ಯಾಲ್ಸಿಯಂ, ಕಬ್ಬಿಣ, ಸೋಡಿಯಂ, ಮೆಗ್ನಿಷಿಯಂ, ಪೊಟ್ಯಾಶಿಯಂ ಖನಿಜಾಂಶಗಳಿದ್ದು ಆರೋಗ್ಯ ಪೋಷಣೆಗೆ ಯೋಗ್ಯ ಆಹಾರವಾಗಿದೆ. ಕಿತ್ತಳೆಯಲ್ಲಿರುವ ಫ್ಲವನೊನೆಸ್ ಎಂಬ ರಾಸಾಯನಿಕ ಕೆಟ್ಟ ಕೊಲೆಸ್ಟ್ರಾಲ್(ಎಲ್‌ಡಿಎಲ್) ಕಡಿಮೆ ಮಾಡಿ, ಒಳ್ಳೆಯ ಕೊಲೆಸ್ಟ್ರಾಲ್(ಎಚ್‌ಡಿಎಲ್) ಪ್ರಮಾಣವನ್ನು ಹೆಚ್ಚಿಸುವ ಸಾಮರ್ಥ್ಯ ಹೊಂದಿದೆ. ಹಲ್ಲು ಮತ್ತು ವಸಡುಗಳ ಅನೇಕ ಸಮಸ್ಯೆಗಳೂ ಸಹ ಕಿತ್ತಳೆ ಸೇವನೆಯಿಂದ ನಿವಾರಣೆಯಾಗುತ್ತವೆ. ಇದರ ಸಿಪ್ಪೆಯನ್ನು ಕಾಂತಿವರ್ಧಕವಾಗಿ ಉಪಯೋಗಿಸಬಹುದು. ಈ ಹಣ್ಣುಗಳಲ್ಲಿ ಪಾಲಿಫಿನಾಲ್ಸ್ ಎಂಬ ಆಂಟಿಆಕ್ಸಿಡಾಂಟ್‌ಗಳು ಹೇರಳವಾಗಿದೆ ಎಂದು ಸಂಶೋಧನೆಯಿಂದ ಸಾಬೀತಾಗಿದ್ದು, ಹಣ್ಣಿನ ಎಲ್ಲ ಭಾಗಗಳು ಉಪಯುಕ್ತವಾಗಿವೆ. ರಕ್ತಹೀನತೆ ಮತ್ತು ಇರುಳು ಕುರುಡಿನಿಂದ ಬಳಲುವವರು ನಿತ್ಯವೂ ಕಿತ್ತಳೆಯನ್ನು ಸೇವಿಸುವುದು ಒಳ್ಳೆಯದು. ದ್ರಾಕ್ಷಿ ಹಾಗೂ ಕಿತ್ತಳೆಹಣ್ಣಿನ ರಸವನ್ನು ಪ್ರತಿದಿನ ಸೇವಿಸುವುದರಿಂದ ಯಕೃತ್ತಿನ ಹಾಗೂ ಹೃದಯ ಸಂಬಂಧಿ ರೋಗಗಳು ನಿವಾರಣೆಯಾಗುವುವು. ಒಟ್ಟಿನಲ್ಲಿ ಜನಸಾಮಾನ್ಯರ ಕೈಗೆ ಎಟುಕುವ ಈ ಹಣ್ಣು ಮತ್ತು ತರಕಾರಿಗಳು ರುಚಿಗಷ್ಟೇ ಅಲ್ಲ, ಆರೋಗ್ಯ ಕಾಪಾಡುವಲ್ಲೂ ಸಹಕಾರಿ.

ಪ್ರಪಂಚದ ಒಟ್ಟು ಹಣ್ಣು ಮತ್ತು ತರಕಾರಿಗಳ ಉತ್ಪಾದನೆ 370 ಮಿಲಿಯನ್ ಮೆಟ್ರಿಕ್ ಟನ್‌ಗಳಷ್ಟು. ಆದರೆ, ಭಾರತದ ವಾರ್ಷಿಕ ಉತ್ಪಾದನೆಯ ಪ್ರಮಾಣ 32 ಮಿಲಿಯನ್ ಮೆಟ್ರಿಕ್ ಟನ್‌ಗಳಷ್ಟಿದೆ. ತರಕಾರಿ ಬೆಳೆಗಳ ಉತ್ಪಾದನೆಯಲ್ಲಿ ಚೀನಾ ದೇಶವು ಏಷ್ಯಾದಲ್ಲಿ ಮೊದಲ ಸ್ಥಾನ

* ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕೃಷಿ ಅರ್ಥಶಾಸ್ತ್ರ ವಿಭಾಗ, ಕೃಷಿ ವಿಶ್ವ ವಿದ್ಯಾಲಯ, ಧಾರವಾಡ, ** ಉಪನ್ಯಾಸಕರು, ಬಿಬಿಎ ಮಹಾವಿದ್ಯಾಲಯ, ಕೆಎಲ್‌ಇ ಸಂಸ್ಥೆ, ಹುಬ್ಬಳ್ಳಿ

**ಕೋಷ್ಟಕ–1 : ಭಾರತದಿಂದ ರಫ್ತಾಗುವ ಪ್ರಮುಖ ತಾಜಾ ಹಣ್ಣುಗಳು ಮತ್ತು ತರಕಾರಿಗಳ ಪ್ರಮಾಣ ಮತ್ತು ಮೌಲ್ಯ**

| ವಿವರ | 2011–12 | | 2012–13 | | 2013–14 | |
|---|---|---|---|---|---|---|
| | ಪ್ರಮಾಣ ಮೆಟ್ರಿಕ್ ಟನ್‌ಗಳಲ್ಲಿ | ಮೌಲ್ಯ ಲಕ್ಷ ರೂ. ಗಳಲ್ಲಿ | ಪ್ರಮಾಣ ಮೆಟ್ರಿಕ್ ಟನ್‌ಗಳಲ್ಲಿ | ಮೌಲ್ಯ ಲಕ್ಷ ರೂ. ಗಳಲ್ಲಿ | ಪ್ರಮಾಣ ಮೆಟ್ರಿಕ್ ಟನ್‌ಗಳಲ್ಲಿ | ಮೌಲ್ಯ ಲಕ್ಷ ರೂ. ಗಳಲ್ಲಿ |
| ಹೂಗಾರಿಕೆ | 30926.02 | 36532.15 | 27121.86 | 42344.6 | 22485.21 | 45590.62 |
| ಹಣ್ಣುಗಳು ಮತ್ತು ತರಕಾರಿ ಬೀಜಗಳು | 15205.81 | 28776.35 | 17168 | 34772.39 | 17816.7 | 41053.76 |
| ಒಟ್ಟು ಹೂಗಾರಿಕೆ ಮತ್ತು ಬೀಜಗಳು | 46131.83 | 65308.5 | 44289.86 | 77116.99 | 40301.91 | 86644.38 |
| **ಹಣ್ಣುಗಳು ಮತ್ತು ತರಕಾರಿಗಳು** | | | | | | |
| ತಾಜಾ ಈರುಳ್ಳಿ | 1309924.82 | 172299.8 | 1666872.6 | 196662.66 | 1482498.58 | 316961.25 |
| ಇತರೆ ತಾಜಾ ತರಕಾರಿಗಳು | 734178.83 | 131048.2 | 768627.2 | 151633.56 | 953731.22 | 229332.27 |
| ಅಕ್ರೋಡ | 5841.56 | 23108.4 | 5295.47 | 19983.57 | 6726.36 | 32453.5 |
| ತಾಜಾ ಮಾವಿನ ಹಣ್ಣುಗಳು | 63441.29 | 20974.3 | 55584.99 | 26471.78 | 41279.97 | 28542.85 |
| ತಾಜಾ ದ್ರಾಕ್ಷಿ | 108584.56 | 60288.15 | 172744.42 | 125942.78 | 192616.91 | 166647.45 |
| ಇತರೆ ತಾಜಾ ಹಣ್ಣುಗಳು | 270437.2 | 75541.11 | 263970.29 | 77975.78 | 240552.45 | 102159.21 |
| ಒಟ್ಟು ಹಣ್ಣುಗಳು ಮತ್ತು ತರಕಾರಿಗಳು | 2492408.26 | 483259.96 | 2933094.97 | 598670.13 | 2917405.49 | 876096.53 |
| **ಸಂಸ್ಕರಿಸಿದ ಹಣ್ಣುಗಳು ಮತ್ತು ತರಕಾರಿಗಳು** | | | | | | |
| ಒಣಗಿದ ಮತ್ತು ಕಾಯ್ದಿಟ್ಟ ತರಕಾರಿಗಳು | 64794.09 | 52678.47 | 68520.25 | 63795.76 | 56158.38 | 74271.74 |
| ಮಾವಿನ ತಿರುಳು | 150499.06 | 62082.91 | 147815.69 | 60855.73 | 174860.33 | 77294.76 |
| ಇತರೆ ಸಂಸ್ಕರಿಸಿದ ಹಣ್ಣುಗಳು ಮತ್ತು ತರಕಾರಿಗಳು | 274807.05 | 157759.82 | 269217.26 | 173305.54 | 287384.61 | 226660.26 |
| ಒಟ್ಟು ಸಂಸ್ಕರಿಸಿದ ಹಣ್ಣುಗಳು ಮತ್ತು ತರಕಾರಿಗಳು | 490100.2 | 272521.2 | 485553.2 | 297957 | 518403.3 | 378226.8 |

ಹೊಂದಿದ್ದರೆ, ಭಾರತವು ಎರಡನೆಯ ಸ್ಥಾನ ಹೊಂದಿದೆ. ನಮ್ಮ ದೇಶದಲ್ಲಿ ತರಕಾರಿಯನ್ನು ಒಟ್ಟು 6.3 ಮಿಲಿಯನ್ ಹೆಕ್ಟೇರ್‌ಗಳಲ್ಲಿ ಬೆಳೆಯುತ್ತಿದ್ದು, ಉತ್ಪಾದನೆ 99.40 ಮಿಲಿಯನ್ ಟನ್‌ಗಳಷ್ಟಿದೆ. ಇತ್ತೀಚಿನ ದಿನಗಳಲ್ಲಿ ಬೆಳೆಯುತ್ತಿರುವ ಜನಸಂಖ್ಯೆಯಿಂದಾಗಿ ಇವುಗಳ ಪೂರೈಕೆ ಕಡಿಮೆಯಾಗುತ್ತಿದೆ.

ಇದಕ್ಕೆ ಕಾರಣವೇನೆಂದರೆ ಅತಿ ಕಡಿಮೆ ಸಾಗುವಳಿ ಪ್ರದೇಶ, ಉದಾರೀಕರಣ, ಕೈಗಾರಿಕೀಕರಣ, ನಗರಪ್ರದೇಶಗಳಿಗೆ ರೈತರ ವಲಸೆ ಹೀಗೆ ಹತ್ತು ಹಲವು. ಜಗತ್ತಿನಲ್ಲಿ ಭಾರತವು ಹಣ್ಣು ಮತ್ತು ತರಕಾರಿಯ ಒಟ್ಟು ಉತ್ಪಾದನೆಯಲ್ಲಿ ಎರಡನೆಯ ಸ್ಥಾನವನ್ನು ಹೊಂದಿರುತ್ತವೆ.

ಹಣ್ಣುಗಳಲ್ಲಿ ಬಾಳೆಹಣ್ಣು, ಮಾವಿನಹಣ್ಣು ಮೊದಲ ಸ್ಥಾನ ಪಡೆದಿದ್ದರೆ, ಪಪ್ಪಾಯಾ ಎರಡನೆಯ, ಪೈನಾಪಲ್ ನಾಲ್ಕನೆಯ ಹಾಗೂ ಸೇಬುಹಣ್ಣು ಹತ್ತನೆಯ ಸ್ಥಾನವನ್ನು ಪಡೆದಿರುತ್ತವೆ. ತರಕಾರಿಗಳಲ್ಲಿ ಬಟಾಣಿ, ಹೂಕೋಸು ಮೊದಲ ಸ್ಥಾನ ಪಡೆದರೆ, ಬದನೆಕಾಯಿ, ಕ್ಯಾಬೆಜ್ ಹಾಗೂ ಈರುಳ್ಳಿ ಎರಡನೆಯ ಮತ್ತು ಆಲೂಗಡ್ಡೆ ಮೂರನೆಯ ಸ್ಥಾನವನ್ನು ಹೊಂದಿರುತ್ತವೆ.

ನಮ್ಮ ದೇಶದಲ್ಲಿ ಮಹಾರಾಷ್ಟ್ರ ರಾಜ್ಯವು 586.0 ಸಾವಿರ ಹೆಕ್ಟೇರ್ ಭೂಪ್ರದೇಶವನ್ನು ಹೊಂದಿದ್ದು, 8400.8 ಸಾವಿರ ಟನ್ ಉತ್ಪಾದಿಸುತ್ತದೆ. ಎರಡನೆಯದಾಗಿ ಆಂಧ್ರಪ್ರದೇಶವು 609.5 ಸಾವಿರ ಹೆಕ್ಟೇರ್ ಭೂಮಿ ಹೊಂದಿದ್ದು, 7404.8 ಸಾವಿರ ಟನ್ ಉತ್ಪಾದಿಸುತ್ತದೆ. ಕರ್ನಾಟಕವು 254.9 ಸಾವಿರ ಹೆಕ್ಟೇರ್ ಭೂಮಿ ಹೊಂದಿದ್ದು, 4008.8 ಸಾವಿರ ಟನ್ ಉತ್ಪಾದಿಸುತ್ತದೆ.

ನಮ್ಮ ದೇಶದ ಪಶ್ಚಿಮ ಬಂಗಾಳ ರಾಜ್ಯವು 1208.5 ಸಾವಿರ ಹೆಕ್ಟೇರ್ ಭೂಪ್ರದೇಶವನ್ನು ಹೊಂದಿದ್ದು,

17376.5 ಸಾವಿರ ಟನ್ ಉತ್ಪಾದಿಸುತ್ತದೆ. ಎರಡನೆಯದಾಗಿ ಒರಿಸ್ಸಾ 616.8 ಸಾವಿರ ಹೆಕ್ಟೇರ್ ಭೂಮಿ ಹೊಂದಿದ್ದು, 7404.8 ಸಾವಿರ ಟನ್ ಉತ್ಪಾದಿಸುತ್ತದೆ.

ಮಹಾರಾಷ್ಟ್ರವು 405.0 ಸಾವಿರ ಹೆಕ್ಟೇರ್ ಭೂಮಿ ಹೊಂದಿದ್ದು, 4768.9 ಸಾವಿರ ಟನ್ ಉತ್ಪಾದಿಸುತ್ತದೆ. ಕರ್ನಾಟಕವು 163.1 ಸಾವಿರ ಹೆಕ್ಟೇರ್ ಭೂಮಿ ಹೊಂದಿದ್ದು, 2051.8 ಸಾವಿರ ಟನ್ ಉತ್ಪಾದಿಸುತ್ತದೆ.

2012 ರಲ್ಲಿ ಹಣ್ಣುಗಳ ಒಟ್ಟು ಉತ್ಪಾದನೆಯ 52.38 ಬಿಲಿಯನ್ ಟನ್‌ಗಳಷ್ಟು ದಿನ ಬಳಕೆ ಪೂರೈಕೆಗಳನ್ನು ತೀರಿಸಿಕೊಳ್ಳಲು ಉಪಯೋಗಿಸಿದರೆ, 0.12 ಕೆ.ಜಿ ಪ್ರತಿ ದಿನ ಪ್ರತಿ ಮನುಷ್ಯನಿಗೆ ಅವಶ್ಯಕತೆ ಇದೆ. ಇದರಲ್ಲಿ ಶೇ. 20 ರ ಪ್ರಮಾಣದಲ್ಲಿ 16.20 ಪ್ರತಿಶತ ಮಿಲಿಯನ್ ಟನ್‌ಗಳಷ್ಟು ಹಾಳಾಗುತ್ತದೆ.

ಒಟ್ಟಾರೆ ಹಣ್ಣುಗಳ ರಫ್ತಿನಲ್ಲಿ 2012 ನೇ ಇಸ್ವಿಗೆ ಶೇ. 8 ರ ಪ್ರಮಾಣದಲ್ಲಿ ಹೆಚ್ಚಳವಾದರೆ 4.19 ಮಿಲಿಯನ್ ಟನ್ ರಫ್ತು ಮಾಡಲಾಗುತ್ತದೆ ಮತ್ತು ಶೇ. 10 ರ ಪ್ರಮಾಣದಲ್ಲಿ ಹೆಚ್ಚಳವಾದರೆ 5.24 ಪ್ರತಿಶತ ಮಿಲಿಯನ್‌ನಷ್ಟು ಸಂಸ್ಕರಿಸಲಾಗುತ್ತದೆ.

ಇನ್ನು 2012 ಕ್ಕೆ ತರಕಾರಿಗಳ ಒಟ್ಟು ಉಪಯೋಗ 122.23 ಬಿಲಿಯನ್ ಟನ್‌ಗಳಷ್ಟು ದಿನ ಬಳಕೆ ಪೂರೈಕೆಗಳನ್ನು ತೀರಿಸಿಕೊಳ್ಳಲು ಉಪಯೋಗಿಸಿದರೆ, 0.28 ಕೆ.ಜಿ ಪ್ರತಿ ದಿನ ಪ್ರತಿ ಮನುಷ್ಯನಿಗೆ ಆವಶ್ಯಕತೆ ಇದೆ.

ಇದರಲ್ಲಿ ಶೇ. 20 ರ ಪ್ರಮಾಣದಲ್ಲಿ ಹೆಚ್ಚಳವಾದರೆ 37.00 ಪ್ರತಿಶತದಷ್ಟು ಹಾಳಾಗುತ್ತದೆಯಲ್ಲದೇ ಶೇ. 8 ರ ಪ್ರಮಾಣದಲ್ಲಿ 9.78 ಪ್ರತಿಶತ ರಫ್ತು ಮಾಡಲಾಗುತ್ತದೆ.

**ಕೋಷ್ಟಕ–2 : ತರಕಾರಿಗಳಲ್ಲಿ ರಫ್ತಿಗೆ ಬೇಕಾಗುವ ಗುಣಮಟ್ಟಗಳು**

| ಬೆಳೆ | ಬೇಡಿಕೆಯ ವಿಶೇಷತೆ |
|---|---|
| ಬೆಂಡಿ | ಹಸಿರು, ಎಳೆಯ, 6–9 ಸೆಂ.ಮೀ. ಉದ್ದ. |
| ಮೆಣಸಿನಕಾಯಿ | ಹಸಿರು, 6–7 ಸೆಂ.ಮೀ. ಉದ್ದ. |
| ಬೀನ್ಸ್ | ಹಸಿರು, ಎಳೆಯ, 7–10 ಸೆಂ.ಮೀ. ಉದ್ದ. |
| ಹಾಗಲಕಾಯಿ | ಹಸಿರು, 20–25 ಸೆಂ.ಮೀ. ಉದ್ದವಾಗಿದ್ದು ತುಂಬು ಚಿಕ್ಕದಾಗಿರಬೇಕು. |
| ಸೋರೆಕಾಯಿ | ತಿಳಿಹಸಿರಾಗಿದ್ದು, ನೇರವಾಗಿದ್ದು, ದುಂಡಾಕಾರವಾಗಿದ್ದು, 25–30 ಸೆಂ.ಮೀ. ಉದ್ದವಾಗಿರಬೇಕು. |
| ಟೊಮೆಟೊ | ದುಂಡಾಗಿ, ಮಧ್ಯಪೂರ್ವದಲ್ಲಿ ಮಧ್ಯಮ ಗಾತ್ರ, ಯುರೋಪಿನಲ್ಲಿ ಕಡುಗೆಂಪು. |
| ಫ್ರೆಂಚ್ ಬೀನ್ | 10–12 ಸೆಂ.ಮೀ. ಉದ್ದ, ನೇರ, ದುಂಡಾಕಾರದ ಹಸಿರು ಕಾಯಿಗಳನ್ನು ಹೊಂದಿರುವ ಬೀನ್ಸ್‌ಗಳಿಗೆ ಯುರೋಪ್ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಇದೆ. |
| ದೊಡ್ಡ ಈರುಳ್ಳಿ | 4–6 ಸೆಂ.ಮೀ. ತಿಳಿಗೆಂಪಿನಿಂದ ಗಾಢ ಕೆಂಪು, ಹೆಚ್ಚಿನ ಪ್ರಮಾಣದ ಘಾಟು ಹೊಂದಿರುವ ಈರುಳ್ಳಿಗಳು ಗಲ್ಫ್ ಮತ್ತು ದಕ್ಷಿಣಪೂರ್ವ ಏಶಿಯಾ ದೇಶಗಳಲ್ಲಿ ಹೆಚ್ಚಿನ ಬೇಡಿಕೆ ಇದೆ. ಹಳದಿ ಅಥವಾ ಕಂದುಬಣ್ಣ, 7–10 ಸೆಂ.ಮೀ. ದುಂಡಾಕಾರದ ಈರುಳ್ಳಿ ಜಪಾನ್ ಮತ್ತು ಯುರೋಪಿಯನ್ ಮಾರುಕಟ್ಟೆಗಳಲ್ಲಿ ಬೇಡಿಕೆ ಇರುತ್ತದೆ. |
| ಸಣ್ಣ ಈರುಳ್ಳಿ | 2–3 ಸೆಂ.ಮೀ. ಗಾಢ ಕೆಂಪು ಮತ್ತು ದುಂಡಾಕಾರ. |
| ಬೆಳ್ಳುಳ್ಳಿ | ಬಿಳಿ, ದುಂಡಾಕಾರ, 5 ಸೆಂ.ಮೀ. ಮತ್ತು ಅದಕ್ಕಿಂತ ಹೆಚ್ಚಿಗೆ, ಹಾಗೂ 10–15 ಸಂಖ್ಯೆ. ಬಾಂಗ್ಲಾ ಮತ್ತು ಶ್ರೀಲಂಕಾಕ್ಕೆ 4–5 ಸೆಂ.ಮೀ. ಗಾತ್ರದ ಬೆಳ್ಳುಳ್ಳಿ ಬೇಡಿಕೆಯಲ್ಲಿರುತ್ತದೆ. |
| ಬಟಾಟೆ | ಬಿಳಿ, ಅಂಡಾಕಾರ, 4.5–6 ಸೆಂ.ಮೀ. ಇದ್ದು ಬಾಂಗ್ಲಾ ದೇಶಕ್ಕೆ ಕೆಂಪು ಬಣ್ಣದ ಮತ್ತು ಇರಾನ್ ಹಾಗೂ ಇರಾಕ್‌ಗೆ ಹಳದಿ ಬಣ್ಣದ ಬಟಾಟೆ ಬೇಡಿಕೆಯಲ್ಲಿ ಇರುತ್ತದೆ. |

**ರಫ್ತು ಯಾಕೆ ಬೇಕು**

* ಭಾರತದಲ್ಲಿ ಬೆಳೆಯುವಂಥ ಯಾವುದೇ ಒಂದು ಬೆಳೆ ಎಂದರೆ ಮಾವು, ದಾಳಿಂಬೆ, ದ್ರಾಕ್ಷಿ, ಮೆಣಸಿನಕಾಯಿ, ಹೂಗಳು, ಕಾಫಿ, ಟೀ ಇತ್ಯಾದಿ ವಸ್ತುಗಳು ಹೊರದೇಶಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಬೆಳೆಯುತ್ತಾರೆ.
* ಹೊರ ದೇಶದಲ್ಲಿ ಇವುಗಳ ಬೇಡಿಕೆ ಹೆಚ್ಚಿನ ಪ್ರಮಾಣದಲ್ಲಿ ಇರುವುದರಿಂದ ಹೊರ ದೇಶದೊಂದಿಗೆ ಆಮದು ಒಪ್ಪಂದ ಮಾಡಿಕೊಳ್ಳಬೇಕಾಗುತ್ತದೆ.
* ಈಗಾಗಲೇ ಹೇಳಿದ ಬೆಳೆಗಳನ್ನು ಹೊರದೇಶಕ್ಕಿಂತ ನಮ್ಮ ದೇಶದಲ್ಲಿ ಕಡಿಮೆ ವೆಚ್ಚದಲ್ಲಿ ಬೆಳೆಯಲಾಗುತ್ತದೆ.
* ನಮ್ಮ ಕೃಷಿ ಕಾರ್ಮಿಕರ ಕೂಲಿಯು ಕಡಿಮೆ ಇರುವುದಷ್ಟೇ ಅಲ್ಲದೆ ಕಾರ್ಮಿಕರ ಲಭ್ಯತೆಯ ಪ್ರಮಾಣವೂ ಹೆಚ್ಚಿನ ಮಟ್ಟದಲ್ಲಿರುವುದು ಸಹ ಪ್ರಮುಖ ಕಾರಣ.
* ನಮ್ಮ ದೇಶದ ನೈಸರ್ಗಿಕ ಪರಿಸರವೂ ಸಹ ಇಂಥ ಬೆಳೆಗಳಿಗೆ ಸೂಕ್ತವಾದುದಾಗಿದೆ.
* ಒಂದು ವಸ್ತುವಿನ ಅಥವಾ ಉತ್ಪನ್ನದ ಲಭ್ಯತೆ ಹಾಗೂ ಕೊರತೆಯನ್ನು ದೇಶದಿಂದ ದೇಶಕ್ಕೆ ಹೋಗಲಾಡಿಸಲು ರಫ್ತಿನ ಅವಶ್ಯಕತೆ ಇರುತ್ತದೆ.

**ಭಾರತದಿಂದ ತೋಟಗಾರಿಕೆ ಸರಕು ಯಾವ ಯಾವ ದೇಶಕ್ಕೆ ರಫ್ತಾಗುತ್ತದೆ ಮತ್ತು ಅದರ ಪ್ರಮಾಣ**

ಭಾರತದ ಸರಕು ರಫ್ತಾಗುವ ದೇಶಗಳೆಂದರೆ–

* ದಕ್ಷಿಣಪೂರ್ವ ದೇಶಗಳಾದ –ಬಾಂಗ್ಲಾ, ಶ್ರೀಲಂಕಾ, ಇಂಡೋನೇಶಿಯಾ, ಮಲೇಶಿಯಾ,

ಫಿಲಿಪ್ಪೈನ್ಸ್ ದೇಶಗಳಿಗೆ ಪ್ರತಿಶತ ಶೇಕಡಾ 30.

* ಮಧ್ಯಪೂರ್ವ ದೇಶಗಳಾದ – ಯು.ಎ.ಇ., ಸೌದಿ ಅರೇಬಿಯಾ, ಕುವೈತ್ ದೇಶಗಳಿಗೆ ಶೇಕಡಾ 25.
* ಪಶ್ಚಿಮ ಯುರೋಪ್ ದೇಶಗಳಾದ –ಯು.ಕೆ., ನೆದರ್‌ಲೆಂಡ್, ಫ್ರಾನ್ಸ್, ಜರ್ಮನಿ ದೇಶಗಳಿಗೆ ಶೇಕಡಾ 20.
* ಉತ್ತರ ಅಮೆರಿಕಾ ದೇಶಗಳಾದ – ಯು.ಎಸ್.ಎ., ಕೆನಡಾ ದೇಶಗಳಿಗೆ ಶೇಕಡಾ 10 ಮತ್ತು
* ಆಫ್ರಿಕಾ ದೇಶಗಳಾದ – ದಕ್ಷಿಣ ಆಫ್ರಿಕಾ, ಕೀನ್ಯಾ ದೇಶಗಳಿಗೆ ಪ್ರತಿಶತ ಶೇಕಡಾ 10 ರ ಪ್ರಮಾಣದಲ್ಲಿ ರಫ್ತು ವ್ಯವಹಾರವನ್ನು ನಡೆಸಲಾಗುತ್ತಿದೆ.

**ಕರ್ನಾಟಕದಿಂದ ಯಾವ ಯಾವ ದೇಶಗಳಿಗೆ ತೋಟಗಾರಿಕಾ ಹುಟ್ಟುವಳಿಗಳು ರಫ್ತಾಗುತ್ತವೆ**

ಅಮೆರಿಕಾ, ಕೆನಡಾ, ಮೆಕ್ಸಿಕೊ, ಟರ್ಕಿ, ಜರ್ಮನಿ, ಮಾರಿಷಸ್, ಚೈನಾ, ಇಂಡೋನೇಶಿಯಾ, ಸ್ಪೇನ್, ಆಸ್ಟ್ರೇಲಿಯಾ, ಇಟಲಿ, ಶ್ರೀಲಂಕಾ, ರಶಿಯಾ, ಮಲೇಶಿಯಾ, ಇಸ್ರೇಲ್, ಜಪಾನ್, ಯುನೈಟೆಡ್ ಕಿಂಗ್ಡಮ್, ನೆದರ್ಲೆಂಡ್, ಸಿಂಗಾಪೂರ್, ಬೆಲ್ಜಿಯಮ್, ಮಧ್ಯಪೂರ್ವ ರಾಷ್ಟ್ರಗಳು, ನ್ಯೂಜಿಲೆಂಡ್, ಬಾಂಗ್ಲಾದೇಶ, ಫ್ರಾನ್ಸ್.

**ಕರ್ನಾಟಕದಿಂದ ರಫ್ತಾಗುವ ತೋಟಗಾರಿಕಾ ಸರಕುಗಳು ಯಾವವು?**

ಸವತೆಕಾಯಿ, ಉಳ್ಳಾಗಡ್ಡೆ, ಮೆಣಸಿನಕಾಯಿ, ತರಕಾರಿ, ದ್ರಾಕ್ಷಿ, ಲಿಂಬೆ, ಹೂಗಳು, ಕಾಫಿ, ಕರಿಮೆಣಸು, ಬೆಂಗಳೂರು ಗುಲಾಬಿ ಉಳ್ಳಾಗಡ್ಡೆ, ತರಕಾರಿ ಬೀಜಗಳು, ಅಲಂಕಾರಿಕ ಸಸ್ಯಗಳು, ಗೋಡಂಬಿ, ಟೊಮೆಟೊ, ಮಾವು, ದಾಳಿಂಬೆ, ಕಲ್ಲಂಗಡಿ ಇತ್ಯಾದಿ.

**ರಫ್ತಿನ ಪ್ರಮಾಣ ಹೆಚ್ಚಾಗಲು ಕಾರಣಗಳು**

* ಆರೋಗ್ಯದ ಕಾಳಜಿಯು ಗುಣಮಟ್ಟದ ಉತ್ಪಾದನೆಗೆ ಪ್ರೇರೇಪಿಸಿತು.
* ಗುಣಮಟ್ಟ ಪರೀಕ್ಷೆಗೆ ಎಲ್ಲ ತರಹದ ಸೌಕರ್ಯಗಳಿವೆ.
* ಅಂತಾರಾಷ್ಟ್ರೀಯ ನಿರ್ದಿಷ್ಟಮಾನ.
* ಅಗ್‌ಮಾರ್ಕ್ ನಿರ್ದಿಷ್ಟಮಾನ.

**ಕೋಷ್ಟಕ–3 : ತೋಟಗಾರಿಕಾ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುವ ಪ್ರಮುಖ ದೇಶಗಳು**

| ದೇಶ | 2013–14 | |
|---|---|---|
| | ಪ್ರಮಾಣ ಮೆಟ್ರಿಕ್ ಟನ್‌ಗಳಲ್ಲಿ | ಮೌಲ್ಯ ಲಕ್ಷ ರೂ. ಗಳಲ್ಲಿ |
| **ಹಣ್ಣು ಮತ್ತು ತರಕಾರಿ ಬೀಜಗಳು** | | |
| 1 ಪಾಕಿಸ್ತಾನ | 6,421.43 | 6,857.97 |
| 2 ಅಮೆರಿಕ | 173.65 | 4,297.72 |
| 3 ಬಾಂಗ್ಲಾದೇಶ | 4,681.93 | 4,068.10 |
| 4 ನೆದರ್ಲ್ಯಾಂಡ್ | 105.54 | 3,546.13 |
| 5 ಇಟಲಿ | 1,623.18 | 2,893.29 |
| 6 ಇತರ | 4811.02 | 19,390.53 |
| ಒಟ್ಟು | 17,816.75 | 41,053.74 |
| **ಹೂಗಾರಿಕೆ** | | |
| 1 ಅಮೆರಿಕ | 5,158.70 | 8,459.38 |
| 2 ನೆದರ್ಲ್ಯಾಂಡ್ | 1,983.51 | 6,615.28 |
| 3 ಜರ್ಮನಿ | 2,841.16 | 5,928.94 |
| 4 ಇಂಗ್ಲೆಂಡ್ | 2,583.87 | 5,512.57 |
| 5 ಯುಎಇ | 1,026.05 | 1,701.07 |
| 6 ಇತರೆ | 8891.92 | 17373.39 |
| ಒಟ್ಟು | 22,485.21 | 45,590.63 |
| **ತಾಜಾ ಈರುಳ್ಳಿ** | | |
| 1 ಬಾಂಗ್ಲಾದೇಶ | 4,04,884.74 | 88,913.73 |
| 2 ಮಲೇಷಿಯಾ | 2,40,489.60 | 63,934.61 |
| 3 ಶ್ರೀಲಂಕಾ | 2,23,697.42 | 39,248.60 |
| 4 ಯುಎಇ | 1,72,074.19 | 32,939.59 |
| 5 ಇಂಡೋನೇಷ್ಯಾ | 78,726.00 | 24,249.90 |
| 6 ಇತರೆ | 362,626.63 | 67,674.82 |
| ಒಟ್ಟು | 14,82,498.58 | 3,16,961.25 |
| **ಮಾವು** | | |
| 1 ಯುಎಇ | 23,046.65 | 17,231.11 |
| 2 ಇಂಗ್ಲೆಂಡ್ | 3,381.08 | 4,544.99 |
| 3 ಸೌದಿಅರೆಬಿಯಾ | 1,721.91 | 1,218.95 |
| 4 ಕುವೈತ | 4,601.44 | 823.55 |
| 5 ಕತಾರ | 770.08 | 655.08 |
| 6 ಇತರೆ | 7758.85 | 4069.16 |
| **ಒಟ್ಟು** | **41,280.01** | **28,542.84** |

| ದೇಶ | 2013–14 | |
|---|---|---|
| | ಪ್ರಮಾಣ ಮೆಟ್ರಿಕ್ ಟನ್‌ಗಳಲ್ಲಿ | ಮೌಲ್ಯ ಲಕ್ಷ ರೂ. ಗಳಲ್ಲಿ |
| **ದ್ರಾಕ್ಷಿಹಣ್ಣು** | | |
| 1 ನೆದರ್ಲ್ಯಾಂಡ್ | 46,136.91 | 52,705.69 |
| 2 ರಷಿಯಾ | 24,503.00 | 22,663.55 |
| 3 ಇಂಗ್ಲೆಂಡ್ | 17,149.00 | 20,870.33 |
| 4 ಯುಎಇ | 17,212.25 | 12,962.09 |
| 5 ಬಾಂಗ್ಲಾದೇಶ | 31,188.36 | 7,575.89 |
| 6 ಇತರೆ | 56,427.39 | 49,869.85 |
| **ಒಟ್ಟು** | **1,92,616.91** | **1,66,647.40** |
| **ಇತರೆ ತಾಜಾ ಹಣ್ಣುಗಳು** | | |
| 1 ಯುಎಇ | 66,804.54 | 35,861.79 |
| 2 ಬಾಂಗ್ಲಾದೇಶ | 83,273.96 | 18,290.14 |
| 3 ಸೌದಿಅರೆಬಿಯಾ | 18,848.87 | 8,934.55 |
| 4 ನೇಪಾಳ | 28,477.43 | 7,104.52 |
| 5 ನೆದರ್ಲ್ಯಾಂಡ್ | 2,495.57 | 3,081.41 |
| 6 ಇತರೆ | 40,652.08 | 28,886.75 |
| **ಒಟ್ಟು** | **2,40,552.45** | **1,02,159.16** |
| **ಇತರೆ ತಾಜಾ ತರಕಾರಿಗಳು** | | |
| 1 ಪಾಕಿಸ್ತಾನ | 3,88,474.97 | 83,706.63 |
| 2 ಯುಎಇ | 1,01,938.36 | 28,306.84 |
| 3 ಇಂಗ್ಲೆಂಡ್ | 20,907.56 | 18,844.30 |
| 4 ನೇಪಾಳ | 1,87,963.71 | 15,118.16 |
| 5 ಸೌದಿಅರೆಬಿಯಾ | 31,533.56 | 13,676.02 |
| 6 ಇತರೆ | 222,913.11 | 69,680.35 |
| **ಒಟ್ಟು** | **9,53,731.27** | **2,29,332.30** |
| **ಇತರೆ ಸಂಸ್ಕರಿಸಿದ ಹಣ್ಣುಗಳು ಮತ್ತು ತರಕಾರಿಗಳು** | | |
| 1 ಅಮೇರಿಕಾ | 28,055.63 | 31,167.91 |
| 2 ಸೌದಿಅರೆಬಿಯಾ | 41,143.06 | 25,917.82 |
| 3 ಇಂಗ್ಲೆಂಡ್ | 31,799.82 | 25,782.08 |
| 4 ನೆದರ್ಲ್ಯಾಂಡ್ | 31,213.54 | 24,688.63 |
| 5 ಯುಎಇ | 18,846.49 | 15,050.64 |
| 6 ಇತರೆ | 136,326.09 | 104,053.13 |
| **ಒಟ್ಟು** | **2,87,384.63** | **2,26,660.21** |

ಕೃಪೆ : ಅಪೆಡಾ 2013–14

ಇವುಗಳಲ್ಲದೇ ಇನ್ನೊಂದು ಪ್ರಮುಖ ಅಂಶವೇನೆಂದರೆ, ಈ ಪ್ರಕ್ರಿಯೆಯಿಂದ ಬೆಳೆಗಾರರು ಹೆಚ್ಚಿನ ಲಾಭ ಗಳಿಸುವ ನಿಟ್ಟಿನಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಲ್ಲಿ ತೊಡಗುತ್ತಾರೆ. ಈ ಕಾರಣದಿಂದಾಗಿ ರಫ್ತಿನ ಪ್ರಮಾಣ ಹೆಚ್ಚಾಗುತ್ತದೆ ಎಂದು ಹೇಳಬಹುದು.

**ರಫ್ತು ಯೋಗ್ಯ ಹಣ್ಣುಗಳ ಗುಣಲಕ್ಷಣಗಳು**

ರಫ್ತು ಯೋಗ್ಯ ಹಣ್ಣುಗಳ ಗುಣಲಕ್ಷಣಗಳನ್ನು ಹಲವಾರು ರೀತಿಯಲ್ಲಿ ಗುರುತಿಸಬಹುದು. ಅವುಗಳಲ್ಲಿ ಮುಖ್ಯವಾದವುಗಳನ್ನು ಈ ಕೆಳಗಿನಂತಿವೆ. ಮೊದಲನೆಯದಾಗಿ–

**ಹಣ್ಣುಗಳ ಬಣ್ಣ :**

* ಹಣ್ಣು ಮಾಗಿದಾಗ ತಳಿಗನುಗುಣವಾದ ಗಾಢವರ್ಣ ಹೊಂದಿರಬೇಕು.
* ಬಾದಾಮಿಹಳದಿ ವರ್ಣದ ಹಿನ್ನೆಲೆಯಲ್ಲಿ ಕೆಂಪುವರ್ಣ ಸಂಚಯವಾಗಿದ್ದರೆ ಹೆಚ್ಚಿನ ಆದ್ಯತೆ.

**ಆಕಾರ :**

* ತಳಿಗನುಗುಣವಾಗಿ ನಿರ್ದಿಷ್ಟ ಆಕಾರ ಹೊಂದಿರಬೇಕು.
* ಆಕಾರವನ್ನು ತಪ್ಪಿದ ಹಣ್ಣುಗಳಿಗೆ ಬೇಡಿಕೆಯಿಲ್ಲ.

**ಮಾಗುವಿಕೆ(ಪಕ್ವತೆ) ಸ್ಥಿತಿ :**

* ಪೂರ್ಣ ಪ್ರಮಾಣದಲ್ಲಿ ಮಾಗಿದ್ದು, ದೃಢವಾಗಿರಬೇಕು.
* ಸಿಪ್ಪೆ ಮೇಲೆ ನಿರಿಗೆಗಳು(ಸುಕ್ಕು) ಇರಬಾರದು.
* ಪಕ್ವತೆಯ ಮಿತಿ ದಾಟಿರಬಾರದು

**ಹಣ್ಣುಗಳ ನೋಟ :**

* ಹಣ್ಣುಗಳು ಆಕರ್ಷಕವಾಗಿರಬೇಕು.
* ಸಿಪ್ಪೆಗಳ ಮೇಲೆ ಯಾವುದೇ ರೋಗ ರುಜಿನ, ಕೀಟಗಳ ಬಾಧೆಯ ಕಲೆ, ಸೂರ್ಯನ ಉರಿತ, ಸೋನೆಯ ಕಲೆ, ಕೊಳೆತದ ಚಿಹ್ನೆ, ಕಂದು ವರ್ಣದ ಲೆಂಟಿಸೆಲ್‌ಗಳಿಂದ ಮುಕ್ತವಾಗಿರಬೇಕು.

**ರುಚಿ :**

* ಹಣ್ಣುಗಳು ತಳಿಗನುಗುಣವಾಗಿ ನಿರ್ದಿಷ್ಟ ಶ್ರೇಷ್ಠ ರುಚಿ ಹಾಗೂ ಮಧುರ ಸುವಾಸನೆಯನ್ನು ಹೊಂದಿರಬೇಕು.
* ತಿರುಳು ರುಚಿಭರಿತವಾಗಿರಬೇಕು, ನಾರಿನ ಅಂಶ ಇರಬಾರದು.
* ಸ್ಪಾಂಜಿ ಟಿಶ್ಯು, ಹಣ್ಣಿನ ಹುಳಗಳು ಹಾಗೂ ಅವುಗಳ ಮೊಟ್ಟೆಗಳಿಂದ ಮುಕ್ತವಾಗಿರಬೇಕು.
* ಓಟೆ ಕೊರಕದ ಹಾವಳಿಯಿಂದ ಮುಕ್ತವಾಗಿರಬೇಕು.

**ರಾಸಾಯನಿಕ ಅಂಶಗಳ ಮಟ್ಟ :**

* ಹಣ್ಣುಗಳ ಹೊರಮೈ ಯಾವುದೇ ರಾಸಾಯನಿಕ ಸಿಂಪರಣೆಯ ಕಲೆಗಳಿಂದ ಮುಕ್ತವಾಗಿರಬೇಕು.
* ಹಣ್ಣಿನಲ್ಲಿ ನಿರ್ದಿಷ್ಟಪಡಿಸಿದ ಮಟ್ಟಕ್ಕಿಂತ ಕಡಿಮೆ ಪ್ರಮಾಣದಲ್ಲಿ ರಾಸಾಯನಿಕಗಳ ಉಪಸ್ಥಿತಿ ಇರಬೇಕು ಅಥವಾ ರಾಸಾಯನಿಕಗಳಿಂದ ಸಂಪೂರ್ಣ ಮುಕ್ತವಾಗಿರಬೇಕು.
* ಸಾವಯವ ಪದ್ಧತಿಯಿಂದ ಉತ್ಪಾದಿಸಿದ ಮಾವುಗಳಿಗೆ ಅತ್ಯಂತ ಹೆಚ್ಚಿನ ಬೇಡಿಕೆ ಇದೆ.

**ಹಣ್ಣುಗಳನ್ನು ರಫ್ತು ಮಾಡಲು ನಿರ್ದಿಷ್ಟ ಪ್ಯಾಕಿಂಗ್ ಕ್ರಮಗಳು**

**ಪ್ಯಾಕಿಂಗ್ :**

* ರಫ್ತಿಗಾಗಿ ಕಾಯಿಗಳನ್ನು ಪ್ಯಾಕಿಂಗ್ ಮಾಡಲು ಕಾರುಗೇಟೆಡ್ ರಟ್ಟಿನ ಡಬ್ಬಗಳನ್ನು ಶಿಫಾರಸ್ಸು ಮಾಡಲಾಗಿದೆ.
* ಡಬ್ಬದ ಗಾತ್ರ 40 ಸೆಂ.ಮೀ. x 27.5 ಸೆಂ.ಮೀ. x 9 ಸೆಂ.ಮೀ. (ಉದ್ದ x ಅಗಲ x ಎತ್ತರ) ಇದ್ದರೆ ಬಹುಯೋಗ್ಯ. ವಿವಿಧ ತಳಿಗನುಗುಣವಾಗಿ ಈ ಡಬ್ಬದಲ್ಲಿ ಬದಲಾವಣೆಗೆ ಅವಕಾಶವಿದೆ.
* ಈ ಡಬ್ಬದ ಮೇಲೆ ಹಣ್ಣಿನ ಚಿತ್ರ, ಟ್ರೇಡ್‌ಮಾರ್ಕ್, ತಳಿಯ ಹೆಸರು, ಉತ್ಪಾದನೆಯಾದ ಸ್ಥಳ, ದೇಶ ಇತ್ಯಾದಿ ವಿವರಗಳನ್ನೊಳಗೊಂಡಂತೆ ತಳಿಯ ಹೆಸರು, ಸಂಖ್ಯೆ ಅಥವಾ



ತೂಕ ಇವುಗಳನ್ನು ನಮೂದಿಸುವುದು ಅವಶ್ಯ.

* ಅಪೆಡಾ ನಿಯಮಾವಳಿಯಂತೆ 'ಭಾರತ ದೇಶದ ಉತ್ಪಾದನೆ' ಎಂದು ನಮೂದಿಸಬೇಕು.
* ಈ ಡಬ್ಬಗಳಲ್ಲಿ ಕೆಳಭಾಗ, ಮೇಲ್ಭಾಗ ಹಾಗೂ ಎಲ್ಲಾ ಬದಿಗಳಲ್ಲಿ ಗಾಳಿಯಾಡಲು ಯಂತ್ರದಿಂದ ಗುಂಡಾಗಿ ಕೊರೆದ 1.5 ಸೆಂ.ಮೀ. ವ್ಯಾಸದ ರಂಧ್ರಗಳನ್ನು ಮಾಡಬೇಕು.
* ಡಬ್ಬದ ಒಳಗಡೆ, ಹಣ್ಣುಗಳ ಕೆಳಗೆ ತೆಳುವಾದ ಕಾಗದವನ್ನು ಹಣ್ಣುಗಳು ಒಂದಕ್ಕೊಂದು ತಾಗದಂತೆ ಕಂಪಾರ್ಟಮೆಂಟ್ ಮತ್ತು ಹಣ್ಣುಗಳಿಗೆ ಕುಷನ್‌ಸ್ಲೀವ್ ಅಳವಡಿಸಬೇಕಾಗುತ್ತದೆ.
* ಪೇಪರ್ ಶ್ರೇಡ್‌ಗಳನ್ನು ಸಹ ಹಾಕುವುದರ ಮೂಲಕ ಹಣ್ಣುಗಳ ನಡುವಿನ ಘರ್ಷಣೆ ತಪ್ಪಿಸಬಹುದಾಗಿದೆ.

**ಪ್ರೀ ಕೂಲಿಂಗ್ :**

* ಸೀಲ್ ಮಾಡಿದ ರಟ್ಟಿನ ಡಬ್ಬಗಳನ್ನು 13 ಸೆಂಟಿಗ್ರೇಡ್ ಉಷ್ಣಾಂಶವಿರುವ ಮತ್ತು ಶೇ. 85–90 ತೇವಾಂಶ ಭರಿತ ಶೀತಲಗೃಹದಲ್ಲಿ ಪ್ರೀ–ಕೂಲಿಂಗ್‌ಗೆ ಒಳಪಡಿಸಬೇಕಾಗುತ್ತದೆ.
* ಸಾಮಾನ್ಯವಾಗಿ 4 ರಿಂದ 6 ಗಂಟೆ ತಗಲುತ್ತದೆ.
* ತಣ್ಣನೆಯ ಗಾಳಿ ಬಿಡುವುದರ ಮೂಲಕ ಇದನ್ನು ಸಾಧಿಸಲಾಗುತ್ತದೆ.

**ಡಬ್ಬಗಳನ್ನು ಒಟ್ಟುಗೂಡಿಸುವಿಕೆ :**

* ಪ್ರೀ–ಕೂಲಿಂಗ್ ಡಬ್ಬಗಳನ್ನು ಇನ್ನೂ ದೊಡ್ಡದಾದ ಸೂಚಿತ ಅಳತೆಯ

110 ಸೆಂ.ಮೀ. x 80 ಸೆಂ.ಮೀ. x 13 ಸೆಂ.ಮೀ. ಅಳತೆಯ ಕಟ್ಟಿಗೆಯ ಡಬ್ಬಗಳಲ್ಲಿ ಸೇರಿಸಲಾಗುತ್ತದೆ.

* ಇವುಗಳನ್ನು ಕಂಟೈನರ್‌ಗಳಲ್ಲಿ ಜೋಡಿಸಲಾಗುತ್ತದೆ.
* ಕಂಟೈನರ್‌ಗಳಲ್ಲಿ ಉಷ್ಣಾಂಶ 12.5 ಸೆಂಟಿಗ್ರೇಡ್ ಇರುತ್ತದೆ.
* ಪ್ರೀ–ಕೂಲಿಂಗ್ ಮತ್ತು Pallatization ಕ್ರಮಗಳು ಮತ್ತು ಕಂಟೈನರ್‌ಗಳಲ್ಲಿ ಸೇರಿಸುವುದು ಹಣ್ಣುಗಳನ್ನು ಸಮುದ್ರದ (ಹಡಗಿನ) ಮೂಲಕ ರಫ್ತು ಮಾಡುವಲ್ಲಿ ಮಾತ್ರ ಪಾಲಿಸಬೇಕಾಗುತ್ತದೆ.
* ವಿಮಾನಗಳ ಮೂಲಕ ರಫ್ತು ಮಾಡುವುದಿದ್ದಲ್ಲಿ ಪ್ರೀ–ಕೂಲಿಂಗ್‌ಗಳ ಅವಶ್ಯಕತೆ ಇರುವುದಿಲ್ಲ.
* ರಟ್ಟಿನ ಕಾರ್ಡ್‌ಬೋರ್ಡ್ ಡಬ್ಬಗಳನ್ನು ನೇರವಾಗಿ ಸರಕು ಸಾಗಾಣಿಕೆಗಳಲ್ಲಿ ತುಂಬಿ ಸಾಗಾಣಿಕೆ ಮಾಡಲಾಗುತ್ತದೆ.

**ಭಾರತದಿಂದ ಕಡಿಮೆ ಪ್ರಮಾಣದಲ್ಲಿ ರಫ್ತಿಗೆ ಕಾರಣಗಳು**

1) ಭಾರತವು ವಿಶ್ವ ವ್ಯಾಪಾರ ಸಂಸ್ಥೆ (ಡಬ್ಲ್ಯು.ಟಿ.ಓ.) ಯ ಸದಸ್ಯತ್ವವನ್ನು ಹೊಂದಿರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳಬೇಕಾಗುತ್ತದೆ.
2) ರಶಿಯಾ ಇಬ್ಭಾಗವೂ ಸಹ ಇದಕ್ಕೆ ಮೂಲ ಕಾರಣ.
3) ಹೆಚ್ಚಿನ ಪ್ರಮಾಣದಲ್ಲಿ ಪೆಟ್ರೋಲಿಯಂ ಹಾಗೂ ಕಚ್ಚಾ ತೈಲದ ಆಮದನ್ನು ಮಾಡಿಕೊಳ್ಳುತ್ತದೆ. ಇದರ ಪ್ರಮಾಣ ಒಟ್ಟಾರೆ ಆಮದಿನಲ್ಲಿ ಶೇ. 28.78 ರಷ್ಟು ಆಗಿರುತ್ತದೆ. ಇದರ ಬೆಲೆ 61.46 ಬಿಲಿಯನ್ ಅಮೆರಿಕನ್ ಡಾಲರ್.
4) ಗುಣಮಟ್ಟದ ಕೊರತೆ.

**ರಫ್ತು ಮಾಡಬೇಕಾದರೆ ಬರುವ ತೊಂದರೆಗಳು**

ಭಾರತದಂಥ ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿ ಕೃಷಿ ರಫ್ತಿಗೆ ಬಹಳಷ್ಟು ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಮುಖ್ಯವಾಗಿ ಮಾರುಕಟ್ಟೆ ಸೌಲಭ್ಯದ ನಿರ್ಬಂಧ. ಹೆಚ್ಚಿನ



ಅಭಿವೃದ್ಧಿ ಹೊಂದಿದ ದೇಶಗಳು ರಫ್ತಿನ ಪದಾರ್ಥಗಳ ಮೇಲೆ ಹೆಚ್ಚಿನ ಸಂರಕ್ಷಣೆ ಒದಗಿಸುತ್ತಾರೆ. ಅವುಗಳೆಂದರೆ, ಸ್ವಚ್ಛತೆಯ ಕಟ್ಟುನಿಟ್ಟಿನ ನಿರ್ಬಂಧ, ಪ್ಯಾಕಿಂಗ್ ದರ್ಜೆ ಮತ್ತು ಲೇಬಲ್‌ಗಳ ಅವಶ್ಯಕತೆ ಮುಂತಾದವುಗಳು.

* ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಂದ ರಫ್ತಾಗುವ ಮೌಲ್ಯವರ್ಧಿತ ಆಹಾರಗಳ ಮೇಲೆ ಹೆಚ್ಚಿನ ಕೊರತೆ.
* ರಫ್ತು ಸಬ್ಸಿಡಿಯಲ್ಲಿ ಕಡಿತ.
* ಹೊರದೇಶಗಳಲ್ಲಿ ಜೈವಿಕ ತಂತ್ರಜ್ಞಾನದ ಅಭಿವೃದ್ಧಿ ಆಗಿದ್ದರಿಂದ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ರಫ್ತು ಮಾಡಲು ತುಂಬ ತೊಂದರೆ ಆಗುತ್ತಿದೆ.
* ಇಂಥ ಪರಿಸ್ಥಿತಿಯಲ್ಲಿ ಆಧುನಿಕ ತಂತ್ರಜ್ಞಾನದ ಅವಶ್ಯಕತೆ ಇದೆ. ಆದರೆ ಅಧಿಕ ಬಂಡವಾಳದ ಅವಶ್ಯಕತೆ ಇದೆ.
* ಅಸಮರ್ಪಕ ಕೊಯ್ಲೋತ್ತರ ಸೌಕರ್ಯಗಳಿಂದ ಬಹಳಷ್ಟು ಹಣ್ಣುಗಳು ನಾಶವಾಗುತ್ತವೆ.

**ರಫ್ತು ಪ್ರಕ್ರಿಯೆ ಬಲಪಡಿಸಲು ಏನು ಮಾಡಬೇಕು ?**

* ಹೆಚ್ಚಿನ ಕೃಷಿ ಸರಕುಗಳನ್ನು ರಫ್ತು ಮಾಡಬೇಕಾದ ಅವಶ್ಯಕತೆಯನ್ನು ರೈತರಿಗೆ ತಿಳಿಸಿಕೊಡುವುದು.
* ರೈತರು, ಸಂಸ್ಕರಣದಾರರು, ರಫ್ತುದಾರರು ಮತ್ತು ಗ್ರಾಹಕರ ನಡುವೆ ಹೊಂದಾಣಿಕೆ ಇರಬೇಕು.
* ಹಣ್ಣು ಮತ್ತು ತರಕಾರಿ, ಕೋಳಿಸಾಕಾಣಿಕೆ, ಸಮುದ್ರೋತ್ಪನ್ನಗಳು, ಹೂವಿನ ಪದಾರ್ಥಗಳು, ಏಕದಳ ಧಾನ್ಯ ಪದಾರ್ಥಗಳ ರಫ್ತನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡಬೇಕು.
* ರೈತರಿಗೆ ಮಾರುಕಟ್ಟೆ ಮಾಹಿತಿ ಒದಗಿಸುವುದು. ಮಾಹಿತಿ ಮತ್ತು ತಂತ್ರಜ್ಞಾನವನ್ನು ಉಪಗ್ರಹದ ಮೂಲಕ ರೈತರಿಗೆ ತಲುಪಿಸುವುದು, ಈ–ಮೇಲ್, ಇಂಟರ್‌ನೆಟ್, ಈ–ಕಾಮರ್ಸ್‌ಗಳ ಬಳಕೆ.
* ಬಂಡವಾಳದ ಮೇಲೆ ಸಹಾಯಧನ ಮತ್ತು ಬೇರೆ ಸೌಕರ್ಯಗಳನ್ನು ಕೃಷಿ ಆಧಾರಿತ ಉದ್ಯಮಕ್ಕೆ ಒದಗಿಸುವುದು.
* ಮಾರುಕಟ್ಟೆಗೆ ಅನುಕೂಲವಾಗುವಂತೆ ಕೃಷಿಯಲ್ಲಿ ಬದಲಾವಣೆಗಳನ್ನು ಉಂಟುಮಾಡುವುದು.
* ಕೃಷಿಯಲ್ಲಿ ವ್ಯವಹಾರಿಕ ಹಾಗೂ ವೈವಿಧ್ಯತೆಯನ್ನು ಉಂಟುಮಾಡುವುದು.
* ಕೃಷಿ ವ್ಯವಹಾರದ ದೀರ್ಘ ಕಾಲೀನ ವ್ಯವಸ್ಥೆಗೆ ಪರಿಹಾರವನ್ನು ಕಂಡುಕೊಳ್ಳುವುದು.

**(51ನೇ ಪುಟಕ್ಕೆ)**

# ಅಂತಾರಾಷ್ಟ್ರೀಯ ವ್ಯಾಪಾರ

ಡಾ. ಆರ್. ಶಂಕರಪ್ಪ



**ಬಂಡವಾಳ, ಸೂಕ್ತ ಉತ್ಪಾದನಾಂಗಗಳು, ನಿಪುಣತೆ, ತಾಂತ್ರಿಕ ಕುಶಲತೆ ಮತ್ತು ಸಂಘಟನಾ ಶಕ್ತಿಯ ಕೊರತೆಯನ್ನು ಎದುರಿಸುತ್ತಿರುವ ಹಿಂದುಳಿದ ದೇಶಗಳು ತಮಗೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು ಉತ್ಪಾದಿಸುವುದು ಕಷ್ಟಸಾಧ್ಯ. ಹಿಂದುಳಿದ ದೇಶಗಳು ತಮಗೆ ಬೇಕಿರುವ ಬಂಡವಾಳ, ತಂತ್ರಜ್ಞಾನ ಉತ್ಪಾದನಾ ಕುಶಲತೆ, ತರಬೇತಿ, ಯಂತ್ರೋಪಕರಣ ಮುಂತಾದುವನ್ನು ಪಡೆಯಲು ಅಂತಾರಾಷ್ಟ್ರೀಯ ವ್ಯಾಪಾರವು ಸಹಾಯ ಮಾಡುತ್ತದೆ.**

ಪ್ರತಿಯೊಂದು ರಾಷ್ಟ್ರದ ಸರ್ಕಾರಕ್ಕೂ ತನ್ನ ದೇಶದ ಪ್ರಜೆಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದು ಕರ್ತವ್ಯವಾಗಿರುತ್ತದೆ. ಆದರೆ ಯಾವುದೇ ದೇಶವು ತನಗೆ ಬೇಕಿರುವ ಎಲ್ಲಾ ವಸ್ತುಗಳನ್ನು ತಾನೇ ಉತ್ಪಾದಿಸುವುದು ಸಾಧ್ಯವಿಲ್ಲ. ಏಕೆಂದರೆ ಸರಕುಗಳ ಉತ್ಪಾದನೆಗೆ ಅಗತ್ಯವಾದ ಎಲ್ಲಾ ಸಂಪನ್ಮೂಲಗಳು ವಿಶ್ವದ ಎಲ್ಲಾ ದೇಶಗಳಲ್ಲಿ ಸಮಾನವಾಗಿ ಹಂಚಲ್ಪಟ್ಟಿರುವುದಿಲ್ಲ. ಕೆಲವು ಸಂಪನ್ಮೂಲಗಳು ಕೆಲ ದೇಶಗಳಲ್ಲಿ ವಿಪುಲ ಪ್ರಮಾಣದಲ್ಲಿ ಲಭ್ಯವಿದ್ದರೆ, ಇನ್ನು ಕೆಲವು ದೇಶದಲ್ಲಿ ಮಿತ ಪ್ರಮಾಣದಲ್ಲಿ ಲಭ್ಯವಿರುತ್ತದೆ. ಹಾಗಾಗಿ ಎಲ್ಲಾ ದೇಶಗಳು ತಮಗೆ ಅಗತ್ಯವಿರುವ ಸರಕುಗಳನ್ನು ತಾವೇ ಉತ್ಪಾದಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಈ ಕಾರಣದಿಂದಾಗಿ ದೇಶೀಯವಾಗಿ ಉತ್ಪಾದಿಸಲಾಗದ ಸರಕುಗಳನ್ನು ಪಡೆಯಲು ಒಂದು ದೇಶ ಮತ್ತೊಂದು ದೇಶದೊಂದಿಗೆ ವ್ಯಾಪಾರದಲ್ಲಿ ತೊಡಗಬೇಕಾಗುತ್ತದೆ. ಅಷ್ಟೇ ಅಲ್ಲದೆ ಯಾವುದೇ ಸರಕಿನ ಉತ್ಪಾದನೆಯನ್ನು ಕೇವಲ ಸಂಪನ್ಮೂಲದ ಲಭ್ಯತೆ ಅಲ್ಲದೆ, ಬಂಡವಾಳದ ಲಭ್ಯತೆ, ತಂತ್ರಜ್ಞಾನ, ಉತ್ಪಾದನಾ ಕೌಶಲ್ಯ, ಶ್ರಮದ ದಕ್ಷತೆ, ಭೌಗೋಳಿಕ ಅಂಶಗಳು ಮುಂತಾದವುಗಳು ನಿರ್ಧರಿಸುತ್ತವೆ. ಆದ್ದರಿಂದ ಒಂದು ದೇಶ ತಾನು ಎಲ್ಲಾ ರೀತಿಯಲ್ಲೂ ಹೆಚ್ಚು ದಕ್ಷವಾಗಿ ಉತ್ಪಾದಿಸಲು ಸಾಧ್ಯವಿರುವ ಸರಕನ್ನು ಮಾತ್ರ ದೇಶಿಯವಾಗಿ ಉತ್ಪಾದಿಸಿ, ಇನ್ನುಳಿದ ಅವಶ್ಯಕ ಸರಕುಗಳನ್ನು ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುವುದು ಸೂಕ್ತವಾದ ಧೋರಣೆಯಾಗುತ್ತದೆ.

ಹೀಗೆ ವಿವಿಧ ಕಾರಣಗಳಿಂದಾಗಿ ಅಂತಾರಾಷ್ಟ್ರೀಯ ವ್ಯಾಪಾರ ಅನಿವಾರ್ಯವೆನಿಸುತ್ತದೆ. ಉತ್ಪಾದನಾಂಗಗಳ ಲಭ್ಯತೆಯಲ್ಲಿ ಕಂಡು ಬರುವ ಅಸಮತೆಗಳು ಅಂತಾರಾಷ್ಟ್ರೀಯ ವ್ಯಾಪಾರದ ಉಗಮಕ್ಕೆ ಕಾರಣವಾಗುತ್ತವೆ. ಅಂತಾರಾಷ್ಟ್ರೀಯ ವ್ಯಾಪಾರವು ಎಲ್ಲ ದೇಶಗಳ ಆರ್ಥಿಕಾಭಿವೃದ್ಧಿಯಲ್ಲಿ ನಿರ್ಣಾಯಕ ಪಾತ್ರವಹಿಸುತ್ತಿದೆ ಎಂಬುದು ಅನೇಕರ ಅಭಿಪ್ರಾಯವಾಗಿದೆ. ಅಂತಾರಾಷ್ಟ್ರೀಯ ವ್ಯಾಪಾರವು ಬೇರೆ ಬೇರೆ ದೇಶಗಳ ಸಂಪನ್ಮೂಲಗಳ ದಕ್ಷ ಬಳಕೆಗೆ ದಾರಿ ಮಾಡಿ ಕೊಡುವುದರ ಮೂಲಕ ಆರ್ಥಿಕಾಭಿವೃದ್ಧಿ ಸಾಧಿಸಲು ಹಾಗೂ ಜನರ ಯೋಗಕ್ಷೇಮವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಜಗತ್ತಿನ ಮಾನವ ಜನಾಂಗಕ್ಕೆ ಹೆಚ್ಚು ದಕ್ಷ ಪೂರೈಕೆ ಮೂಲದಿಂದ ಸರಕನ್ನು ಪಡೆಯಲು ಅದು ಮಾರ್ಗವಾಗುತ್ತದೆ. ಹೀಗೆ ವಿವಿಧ ದೇಶಗಳು ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ತೊಡಗುವುದರಿಂದ ವಿದೇಶಿ ವ್ಯಾಪಾರ ಗುಣಕದ ಕಾರ್ಯಾಚರಣೆಯ ಮೂಲಕ ಆರ್ಥಿಕಾಭಿವೃದ್ಧಿ ಸಾಧ್ಯವಾಗುತ್ತದೆ. ವಿವಿಧ ಕ್ಷೇತ್ರಗಳಲ್ಲಿ ಕೊರತೆ ಅನುಭವಿಸುತ್ತಿರುವ, ಆಧುನೀಕರಣಕ್ಕೆ ಪ್ರಯತ್ನಿಸುತ್ತಿರುವ ಮತ್ತು ಜನಸಂಖ್ಯೆ ಸಮಸ್ಯೆಯಿಂದ ಸರಕುಗಳ ಬೇಡಿಕೆ ಮತ್ತು ಪೂರೈಕೆ ಅಂಶಗಳ ನಡುವೆ ಅಸಮತೆ ಎದುರಿಸುತ್ತಿರುವ ಹಿಂದುಳಿದ ದೇಶಗಳಿಗೆ ಅಂತಾರಾಷ್ಟ್ರೀಯ ವ್ಯಾಪಾರ ತುಂಬಾ ಪ್ರಯೋಜನಕಾರಿ ಎಂದು ಭಾವಿಸಲಾಗಿದೆ.

### ಅಂತಾರಾಷ್ಟ್ರೀಯ ವ್ಯಾಪಾರ ಮತ್ತು ಹಿಂದುಳಿದ ದೇಶಗಳು

ಅಂತಾರಾಷ್ಟ್ರೀಯ ವ್ಯಾಪಾರದಿಂದ ಹಲವು ಹತ್ತು ಅನುಕೂಲಗಳಿವೆ ಎಂಬುದು ನಿಜವಾದರೂ ಹಿಂದುಳಿದ ದೇಶಗಳ

ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಸರ್ಕಾರಿ ಬಾಲಕರ ಕಾಲೇಜು, ಕೋಲಾರ – 563 101. Email : rshankar95@gmail.com



ಅಭಿವೃದ್ಧಿಯಲ್ಲಿ ಅಂತಾರಾಷ್ಟ್ರೀಯ ವ್ಯಾಪಾರದ ಪಾತ್ರದ ಬಗ್ಗೆ ಹಲವು ಭಿನ್ನಾಭಿಪ್ರಾಯಗಳಿವೆ. ಈ ವಿಚಾರದಲ್ಲಿ ವಿವಿಧ ಅರ್ಥ ಶಾಸ್ತ್ರಜ್ಞರು ಮತ್ತು ವಿದ್ವಾಂಸರು ವಿವಿಧ ರೀತಿಯಲ್ಲಿ ಪ್ರತಿಪಾದಿಸಲು ಪ್ರಯತ್ನಿಸಿದ್ದಾರೆ. ಅಂತಾರಾಷ್ಟ್ರೀಯ ವ್ಯಾಪಾರವು ಹಿಂದುಳಿದ ದೇಶಗಳ ಅಭಿವೃದ್ಧಿಯಲ್ಲಿ ಮಹತ್ತರ ಪಾತ್ರ ವಹಿಸುತ್ತದೆ ಎಂದು ಹೆಬರ್ಲರ್, ಕೇರ್ನ್, ಕ್ರಾಸ್ ಮುಂತಾದ ಚಿಂತಕರು ಅಭಿಪ್ರಾಯಪಟ್ಟರೆ ಅದು ಹಿಂದುಳಿದ ದೇಶಗಳಿಗೆ ಮಾರಕ ಎಂದು ಗುನ್ನಾರ್ ಮಿರ್ಡಾಲ್, ಎಚ್‌ಡಬ್ಲ್ಯು, ಸಿಂಗರ್ ಪ್ರೆಬಿಷ್ ಮುಂತಾದವರು ಹೇಳಿದ್ದಾರೆ.

ಅರ್ಥಶಾಸ್ತ್ರದ ಪಿತಾಮಹ ಅಡಂ ಸ್ಮಿತ್ ಅವರು ಅಂತಾರಾಷ್ಟ್ರೀಯ ವ್ಯಾಪಾರದ ಮಹತ್ವದ ಬಗ್ಗೆ ಅನೇಕ ವಿಚಾರಗಳನ್ನು ಮುಂದಿಟ್ಟಿದ್ದಾರೆ. ಅವರು ಅಂತಾರಾಷ್ಟ್ರೀಯ ವ್ಯಾಪಾರವು ಶ್ರಮವಿಭಜನೆ ಮತ್ತು ಅಂತಾರಾಷ್ಟ್ರೀಯ ವೈಶಿಷ್ಟ್ಯತೆಗೆ ಕಾರಣವಾಗಿ ದೇಶದ ಸಂಪತ್ತು ಮತ್ತು ಉತ್ಪಾದನೆ ಹೆಚ್ಚುವಂತೆ ಮಾಡುತ್ತದೆ ಎಂದಿದ್ದಾರೆ. ಅದೇ ರೀತಿ ಸಂಪ್ರದಾಯ ಪಂಥಕ್ಕೆಸೇರಿದ ಜೆ.ಎಸ್. ಮಿಲ್ ಮತ್ತು ಡೇವಿಡ್ ರಿಕಾರ್ಡೊ ಕೂಡ



ಅಂತಾರಾಷ್ಟ್ರೀಯ ವ್ಯಾಪಾರದಿಂದಾಗುವ ಅನುಕೂಲಗಳನ್ನು ವಿವರಿಸಿದ್ದಾರೆ. ಅಂತಾರಾಷ್ಟ್ರೀಯ ವ್ಯಾಪಾರದಿಂದ ಅನುಕೂಲಗಳು ಲಭ್ಯವಾಗುತ್ತವೆಂಬ ಕಾರಣದಿಂದಾಗಿ ಸಂಪ್ರದಾಯ ಪಂಥದ ಅರ್ಥಶಾಸ್ತ್ರಜ್ಞರು ಮುಕ್ತ ವ್ಯಾಪಾರ ನೀತಿಯನ್ನು ಅನುಸರಿಸಲು ಸಲಹೆ ನೀಡಿದ್ದರು. ಅವರ ಪ್ರಕಾರ ಅಂತಾರಾಷ್ಟ್ರೀಯ ವ್ಯಾಪಾರವು ಯಾವುದೇ ಅಡೆತಡೆಗಳಿಲ್ಲದೆ ಬೆಳವಣಿಗೆಯಾದಾಗ ಅದರಿಂದ ಎಲ್ಲಾ ದೇಶಗಳು ಅನುಕೂಲ ಪಡೆಯುವುದು ಸಾಧ್ಯ.

**ವ್ಯಾಪಾರ: ಒಂದು ಪ್ರಗತಿಯ ಯಂತ್ರ**

ವ್ಯಾಪಾರ ಒಂದು ಪ್ರಗತಿಯ ಯಂತ್ರ ಎಂದು ಡಿ.ಎಲ್. ರಾಬರ್ಟ್‌ಸನ್‌ರವರು ಹೇಳುತ್ತಾರೆ. ಅವರು ಈ ಅಭಿಪ್ರಾಯವನ್ನು ಹತ್ತೊಂಬತ್ತನೆಯ ಶತಮಾನದ ಬೆಳವಣಿಗೆಯ ಹಿನ್ನೆಲೆಯಲ್ಲಿ ಹೇಳಿದರಾದರೂ ಅನೇಕ ಅರ್ಥಶಾಸ್ತ್ರಜ್ಞರ ಪ್ರಕಾರ ಈ ಅಭಿಪ್ರಾಯ 20 ಮತ್ತು 21 ಶತಮಾನಕ್ಕೂ ಸರಿಹೊಂದುತ್ತದೆ.

ಹೆಬರ್ಲರ್ ಅವರು ಅಂತಾರಾಷ್ಟ್ರೀಯ ವ್ಯಾಪಾರವು 19ನೇ ಮತ್ತು 20 ಶತಮಾನಗಳಲ್ಲಿ ಹಿಂದುಳಿದ ದೇಶಗಳ ಅಭಿವೃದ್ಧಿಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸದೆ ಹಾಗೂ ವ್ಯಾಪಾರವನ್ನು ಹೀಗೆ ಸ್ವತಂತ್ರವಾಗಿ ಮುಂದುವರಿಯಲು ಬಿಟ್ಟರೆ ಮುಂದೆಯೂ ಸಹ ಮಹತ್ತರವಾದ ಪಾತ್ರವನ್ನು ವಹಿಸುತ್ತದೆಂದು ಹೇಳುತ್ತಾರೆ. ಅವರು ವ್ಯಾಪಾರ ಕ್ಷೇತ್ರದಲ್ಲಿ ಸರ್ಕಾರ ಅಲ್ಪಸ್ವಲ್ಪ ಪ್ರಮಾಣದಲ್ಲಿ ಹಸ್ತಕ್ಷೇಪ ನಡೆಸುತ್ತಿದ್ದರೆ ಅಭಿವೃದ್ಧಿಯ ವೇಗ ಹೆಚ್ಚುತ್ತದೆಂದು ಅಭಿಪ್ರಾಯ ಪಡುತ್ತಾರೆ. ಅವರು ಇನ್ನೂ ಮುಂದುವರಿದು ದೇಶದ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಸ್ವಲ್ಪ ಪ್ರಮಾಣದಲ್ಲಿ ವ್ಯಾಪಾರ ನಿಯಂತ್ರಣವನ್ನು ಒಪ್ಪಬಹುದು ಎನ್ನುತ್ತಾರೆ.

ಹೆಬರ್ಲರ್ ಅವರು ಹಿಂದುಳಿದ ದೇಶಗಳ ಅಭಿವೃದ್ಧಿಯಲ್ಲಿ ವ್ಯಾಪಾರದ ಪ್ರಾಮುಖ್ಯತೆಯನ್ನು ವಿವರಿಸಲು ಅಂತಾರಾಷ್ಟ್ರೀಯ ವ್ಯಾಪಾರದಿಂದಾಗುವ ಅನುಕೂಲಗಳನ್ನು ಹೀಗೆ ವಿವರಿಸುತ್ತಾರೆ.

1. ಅಂತಾರಾಷ್ಟ್ರೀಯ ವ್ಯಾಪಾರವು ಹಿಂದುಳಿದ ದೇಶಗಳ ವ್ಯಾಪಕ ಆರ್ಥಿಕ ಅಭಿವೃದ್ಧಿಗೆ ಅಗತ್ಯವಾದ ಬಂಡವಾಳ ಸರಕುಗಳು, ಯಂತ್ರೋಪಕರಣ,



ಕಚ್ಚಾ ಸಂಪನ್ಮೂಲಗಳು, ಅರೆ ತಯಾರಿಕಾ ವಸ್ತುಗಳು ಮುಂತಾದ ಸಾಮಗ್ರಿಗಳನ್ನು ಪೂರೈಸುತ್ತದೆ.

2. ಅಂತಾರಾಷ್ಟ್ರೀಯ ವ್ಯಾಪಾರವು ತಾಂತ್ರಿಕಜ್ಞಾನ, ವಿವಿಧ ಮಾಹಿತಿ ಮತ್ತು ಬುದ್ಧಿಕೌಶಲದ ಸಾಗಾಟದ ವಾಹನವಿದ್ದ ಹಾಗೆ ಎಂದು ಹೆಬರ್ಲರ್ ಹೇಳುತ್ತಾರೆ. ವ್ಯಾಪಾರ ಸಂಬಂಧದಿಂದ ತಂತ್ರಜ್ಞಾನ, ನೈಪುಣ್ಯತೆ, ಸಂಘಟನಾ ಚತುರತೆ ಮುಂತಾದವುಗಳನ್ನು ಪಡೆಯುವುದು ಸಾಧ್ಯವಾಗುತ್ತದೆ.

3. ಅಂತಾರಾಷ್ಟ್ರೀಯ ವ್ಯಾಪಾರವು ಬಂಡವಾಳ ಚಲನೆಯ ವಾಹಕವೂ ಹೌದು. ಬಂಡವಾಳದ ಕೊರತೆಯನ್ನು ಅನುಭವಿಸುತ್ತಿರುವ ಹಿಂದುಳಿದ ದೇಶಗಳಿಗೆ ಮುಂದುವರೆದ ದೇಶಗಳಿಂದ ಬಂಡವಾಳವನ್ನು ಸುಲಭವಾಗಿ ವರ್ಗಾಯಿಸಬಹುದು.

4. ಮುಕ್ತ ಅಂತಾರಾಷ್ಟ್ರೀಯ ವ್ಯಾಪಾರವು ಏಕಸ್ವಾಮ್ಯ ನಿಯಂತ್ರಣವನ್ನು ಹೊರದಬ್ಬಿ ಆರೋಗ್ಯಕರ ಪೈಪೋಟಿಯ ಪರಿಸ್ಥಿತಿ ಬೆಳೆಯಲು ಅನುವು ಮಾಡಿಕೊಡುತ್ತದೆ.

ಹೀಗೆ ಅಂತಾರಾಷ್ಟ್ರೀಯ ವ್ಯಾಪಾರವು ಹಿಂದುಳಿದ ದೇಶಗಳಿಗೆ ತುಂಬಾ ಸಹಾಯಕವಾಗಿದ್ದು, ಇದು ಹಿಂದುಳಿದ ದೇಶಗಳ ಆರ್ಥಿಕ ಪ್ರಗತಿಯ ಯಂತ್ರವಾಗಿ ಕಾರ್ಯನಿರ್ವಹಿಸಬಲ್ಲದೆಂದು ಹೆಬರ್ಲರ್ ಅವರು ಅಭಿಪ್ರಾಯ ಪಡುತ್ತಾರೆ.

“ಅಂತಾರಾಷ್ಟ್ರೀಯ ವ್ಯಾಪಾರವು ಅಭಿವೃದ್ಧಿ ಸಾಧಿಸಬೇಕೆಂಬ ಉತ್ಸುಕತೆಯನ್ನು ಬೆಳೆಸುತ್ತದೆ, ಪ್ರಗತಿ ಸಾಧಿಸಲು ಸಾಧ್ಯವಾಗುವ ಜ್ಞಾನ ಮತ್ತು ಅನುಭವವನ್ನು ತಂದುಕೊಡುತ್ತದೆ ಮತ್ತು ಅಭಿವೃದ್ಧಿ

ಸಾಧಿಸುವ ಸಾಧನವಾಗುತ್ತದೆ" ಎಂದು ಎ.ಕೆ. ಕೇರ್ನ್ ಕ್ರಾಸ್ ಹೇಳುತ್ತಾರೆ.

ಬಂಡವಾಳ, ಸೂಕ್ತ ಉತ್ಪಾದನಾಂಗಗಳು, ನಿಪುಣತೆ, ತಾಂತ್ರಿಕ ಕುಶಲತೆ ಮತ್ತು ಸಂಘಟನಾ ಶಕ್ತಿಯ ಕೊರತೆಯನ್ನು ಎದುರಿಸುತ್ತಿರುವ ಹಿಂದುಳಿದ ದೇಶಗಳು ತಮಗೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು ಉತ್ಪಾದಿಸುವುದು ಕಷ್ಟಸಾಧ್ಯ. ಈ ರಾಷ್ಟ್ರಗಳಲ್ಲಿ ಮಿತಿಮೀರಿದ ಜನಸಂಖ್ಯೆಗೆ ಅಗತ್ಯ ಸರಕುಗಳನ್ನು ಒದಗಿಸುವುದು ಅಸಾಧ್ಯವಾಗುತ್ತಿದೆ. ಸರಕುಗಳ ಬೇಡಿಕೆ ಮತ್ತು ಪೂರೈಕೆಗಳ ನಡುವೆ ಅಂತರ ಹೆಚ್ಚುತ್ತಿದೆ. ಆದ್ದರಿಂದ ದೇಶಿಯ ಬೇಡಿಕೆಯನ್ನು ಎದುರಿಸಲು ಮತ್ತು ದೇಶದ ಪ್ರಗತಿ ಮತ್ತು ಆಧುನೀಕರಣಕ್ಕೆ ಅಗತ್ಯವಿರುವ ಸಾಮಗ್ರಿಗಳನ್ನು ಪಡೆಯಲು ಈ ದೇಶಗಳು ಮುಂದುವರಿದ ದೇಶಗಳನ್ನು ಅವಲಂಬಿಸಲೇ ಬೇಕಾಗುತ್ತದೆ. ಹಿಂದುಳಿದ ದೇಶಗಳು ತಮಗೆ ಬೇಕಿರುವ ಬಂಡವಾಳ, ತಂತ್ರಜ್ಞಾನ ಉತ್ಪಾದನಾ ಕುಶಲತೆ, ತರಬೇತಿ, ಯಂತ್ರೋಪಕರಣ ಮುಂತಾದುವನ್ನು ಪಡೆಯಲು ಅಂತಾರಾಷ್ಟ್ರೀಯ ವ್ಯಾಪಾರವು ಸಹಾಯ ಮಾಡುತ್ತದೆ.

ಅಂತಾರಾಷ್ಟ್ರೀಯ ವ್ಯಾಪಾರದಿಂದ ಹಿಂದುಳಿದ ದೇಶಗಳು ಹಲವು ಅನುಕೂಲಗಳನ್ನು ಪಡೆಯುವುದು ಸಾಧ್ಯವಿದೆ ಎಂದು ಹೆಬರ್ಲರ್, ಕೇರ್ನ್‌ಕ್ರಾಸ್ ಮೊದಲಾದ ತಜ್ಞರು ಕಾರಣ ಸಮೇತ ವಿವರಿಸಿದರೂ ಸಹ ಈ ಅಭಿಪ್ರಾಯವನ್ನು ಅನೇಕರು ಒಪ್ಪುವುದಿಲ್ಲ, ದೊಡ್ಡ ಪ್ರಮಾಣದಲ್ಲಿ ಪ್ರಾಥಮಿಕ ಸರಕುಗಳ ವ್ಯಾಪಾರದಲ್ಲಿ ತೊಡಗಿರುವ ಹಿಂದುಳಿದ ದೇಶಗಳಿಗಿಂತ ಕೈಗಾರಿಕಾ ಸರಕುಗಳ ವ್ಯಾಪಾರದಲ್ಲಿ ತೊಡಗಿರುವ ಮುಂದುವರಿದ ದೇಶಗಳಿಗೇ ಅಂತಾರಾಷ್ಟ್ರೀಯ ವ್ಯಾಪಾರದಿಂದ ಹೆಚ್ಚು ಅನುಕೂಲವೆಂದು ಈ ಅರ್ಥಶಾಸ್ತ್ರಜ್ಞರು ವಾದಿಸುತ್ತಾರೆ.



**ಪರಸ್ಪರ ಬೇಡಿಕೆ ಸಿದ್ಧಾಂತ**

ಅಂತಾರಾಷ್ಟ್ರೀಯ ವ್ಯಾಪಾರವು ಪರಸ್ಪರ ಬೇಡಿಕೆ ಸಿದ್ಧಾಂತವಾಗಿದೆ. ಪರಸ್ಪರ ಬೇಡಿಕೆ ಸಿದ್ಧಾಂತವನ್ನು ಜೆ.ಎಸ್. ಮಿಲ್ ಎಂಬ ಆಂಗ್ಲ ಅರ್ಥಶಾಸ್ತ್ರಜ್ಞರು 1848ರಲ್ಲಿ ಪ್ರಸ್ತುತಪಡಿಸಿದರು. ಈ ಸಿದ್ಧಾಂತವನ್ನು "ಅನೂನ್ಯ ಬೇಡಿಕೆ ತತ್ವ" ಎಂದೂ ಕರೆಯಲಾಗಿದೆ. ರಿಕಾರ್ಡೊ ಅವರು ತಮ್ಮ ಸಾಪೇಕ್ಷ ವೆಚ್ಚ ಸಿದ್ಧಾಂತದಲ್ಲಿ ವಿವಿಧ ರಾಷ್ಟ್ರಗಳು ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ತೊಡಗಿ ಉತ್ಪಾದನೆಯಲ್ಲಿ ವೈಶಿಷ್ಟ್ಯ ಸಾಧಿಸುವುದರಿಂದ ಸಂಪನ್ಮೂಲಗಳ ಉಳಿತಾಯವಾದಂತಾಗಿ ವಿದೇಶಿ ವ್ಯಾಪಾರದಿಂದ ಲಾಭಗಳು ಲಭ್ಯವಾಗುತ್ತವೆ ಎಂದು ಪ್ರತಿಪಾದಿಸಿದ್ದಾರೆ. ಆದರೆ ಈ ಲಾಭಗಳು ವ್ಯಾಪಾರದಲ್ಲಿ ನಿರತವಾದ ರಾಷ್ಟ್ರಗಳ ನಡುವೆ ಹೇಗೆ ಹಂಚಲ್ಪಡುತ್ತವೆ ಎಂಬ ವಿಚಾರದ ಬಗ್ಗೆ ರಿಕಾರ್ಡೊ ಸಿದ್ಧಾಂತ ಬೆಳಕು ಚೆಲ್ಲುವುದಿಲ್ಲ. ಜೆ.ಎಸ್.ಮಿಲ್ ಅವರು ತಮ್ಮ ಪರಸ್ಪರ ಬೇಡಿಕೆ ಸಿದ್ಧಾಂತದಲ್ಲಿ ವ್ಯಾಪಾರದ ಲಾಭಗಳು ವಿವಿಧ ರಾಷ್ಟ್ರಗಳ ನಡುವೆ ಹಂಚಿಕೆಯಾಗುವ ವಿಚಾರವನ್ನು ಪರಿಗಣಿಸುವುದರ ಮುಖೇನ ರಿಕಾರ್ಡೊ ಸಿದ್ಧಾಂತದ ದೋಷವನ್ನು ನಿವಾರಿಸಲು ಯತ್ನಿಸಿದ್ದಾರೆ.

ಮಿಲ್ ಅವರ ಪ್ರಕಾರ ಅಂತಾರಾಷ್ಟ್ರೀಯ ವ್ಯಾಪಾರದಲ್ಲಿನ ಪರಸ್ಪರ ಬೇಡಿಕೆಯು ವ್ಯಾಪಾರ ಕರಾರನ್ನು ನಿರ್ಧರಿಸುತ್ತದೆ ಹಾಗೂ ವ್ಯಾಪಾರ ಕರಾರು ವ್ಯಾಪಾರದಲ್ಲಿ ನಿರತವಾದ ಪ್ರತಿಯೊಂದು ದೇಶದ ಸಾಪೇಕ್ಷ ಪಾಲನ್ನು ನಿರ್ಧರಿಸುತ್ತದೆ. ಮಿಲ್ ಅವರು ಸಾಟಿ ವ್ಯಾಪಾರದ ಕರಾರುಗಳಿಗೆ ಒತ್ತು ನೀಡಿದ್ದು, ಅವರ ಪ್ರಕಾರ ಸಾಟಿ ವ್ಯಾಪಾರದ ಕರಾರು ಎಂದರೆ ಒಂದು ನಿರ್ದಿಷ್ಟ ಮೊತ್ತದ ರಫ್ತುಗಳಿಗೆ ಎಷ್ಟು ಪ್ರಮಾಣದ ಆಮದುಗಳನ್ನು ಪಡೆಯಲಾಗುತ್ತದೆ ಎಂಬುದರ ಅನುಪಾತವಾಗಿದೆ. ಸರಳವಾಗಿ, ಸಾಟಿ ವ್ಯಾಪಾರದ ಕರಾರು ಎಂದರೆ ರಫ್ತುಗಳ ಪ್ರಮಾಣ ಮತ್ತು ಆಮದುಗಳ ಪ್ರಮಾಣಗಳ ನಡುವಿನ ಅನುಪಾತವಾಗಿದೆ.. ಮಿಲ್ ಅಭಿಪ್ರಾಯದಲ್ಲಿ ನೈಜ ಸಾಟಿ ವ್ಯಾಪಾರದ ಕರಾರುಗಳು ಕೇವಲ ವೆಚ್ಚದ ಅಂಶಗಳಲ್ಲದೆ ಮೂಲಭೂತವಾಗಿ ಬೇಡಿಕೆಯ ಪರಿಸ್ಥಿತಿಗಳನ್ನೂ ಅವಲಂಬಿಸಿರುತ್ತದೆ. ಎರಡು ರಾಷ್ಟ್ರಗಳ ನಡುವೆ ಸರಕುಗಳನ್ನು




ವಿನಿಮಯಿಸಲಾಗುವ ಪರಸ್ಪರ ಬೇಡಿಕೆಯನ್ನು ಅವಲಂಬಿಸಿರುತ್ತದೆ ಎಂದು ಮಿಲ್ ಅವರು ವಾದಿಸಿದ್ದಾರೆ.

**ಅರ್ಥ ವಿವರಣೆ**

ಪರಸ್ಪರ ಬೇಡಿಕೆ ಎಂದರೆ ವ್ಯಾಪಾರದಲ್ಲಿ ನಿರತವಾದ ಎರಡು ರಾಷ್ಟ್ರಗಳ ಸ್ವಂತ ವಸ್ತುವಿನ ರೂಪದಲ್ಲಿನ ಪರಸ್ಪರರ ವಸ್ತುಗಳ ಸಾಪೇಕ್ಷ ಸಾಮರ್ಥ್ಯ ಮತ್ತು ಬೇಡಿಕೆಯ ಸ್ಥಿತಿಸ್ಥಾಪಕವಾಗಿದೆ. ಅಂದರೆ ಪರಸ್ಪರ ಬೇಡಿಕೆಯು ಈ ಎರಡು ರಾಷ್ಟ್ರಗಳ ಪರಸ್ಪರ ವಸ್ತುಗಳ ಬೇಡಿಕೆಯ ಸ್ಥಿತಿಸ್ಥಾಪಕತ್ವ ಮತ್ತು ಸಾಪೇಕ್ಷ ಸಾಮರ್ಥ್ಯವನ್ನು ಪ್ರತಿನಿಧಿಸುತ್ತದೆ. ಪ್ರತಿಯೊಂದು ರಾಷ್ಟ್ರದ ರಫ್ತು ಮೌಲ್ಯ ಮತ್ತು ಆಮದು ಮೌಲ್ಯಗಳು ಸಮತೋಲನದಲ್ಲಿ ಇರುವಂಥಹ ಬಿಂದುವಿನಲ್ಲಿ ವಿನಿಮಯದ ಸ್ಥಿರ ಅನುಪಾತವು ನಿರ್ಧಾರವಾಗುತ್ತದೆ.

ವಿದೇಶಿ ವ್ಯಾಪಾರದಿಂದ ಒಂದು ರಾಷ್ಟ್ರಕ್ಕೆ ಲಭ್ಯವಾಗುವ ಒಟ್ಟು ಲಾಭ ಅಥವಾ ಪ್ರಯೋಜನಗಳಲ್ಲಿನ ಸಾಪೇಕ್ಷ ಪಾಲನ್ನು ವ್ಯಾಪಾರದ ಕರಾರು ನಿರ್ಧರಿಸುತ್ತದೆ. ಈ ವ್ಯಾಪಾರದ ಕರಾರು ಒಂದು ರಾಷ್ಟ್ರಕ್ಕೆ ಅನುಕೂಲವಾಗಿರುವುದು ಅಥವಾ ಅನಾನುಕೂಲವಾಗಿರುವುದು ಆ ರಾಷ್ಟ್ರದ ಬೇಡಿಕೆಯ ಸ್ಥಿತಿಸ್ಥಾಪಕತ್ವದ ಸಾಪೇಕ್ಷ ಸ್ಥಿತಿಯನ್ನು ಅವಲಂಬಿಸಿರುತ್ತದೆ. ಯಾವುದೇ ರಾಷ್ಟ್ರದ ಆಮದು ಬೇಡಿಕೆ ಅಸ್ಥಿತಿಸ್ಥಾಪಕತ್ವದಿಂದ ಕೂಡಿದ್ದಾಗ ಅದು ಒಂದು ನಿರ್ದಿಷ್ಟ ಪ್ರಮಾಣದ ಆಮದುಗಳಿಗೆ ಅಧಿಕ ಪ್ರಮಾಣದ ಸರಕುಗಳನ್ನು (ರಫ್ತು) ನೀಡಲು ತಯಾರಿರುತ್ತದೆ. ಆಗ ಆ ರಾಷ್ಟ್ರಕ್ಕೆ ವ್ಯಾಪಾರದ ಕರಾರು ಅನಾನುಕೂಲವಾಗಿರುತ್ತದೆ ಹಾಗೂ ವ್ಯಾಪಾರದಿಂದ ಲಭ್ಯವಾಗುವ ಲಾಭವೂ ಕಡಿಮೆಯಾಗುತ್ತದೆ. ಅದೇ ರೀತಿ ಯಾವುದೇ ರಾಷ್ಟ್ರದ ಆಮದು ಬೇಡಿಕೆ ಸಾಪೇಕ್ಷ ಸ್ಥಿತಿಸ್ಥಾಪಕತ್ವದಿಂದ ಕೂಡಿದ್ದಾಗ ಅದು ಒಂದು ನಿರ್ದಿಷ್ಟ ಪ್ರಮಾಣದ



ಆಮದುಗಳನ್ನು ಪಡೆಯಲು ಕಡಿಮೆ ಪ್ರಮಾಣದ ವಸ್ತುಗಳನ್ನು (ರಫ್ತು) ನೀಡಲು ತಯಾರಿರುತ್ತದೆ. ಆಗ ಆ ರಾಷ್ಟ್ರಕ್ಕೆ ವ್ಯಾಪಾರದ ಕರಾರು ಅನುಕೂಲಕರವಾಗಿರುತ್ತದೆ ಹಾಗೂ ವ್ಯಾಪಾರದಿಂದ ಅಧಿಕ ಲಾಭ ಲಭ್ಯವಾಗುತ್ತದೆ. ಸಂಕ್ಷಿಪ್ತವಾಗಿ ಯಾವುದೇ ರಾಷ್ಟ್ರ ತನ್ನ ವ್ಯಾಪಾರದ ಕರಾರುಗಳನ್ನು ಇನ್ನೊಂದು ರಾಷ್ಟ್ರದ ಸ್ವದೇಶಿ ವೆಚ್ಚ ಅನುಪಾತದತ್ತ ತಳ್ಳಿದಾಗ ಅದರ ಸ್ವಂತ ಲಾಭಗಳು ಹೆಚ್ಚುತ್ತದೆ.

### ವ್ಯಾಪಾರದ ಕರಾರಿನ ಅರ್ಥ ವಿವರಣೆ

ದೇಶವೊಂದರ ಸರಕುಗಳು ಇನ್ನೊಂದು ದೇಶದ ಸರಕುಗಳೊಂದಿಗೆ ಯಾವ ದರದಲ್ಲಿ ವಿನಿಮಯಿಸಲ್ಪಡುತ್ತವೆ ಎಂಬುದನ್ನು ತಿಳಿಸುವುದು ವ್ಯಾಪಾರದ ಕರಾರಾಗಿದೆ. ಅಂದರೆ ಒಂದು ದೇಶದ ರಫ್ತು ಸರಕುಗಳು ಆ ದೇಶದ ಆಮದು ಸರಕುಗಳೊಂದಿಗೆ ಯಾವ ದರದಲ್ಲಿ ವಿನಿಮಯವಾಗುತ್ತವೆ ಎಂಬುದನ್ನು ತಿಳಿಯಪಡಿಸುವುದು ವ್ಯಾಪಾರದ ಕರಾರು ಎಂಬುದಾಗಿರುತ್ತದೆ.

ವ್ಯಾಪಾರದ ಕರಾರುಗಳು ಆಮದು ಮತ್ತು ರಫ್ತು ಸರಕುಗಳ ನಡುವಣ ಸಂಬಂಧವನ್ನು ಸೂಚಿಸುತ್ತವೆಯಾದ್ದರಿಂದ ಇದು ಒಂದು ವ್ಯಾಪಾರದ ಸೂತ್ರವಾಗಿದೆ.



ಆದ್ದರಿಂದ, ಒಂದು ದೇಶದ ರಫ್ತು ಮಾಡಲಾಗುವ ಸರಕುಗಳು ಮತ್ತು ಆಮದು ಮಾಡಿಕೊಳ್ಳಲಾಗುವ ಸರಕುಗಳ ನಡುವಣ ಅನುಪಾತವನ್ನು ವ್ಯಾಪಾರದ ಕರಾರು ಎನ್ನಲಾಗುತ್ತದೆ. ಸಂಕ್ಷಿಪ್ತವಾಗಿ ವ್ಯಾಪಾರದ ಕರಾರು ಎಂದರೆ ರಫ್ತು ಮತ್ತು ಆಮದು ಸರಕುಗಳ ನಡುವಿನ ವಿನಿಮಯ ಅನುಪಾತವಾಗಿದೆ.

ವ್ಯಾಪಾರದ ಕರಾರುಗಳು ಅಂತಾರಾಷ್ಟ್ರೀಯ ವ್ಯಾಪಾರ ಕ್ಷೇತ್ರಕ್ಕೆ ಪ್ರವೇಶಿಸುವ ಸರಕುಗಳ ಬೆಲೆಗಳನ್ನು ಅವಲಂಬಿಸಿರುತ್ತವೆ.

ಆದ್ದರಿಂದ, ರಫ್ತು ಸರಕುಗಳ ಮೌಲ್ಯವು ಆ ದೇಶ ಮಾಡಿಕೊಂಡ ಆಮದು ಸರಕುಗಳ ಮೌಲ್ಯಕ್ಕಿಂತಲೂ ಅಧಿಕವಿದ್ದರೆ ಆ ದೇಶಕ್ಕೆ ವ್ಯಾಪಾರದ ಕರಾರುಗಳು ಅನುಕೂಲಕರ ವಾಗಿವೆಯೆಂತಲೂ, ಪ್ರತಿಯಾಗಿ ಈ ದೇಶದ ರಫ್ತು ಸರಕುಗಳ ಮೌಲ್ಯ ಮತ್ತು ಬೆಲೆಗಳು ಆಮದು ಸರಕುಗಳ ಮೌಲ್ಯಕ್ಕಿಂತ ಕಡಿಮೆಯಿದ್ದರೆ ವ್ಯಾಪಾರದ ಕರಾರುಗಳು ಈ ದೇಶಕ್ಕೆ ಅನಾನುಕೂಲವಾಗಿವೆ ಎಂತಲೂ ತೀರ್ಮಾನಿಸಲಾಗುತ್ತದೆ.

ವ್ಯಾಪಾರದ ಕರಾರುಗಳನ್ನು ಅಂತಾರಾಷ್ಟ್ರೀಯ ವ್ಯಾಪಾರದಿಂದ ಒಂದು ದೇಶ ಪ್ರಯೋಜನ ಪಡೆಯುತ್ತಿದೆಯೇ ಇಲ್ಲವೇ ಎಂಬುದನ್ನು ಅಂದಾಜು ಮಾಡಲು ಬಳಸಲಾಗುತ್ತದೆ. ವ್ಯಾಪಾರದ ಕರಾರುಗಳು ಒಂದು ದೇಶಕ್ಕೆ ಅನುಕೂಲವಾಗಿದ್ದರೆ ವ್ಯಾಪಾರದಿಂದ ಆ ದೇಶಕ್ಕೆ ಪ್ರಯೋಜನ ಅಥವಾ ಲಾಭವಾಗಿದೆಯೆಂತಲೂ, ಮತ್ತು ಕರಾರುಗಳು ಅನಾನುಕೂಲಕರವಾಗಿದ್ದರೆ ಆ ದೇಶಕ್ಕೆ ಅಂತಾರಾಷ್ಟ್ರೀಯ ವ್ಯಾಪಾರ ಸಂಬಂಧದಿಂದ ಹೆಚ್ಚಿನದೇನೂ ಪ್ರಯೋಜನವಾಗುತ್ತಿಲ್ಲ, ಪ್ರತಿಯಾಗಿ ಅದು ನಷ್ಟ ಅನುಭವಿಸುತ್ತಿದೆಯೆಂದು ತಿಳಿಯಬೇಕಾಗುತ್ತದೆ. ಒಟ್ಟಿನಲ್ಲಿ ವ್ಯಾಪಾರದ ಕರಾರುಗಳು ತುಂಬಾ ಮಹತ್ವ ಪಡೆದಿರುತ್ತವೆ.

### ವ್ಯಾಪಾರ ಕರಾರುಗಳ ನಿರ್ಧಾರ

ವ್ಯಾಪಾರದ ಕರಾರುಗಳೆಂಬ ಪರಿಕಲ್ಪನೆಯನ್ನು ಮೊಟ್ಟ ಮೊದಲ ಬಾರಿಗೆ ಪರಿಚಯಿಸಿದವರು ಡಾ. ಆಲ್‌ಫ್ರೆಡ್ ಮಾರ್ಷಲ್, ನಂತರ ಈ ಪರಿಕಲ್ಪನೆಯನ್ನು ಅನೇಕ ಹೆಸರಾಂತ ಅರ್ಥಶಾಸ್ತ್ರಜ್ಞರಾದ




ಟಾಸಿಗ್, ಎ.ಸಿ.ಪಿಗೂ ಅಭಿವೃದ್ಧಿ ಪಡಿಸಲು ಪ್ರಯತ್ನಿಸಿದರು

ವ್ಯಾಪಾರದ ಕರಾರುಗಳ ಮೌಲ್ಯಗಳು ಪರಸ್ಪರ ಬೇಡಿಕೆಯ ಸಾಂದ್ರತೆ ಮತ್ತು ಅಂತಾರಾಷ್ಟ್ರೀಯ ಬೆಲೆಗಳ ಮಟ್ಟದಿಂದ ನಿರ್ಧರಿಸಲ್ಪಡುತ್ತವೆ.

### ವ್ಯಾಪಾರದ ಕರಾರಿನ ವಿವಿಧ ಪರಿಕಲ್ಪನೆಗಳು

ವ್ಯಾಪಾರದ ಕರಾರುಗಳ ವಿವಿಧ ಪರಿಕಲ್ಪನೆಗಳನ್ನು ಪರಿಗಣಿಸಲು ಅರ್ಥಶಾಸ್ತ್ರಜ್ಞರು ಪ್ರಯತ್ನಿಸಿದ್ದಾರೆ.

ಮುಖ್ಯವಾಗಿ ಚೆರಾಲ್ಡ್ ಎಂ. ಮೈಯರ್ ಎಂಬ ಅರ್ಥಶಾಸ್ತ್ರಜ್ಞ ವ್ಯಾಪಾರದ ಕರಾರುಗಳನ್ನು ಮೂರು ಮುಖ್ಯ ಗುಂಪುಗಳಾಗಿ ವಿಂಗಡಿಸಿದ್ದಾರೆ. ಅವುಗಳೆಂದರೆ: ಸರಕುಗಳ ಅಂತಾರಾಷ್ಟ್ರೀಯ ವಿನಿಮಯದ ಅನುಪಾತಕ್ಕೆ ಸಂಬಂಧಿಸಿದಂತೆ: 1) ನಿವ್ವಳ ಸಾಟಿ ವ್ಯಾಪಾರದ ಕರಾರುಗಳು 2) ಒಟ್ಟು ಸಾಟಿ ವ್ಯಾಪಾರದ ಕರಾರುಗಳು ಮತ್ತು 3) ಆದಾಯ ವ್ಯಾಪಾರದ ಕರಾರುಗಳು.

ಉತ್ಪಾದಕರ ಸಂಪನ್ಮೂಲಗಳ ಪರಸ್ಪರ ಬದಲಿಕೆಯ ವಿಚಾರಕ್ಕೆ ಸಂಬಂಧಿಸಿದಂತೆ: 1) ಏಕಘಟಕ ವ್ಯಾಪಾರದ ಕರಾರುಗಳು, 2) ದ್ವಿಘಟಕ ವ್ಯಾಪಾರದ ಕರಾರುಗಳು ಹಾಗೂ ತುಷ್ಟಿಗುಣ ವಿಶ್ಲೇಷಣೆಯ ಆಧಾರದ ಮೇಲೆ ವ್ಯಾಪಾರದ ಪ್ರಯೋಜನಗಳನ್ನು ತಿಳಿಯಪಡಿಸುವ 1) ನೈಜವೆಚ್ಚದ ವ್ಯಾಪಾರದ ಕರಾರುಗಳು ಮತ್ತು 2) ತುಷ್ಟಿಗುಣ ವ್ಯಾಪಾರದ ಕರಾರುಗಳು.

ವ್ಯಾಪಾರದ ಕರಾರಿನ ವಿವಿಧ ಪರಿಕಲ್ಪನೆಗಳನ್ನು ಕೂಲಂಕಷವಾಗಿ ಚರ್ಚಿಸಿದರೆ ಅವುಗಳ ಸಾಪೇಕ್ಷ ಉಪಯುಕ್ತತೆ ತಿಳಿಯುತ್ತದೆ. ❑

# ಸ್ವಚ್ಛತಾ ಆಂದೋಲನ

ಹೆಚ್. ಶ್ರೀನಿವಾಸ



ಬಳ್ಳಾರಿ ಜಿಲ್ಲೆಯಲ್ಲಿ ನೈರ್ಮಲ್ಯದ ಬಗ್ಗೆ ಸಾರ್ವಜನಿಕರಿಗೆ ಬೀದಿ ನಾಟಕ, ಚಲನ ಚಿತ್ರ ಪ್ರದರ್ಶನ ಕರ ಪತ್ರ, ಪೋಸ್ಟರ್, ಬ್ಯಾನರ್ ಅಳವಡಿಕೆ ಸೇರಿದಂತೆ ವಿವಿಧ ಬಹು ಮಾಧ್ಯಮ ಪ್ರಚಾರಾಂದೋಲನದ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ. ಜಾಗೃತ ಜಾಥಾ ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಹಾಗೂ ಪೋಷಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.

ಬಳ್ಳಾರಿ ಜಿಲ್ಲೆ ಸಾಮಾಜಿಕ, ಶೈಕ್ಷಣಿಕ, ಮೂಲಭೂತಸೌಕರ್ಯಗಳ ಅಸಮತೋಲನದಿಂದಾಗಿ ಡಾ.ನಂಜುಂಡಪ್ಪ ವರದಿಯನ್ವಯ ಹಿಂದುಳಿದ ಪ್ರದೇಶಗಳ ಪಟ್ಟಿಯಲ್ಲಿ ಸೇರ್ಪಡೆಯಾಗಿದೆ.

ಜಿಲ್ಲೆ ಶೈಕ್ಷಣಿಕವಾಗಿ ಹಿಂದುಳಿದಿರುವುದರಿಂದ ಸಾರ್ವಜನಿಕರ ಜೀವನ ಮಟ್ಟವೂ ಹಿಂದುಳಿದಿದೆ. ಸ್ವಚ್ಛತೆ, ನೈರ್ಮಲ್ಯ ವಿಷಯದಲ್ಲೂ ಭಿನ್ನವಾಗಿಲ್ಲ. ಜಿಲ್ಲೆಯಲ್ಲಿ ಬಯಲು ಮಲಮೂತ್ರ ವಿಸರ್ಜನೆ ಸರ್ವೇ ಸಾಮಾನ್ಯವಾಗಿತ್ತು. ಇತ್ತೀಚೆಗೆ ಸರ್ಕಾರದ ಪುರಸ್ಕೃತ ಯೋಜನೆಗಳಾದ ನಿರ್ಮಲ ಭಾರತ ಅಭಿಯಾನ, ಸಂಪೂರ್ಣ ಸ್ವಚ್ಛತಾ ಆಂದೋಲನ ಯೋಜನೆ ಫಲವಾಗಿ ಚಿತ್ರಣ ಬದಲಾಗುತ್ತಿದೆ. ಇದರಿಂದಾಗಿ ವೈಯಕ್ತಿಕ ಶೌಚಾಲಯ ಗಣನೀಯವಾಗಿ ಪ್ರಗತಿಯತ್ತ ಸಾಗಿದೆ. ಬಳ್ಳಾರಿ ಜಿಲ್ಲಾ ಪಂಚಾಯಿತಿಯು ಈ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಿರುವುದರಿಂದ ಅನೇಕ ಪ್ರಶಸ್ತಿಗಳಿಗೂ ಜಿಲ್ಲೆ ಭಾಜನವಾಗಿದೆ.

ಹೊಸಪೇಟೆ ತಾಲೂಕಿನ ಢಾಣಾಪುರ ಗ್ರಾಮಕ್ಕೆ ವಿಭಾಗ ಮಟ್ಟದ ಸ್ವರ್ಣ ನೈರ್ಮಲ್ಯ ಪ್ರಶಸ್ತಿಯಲ್ಲಿ (2011–12ನೇ ವರ್ಷ) ದ್ವಿತೀಯ ಸ್ಥಾನಕ್ಕೆ ಆಯ್ಕೆಯಾಗಿದೆ. ಹರಿಬೊಮ್ಮನಹಳ್ಳಿ ತಾಲೂಕಿನ ತಮ್ರಳ್ಳಿ ಗ್ರಾಮವು ವಿಭಾಗ ಮಟ್ಟದ ಸ್ವರ್ಣ ನೈರ್ಮಲ್ಯ ಪ್ರಶಸ್ತಿ (2010–11 ನೇ ವರ್ಷ) ಪ್ರಥಮ ಸ್ಥಾನಕ್ಕೆ ಆಯ್ಕೆಯಾಗಿದೆ. ಸಂಡೂರು ತಾಲೂಕಿನ ಬುಜಂಗ ನಗರವು ನಿರ್ಮಲ ಗ್ರಾಮ ಪುರಸ್ಕಾರ ಕೇಂದ್ರ ಪುರಸ್ಕೃತ ಪ್ರಶಸ್ತಿಗೆ– 2011 ಆಯ್ಕೆಯಾಗಿದೆ. ಈ ಗ್ರಾಮಗಳು ಎಲ್ಲಾ ಮನೆಗಳಿಗೂ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸಿಕೊಳ್ಳುವ ಮೂಲಕ ಮಾದರಿ ಗ್ರಾಮಗಳಾಗಿದೆ. ಈ ಯೋಜನೆಯ ಮೂಲಕ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸಿಕೊಂಡ ಎಲ್ಲಾ ಫಲಾನುಭವಿಗೆ ಜಿಲ್ಲಾ ಪಂಚಾಯಿತಿಯು ಈ ಯೋಜನೆಯಡಿ ಆರ್ಥಿಕ ನೆರವನ್ನು ನೀಡಿದೆ. ಶಾಲೆ ಹಾಗೂ ಅಂಗನವಾಡಿ ಕೇಂದ್ರಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಲಾಗಿದೆ.

ಪ್ರಸ್ತುತವಾಗಿ ಸಂಡೂರು ತಾಲೂಕಿನ ತೋರಣಗಲ್ ಗ್ರಾಮ ಪಂಚಾಯಿತಿಯ ಸುಲ್ತಾನಪುರ ಹಾಗೂ ಕುರೇಕುಪ್ಪ ಗ್ರಾಮ ಪಂಚಾಯಿತಿಯ ಕುರೇಕುಪ್ಪ ಗ್ರಾಮದಲ್ಲಿ ಶೇ. 100 ರಷ್ಟು ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಸುಲ್ತಾನಪುರ ಗ್ರಾಮದಲ್ಲಿ 231 ಮನೆಗಳು ಹಾಗೂ ಕುರುಕುಪ್ಪ ಗ್ರಾಮದಲ್ಲಿ 1644 ಮನೆಗಳಿದ್ದು ಈ ಎಲ್ಲಾ ಮನೆಗಳ ಮುಖ್ಯಸ್ಥರು ಶೌಚಾಲಯನ್ನು ನಿರ್ಮಿಸಿಕೊಂಡಿದ್ದಾರೆ. ಈ ಗ್ರಾಮದಲ್ಲಿ ಶಾಲೆ ಹಾಗೂ ಅಂಗನ ವಾಡಿ ಕೇಂದ್ರಗಳಿಗೆ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಪ್ರತಿ ತಾಲೂಕಿಗೆ ಒಂದು ಗ್ರಾಮ ಪಂಚಾಯಿತಿ ಹಾಗೂ ಒಂದು ಶಾಲೆಯನ್ನು ಜಿಲ್ಲಾ ಮಟ್ಟದ ಪ್ರಶಸ್ತಿಗೆ ಆಯ್ಕೆ ಮಾಡುವ ಮೂಲಕ ಶೌಚಾಲಯ ಸೌಲಭ್ಯ ಕಲ್ಪಿಸಿಕೊಳ್ಳಲು ಉತ್ತೇಜನ ನೀಡಲಾಗುತ್ತಿದೆ.

ಈ ಯೋಜನೆಯಡಿ ಜಿಲ್ಲೆಯಲ್ಲಿ ಈವರೆಗೆ 86657 ಬಿಪಿಎಲ್ ಕುಟುಂಬಗಳು ಹಾಗೂ 47893 ಎಪಿಎಲ್ ಕುಟುಂಬಗಳು ಸೇರಿದಂತೆ ಒಟ್ಟು 134550 ಕುಟುಂಬಗಳಿಗೆ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸಲಾಗಿದೆ.

ವಾರ್ತಾಧಿಕಾರಿ, ಬಳ್ಳಾರಿ.

1,86,106 ಶೌಚಾಲಯಗಳನ್ನು ನಿರ್ಮಿಸುವ ಗುರಿಯನ್ನು ಹೊಂದಲಾಗಿದೆ. ಅದರಲ್ಲೂ 25289 ಪರಿಶಿಷ್ಟ ಜಾತಿ ಕುಟುಂಬಗಳು ಹಾಗು 22201 ಪರಿಶಿಷ್ಟ ಕುಟುಂಬಗಳಿಗೆ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ 1120 ಅಂಗನವಾಡಿ ಕೇಂದ್ರಗಳ ಕಟ್ಟಡಗಳನ್ನು ಹೊಂದಲಾಗಿದ್ದು, 870 ಅಂಗನವಾಡಿ ಕೇಂದ್ರಗಳಿಗೆ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ನಿರ್ಮಲ ಭಾರತ ಅಭಿಯಾನ ಯೋಜನೆಯಡಿ 106 ಮಹಿಳಾ ಶೌಚಾಲಯಗಳ ನಿರ್ಮಾಣಕ್ಕೆ ಸಾರ್ವಜನಿಕರಿಂದ ಪ್ರಸ್ತಾವನೆಗಳು ಬಂದಿದ್ದು, 69 ಮಹಿಳಾ ಸಾಮೂಹಿಕ ಶೌಚಾಲಯಗಳನ್ನು ಪೂರ್ಣಗೊಳಿಸಲಾಗಿದೆ. ಉಳಿದ 37 ಮಹಿಳಾ ಸಾಮೂಹಿಕ ಶೌಚಾಲಯಗಳ ನಿರ್ಮಾಣ ಕಾಮಗಾರಿಯು ಪ್ರಗತಿಯ ಹಂತದಲ್ಲಿದೆ. ಬಹುತೇಕ ಎಲ್ಲಾ ಶಾಲೆಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಪ್ರಸ್ತುತವಾಗಿ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸಿಕೊಳ್ಳಲು ಸಾಮಾನ್ಯ ವರ್ಗಕ್ಕೆ 10 ಸಾವಿರ ರೂ. ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ 15 ಸಾವಿರ ರೂ. ಪ್ರೋತ್ಸಾಹ ಧನಸಹಾಯವನ್ನು ನೀಡಲಾಗುತ್ತಿದೆ.



ನಿರ್ಮಲ ಭಾರತ್ ಅಭಿಯಾನ ಯೋಜನೆಯನ್ನು ತೀವ್ರಗತಿಯಲ್ಲಿ ಪ್ರಗತಿ ಸಾಧಿಸಲು ಅನೇಕ ಕ್ರಿಯಾ ಯೋಜನೆಗಳನ್ನು ರೂಪಿಸಲಾಗಿದೆ. ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಕಿರಿಯ ಆರೋಗ್ಯ ಸಹಾಯಕಿಯರು, ಶಾಲಾ ಶಿಕ್ಷಕ, ಶಿಕ್ಷಕಿಯರು, ಕಿರಿಯ ಅಭಿಯಂತರರು, ಸಹಾಯಕ ಅಭಿಯಂತರರು, ಗ್ರಾಮ ಪಂಚಾಯಿತಿಯ ಚುನಾಯಿತ ಸದಸ್ಯರಿಗೆ ನಿಗದಿತ ಸಂಖ್ಯೆಯ ಕುಟುಂಬಗಳ ಮುಖ್ಯಸ್ಥರು ತಮ್ಮ ಮನೆಗಳಲ್ಲಿ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸಿಕೊಳ್ಳಲು ಮನವೊಲಿಸಲು ಆಂದೋಲನ ಮಾದರಿಯಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ. ಇದಕ್ಕಾಗಿ ನೌಕರರು, ಅರೆ ಸರ್ಕಾರಿ ನೌಕರರು, ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಸ್ಥಳೀಯ ಚುನಾಯಿತ ಪ್ರತಿನಿಧಿಗಳನ್ನೊಳಗೊಂಡಂತೆ ಒಟ್ಟು 11972 ಮಂದಿಯನ್ನು ನಿಯೋಜಿಸಲಾಗಿದ್ದು, ಶೌಚಾಲಯವಿಲ್ಲದ 1,01,810 ಕುಟುಂಬಗಳ ಮನವೊಲಿಕೆ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರತಿ ಗ್ರಾಮ ಪಂಚಾಯಿತಿಗೆ ತಲಾ 100 ಶೌಚಾಲಯ ನಿರ್ಮಾಣ ಕಾಮಗಾರಿಯೂ ತೀವ್ರಗತಿಯಲ್ಲಿ ಅನುಷ್ಠಾನಗೊಳ್ಳುತ್ತಿದೆ. ತಾಲೂಕ ಮಟ್ಟ ಹಾಗೂ ಜಿಲ್ಲಾ ಮಟ್ಟದ ನಿಯೋಜಿತ ಅಧಿಕಾರಿಗಳು ಉಸ್ತುವಾರಿಯನ್ನು ವಹಿಸುತ್ತಿದ್ದಾರೆ.



ನೈರ್ಮಲ್ಯ ಕುರಿತು ಅನೇಕ ಕಾರ್ಯಾಗಾರಗಳ ಮೂಲಕ ತರಬೇತಿ ನೀಡಲಾಗಿದೆ. ಅಲ್ಲದೇ ಬಳ್ಳಾರಿ ಜಿಲ್ಲೆಯಲ್ಲಿ ನೈರ್ಮಲ್ಯದ ಬಗ್ಗೆ ಸಾರ್ವಜನಿಕರಿಗೆ ಬೀದಿ ನಾಟಕ, ಚಲನ ಚಿತ್ರ ಪ್ರದರ್ಶನ ಕರ ಪತ್ರ, ಪೋಸ್ಟರ್, ಬ್ಯಾನರ್ ಅಳವಡಿಕೆ ಸೇರಿದಂತೆ ವಿವಿಧ ಬಹು ಮಾಧ್ಯಮ ಪ್ರಚಾರಾಂದೋಲನದ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ.

ಜಾಗೃತ ಜಾಥಾ ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಹಾಗೂ ಪೋಷಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಜಿಲ್ಲೆಯ ಜನಪ್ರತಿನಿಧಿಗಳು ಪೂರಕವಾಗಿ ಸ್ಪಂದಿಸುತ್ತಿದ್ದಾರೆ. ಜಿಲ್ಲೆಯಲ್ಲಿ ಪ್ರತಿಶತ ಪ್ರಗತಿ ಸಾಧಿಸಲು ಅನೇಕ ಕ್ರಿಯಾ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಮಹಮದ್ ಸಲಾವುದ್ದೀನ್ ತಿಳಿಸಿದ್ದಾರೆ.

ಸಾರ್ವಜನಿಕರು ಸ್ವಯಂಪ್ರೇರಿತವಾಗಿ ಶೌಚಾಲಯಗಳನ್ನು ಬಳಕೆ ಮಾಡುವ ಮೂಲಕ ನೈರ್ಮಲ್ಯ ಹಾಗೂ ಸ್ವಚ್ಛ ಪರಿಸರ ಸೃಷ್ಟಿಸಲು ಸಹಕರಿಸಲಿ. ಆ ಮೂಲಕ ಸ್ವಸ್ಥ ಸಮಾಜ ನಿರ್ಮಾಣಕ್ಕೆ ಕಾಣ್ಕೆ ನೀಡಲಿ. ❑

# ನಿಮಗಿದು ತಿಳಿದಿದೆಯೇ?

## ಮುಕ್ತ ವ್ಯಾಪಾರ ಒಪ್ಪಂದ

ಎರಡು ಅಥವಾ ಅದಕ್ಕೂ ಹೆಚ್ಚಿನ ಸಮ ಹಿತಾಸಕ್ತಿಯ ದೇಶಗಳು ಯಾವುದೇ ಅಡೆ ತಡೆ ಇಲ್ಲದೇ ತಮ್ಮ ನಡುವೆ ಸುಗಮ ವ್ಯಾಪಾರ ವಹಿವಾಟು ನಡೆಸಲು ಮಾಡಿಕೊಳ್ಳುವ ತಿಳಿವಳಿಕೆಯೇ ಮುಕ್ತ ವ್ಯಾಪಾರ ಒಪ್ಪಂದವಾಗಿದೆ. ರಫ್ತುದಾರರಿಗೆ ಹಾಗೂ ಬಂಡವಾಳ ಹೂಡಿಕೆದಾರರಿಗೆ ತಮ್ಮ ಕಾರ್ಯ ನಿರ್ವಹಣೆಗೆ ಅನುಕೂಲ ಮಾಡಿಕೊಡುವ ಮೂಲಕ ಪರಸ್ಪರರ ಲಾಭಕ್ಕಾಗಿ ಶ್ರಮಿಸುವುದು ಈ ಒಪ್ಪಂದ ಉದ್ದೇಶವಾಗಿರುತ್ತದೆ. ಎರಡು ದೇಶಗಳ ನಡುವೆ ಅಂದರೆ ಉಭಯ ದೇಶಗಳ ನಡುವಿನ ಒಪ್ಪಂದ ಹಾಗೂ ಬಹುಪಕ್ಷೀಯ (ಎರಡು ದೇಶಗಳಿಗಿಂತ ಹೆಚ್ಚು ದೇಶಗಳು ಸೇರಿ ಮಾಡಿಕೊಳ್ಳುವ) ಒಪ್ಪಂದಗಳು ಸಾಮಾನ್ಯವಾಗಿ, ತೆರಿಗೆ ಭಾರ ಇಳಿಕೆ, ನಿಗದಿತ ಸರಕು ಸಾಗಾಟಕ್ಕೆ ಮುಕ್ತ ಅವಕಾಶಗಳಂತಹ ಸೌಲಭ್ಯಗಳನ್ನು ಒಳಗೊಂಡಿರುತ್ತವೆ.

ಕೃಷಿ ಉತ್ಪನ್ನಗಳು, ಬ್ಯಾಂಕಿಂಗ್, ನಿರ್ಮಾಣ ಸೇವೆ ಮೊದಲಾದ ಕ್ಷೇತ್ರಗಳಲ್ಲಿನ ವ್ಯಾಪಾರ ವಹಿವಾಟುಗಳಿಗೂ ಇದರಲ್ಲಿ ಅವಕಾಶಗಳಿವೆ. ಸಾಮಿಪ್ಯ ಆರ್ಥಿಕ ಸಹಭಾಗಿತ್ವ, ಸಿಪಿಎ, ಆರ್ಥಿಕ ಸಹಭಾಗಿತ್ವ ಕಾರ್ಯತಂತ್ರ – ಎಸ್‌ಇಪಿ ಮೊದಲಾದವು ಕೂಡಾ ವಾಣಿಜ್ಯ ಸಹಕಾರದ ಇನ್ನಿತರ ಮುಕ್ತ ಒಪ್ಪಂದಗಳಾಗಿವೆ.

ಭಾರತ, ಹತ್ತು ಆಗ್ನೇಯ ಏಶಿಯಾ ದೇಶಗಳ ಸಂಘಟನೆ – ಆಸಿಯಾನ್ ಜತೆ ಸೇವಾಕ್ಷೇತ್ರ ಹಾಗೂ ಬಂಡವಾಳ ಹೂಡಿಕೆಗೆ ಸಂಬಂಧಿಸಿದಂತೆ ಇತ್ತೀಚೆಗಷ್ಟೇ ಮಹತ್ವದ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಿದೆ. ಇದು ಇಂಡೋನೇಶಿಯಾ, ಮಲೇಶಿಯಾ, ಫಿಲಿಪ್ಪೈನ್ಸ್, ಸಿಂಗಾಪುರ, ಥೈಲ್ಯಾಂಡ್, ಬ್ರುನೈ, ಕಾಂಬೋಡಿಯಾ, ಲಾವೋಸ್, ಮ್ಯಾನ್ಮಾರ್ ಮತ್ತು ವಿಯೆಟ್ನಾ ದೇಶಗಳ ಜತೆಗೆ ಐಟಿ ಹಾಗೂ ಇನ್ನಿತರ ವೃತ್ತಿಪರ ಕ್ಷೇತ್ರಗಳಾದ, ಮಾರುಕಟ್ಟೆ ಲಭ್ಯತೆ ಹಾಗೂ ಪರಿಶೀಲನೆ, ವಿವಾದ ಇತ್ಯರ್ಥ, ಪ್ರಯೋಜನ ಸೌಲಭ್ಯ ನಿರಾಕರಣೆ, ದೇಶೀಯ ನಿಯಮಾವಳಿ ಮೊದಲಾದ ಸೇವಾಕ್ಷೇತ್ರದ ವಿವಿಧ ರಂಗಗಳಲ್ಲಿ ಪರಸ್ಪರ ವಾಣಿಜ್ಯ ಸಹಕಾರಕ್ಕೆ ಅವಕಾಶ ಕಲ್ಪಿಸಿದೆ.

## ಇ ವಿಮಾ ಖಾತೆ

ವಿದ್ಯುನ್ಮಾನ ನಮೂನೆಯಲ್ಲಿ ಪಾಲಿಸಿದಾರನ ವಿಮಾ ದಾಖಲೆಗಳನ್ನು ಸಂರಕ್ಷಿಸಿಡುವುದು ವಿದ್ಯುನ್ಮಾನ ವಿಮಾ ಖಾತೆಯ ಉದ್ದೇಶವಾಗಿದೆ. ಪಾಲಿಸಿದಾರನು ತನಗೆ ಬೇಕೆನಿಸಿದಾಗ ಅಂತರ್ಜಾಲ ಬಳಸಿ ತನ್ನ ವಿಮಾ ಖಾತೆಯ ವಿವರಗಳನ್ನು ಪರಿಶೀಲಿಸಿಕೊಳ್ಳಬಹುದಾಗಿದೆ. ಪ್ರತಿ ಇ ವಿಮಾ ಖಾತೆಗೆ ವಿಶಿಷ್ಟವಾದ ಒಂದು ಗುರುತಿನ ಸಂಖ್ಯೆ ಇರುತ್ತದೆ. ಪಾಲಿಸಿದಾರ ಈ ಸಂಖ್ಯೆ ಬಳಸಿ, ನಿಗದಿತ ಪಾಸ್ ವರ್ಡ್ ಮೂಲಕ ಖಾತೆಯ ವಿವರಗಳನ್ನು ಆನ್ ಲೈನ್‌ನಲ್ಲಿ ಪರಿಶೀಲಿಸಿಕೊಳ್ಳಬಹುದಾಗಿದೆ. ಪಾಲಿಸಿದಾರ ಇ ವಿಮಾ ಖಾತೆ ಅರ್ಜಿ ತುಂಬಿ ಜತೆಗೆ ಅಗತ್ಯವಾದ ಫೋಟೋ ಗುರುತಿನ ಚೀಟಿ, ಇತ್ತೀಚಿನ ಭಾವಚಿತ್ರ, ಕ್ಯಾನ್ಸಲ್ಡ್ ಚೆಕ್, ವಿಳಾಸ ಸಾಕ್ಷಿ ಮೊದಲಾದ ವಿವರಗಳನ್ನು ಇನ್ಶೂರೆನ್ಸ್ – ರಿಪಾಸಿಟರಿ ಅಥವಾ ಅದರಿಂದ ಸೀಮಿಸಲ್ಪಟ್ಟ ಅಧಿಕೃತ ಸಂಸ್ಥೆ / ವ್ಯಕ್ತಿಗೆ ನೀಡಿ ಇ ವಿಮಾ ಖಾತೆ ತೆರೆಯಬಹುದಾಗಿದೆ. ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ಇದುವರೆಗೆ – ಎನ್‌ಎಸ್‌ಡಿಎಲ್, ಸಿಐಆರ್‌ಎಲ್, ಎಸ್‌ಹೆಚ್‌ಸಿಎಫ್‌ಎಲ್, ಕೆಐಆರ್‌ಎಲ್, ಸಿಐಎಂಎಸ್ ಈ ಐದು ಕಂಪನಿಗಳನ್ನು ಇ ವಿಮಾ ಖಾತೆ ತೆರೆಯುವ ರೆಪಾಸಿಟರಿಯಾಗಿ ನೇಮಿಸಿದೆ. ವಿದ್ಯುನ್ಮಾನ ವಿಮಾ ಖಾತೆಯಿಂದ ಅನೇಕ ಪ್ರಯೋಜನಗಳಿವೆ. ಇದು ಕಾಗದರಹಿತ ವಹಿವಾಟಾಗಿದೆ. ಖಾತೆಯ ವಿವರಗಳನ್ನು ಪಾಲಿಸಿದಾರ ಬೇಕಾದಾಗ ಯಾವುದೇ ಅಡೆತಡೆಗಳಿಲ್ಲದೆ ಪರಿಶೀಲಿಸಿಕೊಳ್ಳಬಹುದಾಗಿದೆ. ದಾಖಲೆಗಳೆಲ್ಲ ಒಂದೆಡೆ ಇರುವುದರಿಂದ ಹೊಸ ವಿಮೆ ಮಾಡಿಸುವಾಗ ಹೊಸದಾಗಿ ದಾಖಲೆಗಳನ್ನು ಒದಗಿಸುವ ಅಗತ್ಯವಿರುವುದಿಲ್ಲ. ವಿಮಾ ವ್ಯವಹಾರಗಳೆಲ್ಲ ಸುಲಭವಾಗುತ್ತದೆ. ❑

(44ನೇ ಪುಟದಿಂದ)

# ಹಣ್ಣು ಮತ್ತು ತರಕಾರಿ ರಫ್ತು – ಸವಾಲು

* ಒಪ್ಪಂದ ಕೃಷಿ ಪದ್ಧತಿಯ ಅಳವಡಿಕೆ.
* ತಂತ್ರಜ್ಞಾನವನ್ನು ಅಭಿವೃದ್ಧಿಗೊಳಿಸುವುದು ಮತ್ತು ಹುಟ್ಟುವಳಿ ಆಧಾರಿತ ಹಣಕಾಸು ವ್ಯವಸ್ಥೆ.
* ಸೌಲಭ್ಯಗಳನ್ನು ಒದಗಿಸಲು ಸರಕಾರದಿಂದ ಬಂಡವಾಳ ಹೂಡಿಕೆ.
* ಹೆಚ್ಚಿನ ಮೌಲ್ಯವರ್ಧಿತ ಉತ್ಪನ್ನಗಳ ರಫ್ತು.

ಒಟ್ಟಾರೆಯಾಗಿ ಹೇಳಬೇಕೆಂದರೆ ರಫ್ತು ಪ್ರಕ್ರಿಯೆಯನ್ನು ಬಲಪಡಿಸಲು, ಹೆಚ್ಚಿನ ಕೃಷಿ ಸರಕುಗಳನ್ನು ರಫ್ತು ಮಾಡಬೇಕಾದ ಅವಶ್ಯಕತೆಯನ್ನು ರೈತರಿಗೆ ತಿಳಿಸಿಕೊಡುವುದರೊಂದಿಗೆ ರೈತರು, ಸಂಸ್ಕರಣದಾರರು, ರಫ್ತುದಾರರು ಮತ್ತು ಗ್ರಾಹಕರ ನಡುವೆ ಹೊಂದಾಣಿಕೆಯನ್ನು ಏರ್ಪಡಿಸಬೇಕು. ಹಣ್ಣು ಮತ್ತು ತರಕಾರಿ, ಕೋಳಿಸಾಕಾಣಿಕೆ, ಸಮುದ್ರೋತ್ಪನ್ನಗಳು, ಹೂವಿನ ಪದಾರ್ಥಗಳು, ಏಕದಳ ಧಾನ್ಯ ಪದಾರ್ಥಗಳ ರಫ್ತನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡಬೇಕು.

ಆಗಿಂದಾಗ್ಗೆ ಸೂಕ್ತ ಸಮಯದಲ್ಲಿ ರೈತರಿಗೆ ಮಾರುಕಟ್ಟೆ ಮಾಹಿತಿ ಒದಗಿಸುವುದು. ಮಾಹಿತಿ ಮತ್ತು ತಂತ್ರಜ್ಞಾನವನ್ನು ಉಪಗ್ರಹದ ಮೂಲಕ ರೈತರಿಗೆ ತಲುಪಿಸುವುದು, ಈ–ಮೇಲ್, ಇಂಟರ್‌ನೆಟ್, ಈ–ಕಾಮರ್ಸಗಳ ಬಳಕೆಯ ಕುರಿತು ತರಬೇತಿ ಶಿಬಿರಗಳ ಮೂಲಕ ಅವರಿಗೆ ಅರಿವು ಮೂಡಿಸಬೇಕು. ಮಾರುಕಟ್ಟೆಗೆ ಅನುಕೂಲವಾಗುವಂತೆ ಕೃಷಿಯಲ್ಲಿ ಬದಲಾವಣೆಗಳನ್ನು ಉಂಟುಮಾಡುವುದೂ ಸಹ ಇವುಗಳಲ್ಲೊಂದಾಗಿದೆ.

ಕೃಷಿಯಲ್ಲಿ ವ್ಯವಹಾರಿಕ ಹಾಗೂ ವೈವಿಧ್ಯತೆಯನ್ನು ಉಂಟುಮಾಡುವುದರ ಜೊತೆ ಜೊತೆಗೆ ಕೃಷಿ ವ್ಯವಹಾರದ ದೀರ್ಘ ಕಾಲೀನ ವ್ಯವಸ್ಥೆಗೆ ಪರಿಹಾರವನ್ನು ಕಂಡುಕೊಳ್ಳುವುದು ಒಳ್ಳೆಯದು.

ಒಪ್ಪಂದ ಕೃಷಿ ಪದ್ಧತಿಯ ಅಳವಡಿಕೆ ಹಾಗೂ ವಿವಿಧ ಸೌಲಭ್ಯಗಳನ್ನು ಒದಗಿಸಲು ಸರಕಾರದಿಂದ ಬಂಡವಾಳ ಹೂಡಿಕೆ ಇತ್ಯಾದಿಗಳಿಂದ ರಫ್ತು ಪ್ರಕ್ರಿಯೆಯಲ್ಲಿ ಸುಧಾರಣೆಯನ್ನು ಕಾಣಬಹುದಾಗಿದೆ. ❑

# ವಾರ್ತಾ ವಿಶೇಷ

ಆಹಾರ ಸಾಮಗ್ರಿ ದಾಸ್ತಾನು ವಿವಾದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳುವವರೆಗೆ ಈಗಿನ ಶಾಂತಿ ಕಲಂ ಮುಂದುವರೆಸಬೇಕೆಂಬ ಭಾರತದ ಬೇಡಿಕೆಗೆ ಮನ್ನಣೆ ನೀಡಿರುವ ವಿಶ್ವ ವ್ಯಾಪಾರ ಸಂಘಟನೆ, ತಿಂಗಳುಗಳಿಂದ ನನೆಗುದಿಗೆ ಬಿದ್ದಿದ್ದ ವ್ಯಾಪಾರ ಅವಕಾಶ ಒಪ್ಪಂದ – ಟಿಎಫ್ಎಗೆ ಸಮ್ಮತಿಸಿದೆ.

ವಿಶ್ವವ್ಯಾಪಾರ ಸಂಘಟನೆ ಆಹಾರ ಸಬ್ಸಿಡಿ ಮಿತಿಯನ್ನು ಮೀರುವ ಸದಸ್ಯ ರಾಷ್ಟ್ರಗಳ ಮೇಲೆ, ದಂಡ ಶುಲ್ಕ ವಿಧಿಸುತ್ತಿದ್ದು, ಶಾಂತಿ ಕಲಂ ಮುಂದುವರಿಕೆಯಿಂದ ಇಂತಹ ರಾಷ್ಟ್ರಗಳಿಗೆ ದಂಡದಿಂದ ರಕ್ಷಣೆ ದೊರೆಯುತ್ತದೆ. ವಿಶ್ವವ್ಯಾಪಾರ ಸಂಘಟನೆ ನಿಯಮಾವಳಿ ಪ್ರಕಾರ, ಅಭಿವೃದ್ಧಿ ಹೊಂದುತ್ತಿರುವ ಒಂದು ದೇಶ ತನ್ನ ಕೃಷಿ ಉತ್ಪನ್ನದ ಶೇ. 10 ರಷ್ಟನ್ನು ಮಾತ್ರ ಆಹಾರ ಸಬ್ಸಿಡಿಯನ್ನಾಗಿ ಬಳಸಿಕೊಳ್ಳಬಹುದಾಗಿದೆ.

* * *

ದೇಶದ ಎಂಜಿನಿಯರಿಂಗ್ ಸೇವೆಗಳ ರಫ್ತು ವರ್ಷದಿಂದ ವರ್ಷಕ್ಕೆ ಶೇ. 20 ರಷ್ಟು ವೃದ್ಧಿಸುತ್ತಿದೆ. ದಕ್ಷಿಣ ಏಷ್ಯಾ ಮತ್ತು ಮಧ್ಯ ಪ್ರಾಚ್ಯ ಮತ್ತು ದೇಶಗಳಲ್ಲಿ ಹೆಚ್ಚಿದ ಬೇಡಿಕೆಯಿಂದ ಸೆಪ್ಟೆಂಬರ್‌ನಲ್ಲಿ ರೂ. 395.28 ಕೋಟಿ ಮೌಲ್ಯದ ಎಂಜಿನಿಯರಿಂಗ್ ಸೇವೆಗಳ ರಫ್ತು ಮಾಡಿಕೊಳ್ಳಲಾಗಿದೆ ಎಂದು ಎಂಜಿನಿಯರಿಂಗ್ ರಫ್ತು ಉತ್ತೇಜನ ಸಮಿತಿ (ಇಇಪಿಸಿ) ಹೇಳಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ರೂ 328.18 ಕೋಟಿ ಮೌಲ್ಯದ ಎಂಜಿನಿಯರಿಂಗ್ ಸೇವೆಗಳ ರಫ್ತು ದಾಖಲಾಗಿತ್ತು.

* * *

ಚೆಕ್‌ಗಳಿಗೆ ಸಂಬಂಧಿಸಿದ ವಂಚನೆ ಪ್ರಕರಣಗಳನ್ನು ತಗ್ಗಿಸುವ ನಿಟ್ಟಿನಲ್ಲಿ ಗಮನ ಹರಿಸಿರುವ ಭಾರತೀಯ ರಿಸರ್ವ್ ಬ್ಯಾಂಕ್, ದೊಡ್ಡ ಮೊತ್ತದ ಚೆಕ್‌ಗಳಿಗೆ ಹಣ ಪಾವತಿಸುವ ವೇಳೆ ಆ ವಹಿವಾಟನ್ನು ತಪ್ಪದೇ ಖಾತೆದಾರರ ಗಮನಕ್ಕೆ ತರಬೇಕು ಎಂದು ಎಲ್ಲ ಬ್ಯಾಂಕ್‌ಗಳಿಗೂ ನಿರ್ದೇಶನ ನೀಡಿದೆ. ರೂ. 2 ಲಕ್ಷಕ್ಕಿಂತ ಅಧಿಕ ಮೊತ್ತದ ಚೆಕ್‌ಗಳು ಕ್ಲಿಯರೆನ್ಸ್‌ಗೆ ಬಂದಾಗ ಖಾತೆದಾರರು ಮತ್ತು ಹಣ ಪಡೆಯಬೇಕಾದ ಗ್ರಾಹಕರಿಗೆ ಎಸ್ಎಂಎಸ್ ರವಾನಿಸಿ ವಹಿವಾಟಿನ ಕುರಿತು ಗಮನ ಸೆಳೆಯಬೇಕು. ದೊಡ್ಡ ಮೊತ್ತದ ಚೆಕ್‌ಗಳನ್ನು ಅಲ್ಟ್ರಾ ವೈಲೆಟ್ (ಅತಿ ನೇರಳೆ) ಕಿರಣಗಳಡಿ ಕಡ್ಡಾಯವಾಗಿ ಪರಿಶೀಲಿಸಬೇಕು. ರೂ. 5 ಲಕ್ಷಕ್ಕೂ ಹೆಚ್ಚಿನ ಮೊತ್ತದ ವಹಿವಾಟಾಗಿದ್ದರೆ, ಚೆಕ್‌ಗಳ ಸಾಚಾತನವನ್ನು ಬ್ಯಾಂಕ್‌ನಲ್ಲಿಯೇ ಹಲವು ಹಂತಗಳಲ್ಲಿ ತಪಾಸಣೆಗೆ ಒಳಪಡಿಸಬೇಕು ಎಂದು ಆರ್‌ಬಿಐ ಹೊರಡಿಸಿದ ಸುತ್ತೋಲೆಯಲ್ಲಿ ಸೂಚಿಸಿದೆ.

* * *

ಪ್ರಸಕ್ತ ಹಣಕಾಸು ವರ್ಷದ ಅಕ್ಟೋಬರ್‌ನಲ್ಲಿ ರಫ್ತು ಶೇ. 5 ರಷ್ಟು ಕುಸಿತ ಕಂಡಿದೆ. ಆದರೆ ಚಿನ್ನದ ಆಮದು 417 ಕೋಟಿ ಡಾಲರ್ (ರೂ. 25,020 ಕೋಟಿ) ನಷ್ಟು ಹೆಚ್ಚಿರುವುದರಿಂದ ಒಟ್ಟಾರೆ ಆಮದು ಪ್ರಮಾಣ ಹೆಚ್ಚಿದ್ದು, ದೇಶದ ವ್ಯಾಪಾರ ಕೊರತೆ ಪ್ರಮಾಣ 1,335 ಕೋಟಿ ಡಾಲರ್‌ಗೆ (ರೂ. 80,100 ಕೋಟಿ), ಶೇ. 26.06 ರಷ್ಟು ಏರಿಕೆ ಆಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ವ್ಯಾಪಾರ ಕೊರತೆ ಪ್ರಮಾಣ 1,059 ಕೋಟಿ ಡಾಲರ್ (ರೂ. 63,540 ಕೋಟಿ) ನಷ್ಟಿತ್ತು ಎಂದು ಸರ್ಕಾರ ಮಾಹಿತಿ ನೀಡಿದೆ. ❑


## Subscription Coupon

**[For New membership /Renewal/Change of Address]**

I want to subscribe to :

Yojana / Kurukshetra / Ajkal / : 1 yr. Rs.100/-; 2 yrs, Rs.180/- ; 3 yrs, Rs.250/-

Bal Bharati : 1 yr. Rs.80/-; 2 yrs, Rs.150/- ; 3 yrs, Rs.200/-

**(Circle the magazine of your choice and the period of subscription)**

DD/PO/MO No.______________________________ date ______________

Name (in block letters) : ______________________________

Subscriber's profile : Student / Academician / Institution / Others

Address : ______________________________

______________________________

PIN : ____________________

The amount may kindly be sent in the form of D.D. It should be drawn in favour of ADG (I/C), Publications Division, Min. of I & B, GOI and payable at New Delhi. The D.D. along with duly filled cupon may kindly be sent to The Business Manager (Journals), Publications Division, East Block-IV, Level-7, R.K.Puram, New Delhi – 110066. Ph : 011-26100207, 26105590

Please allow us 4 to 6 weeks for the dispatch of the first issue.


P.S. : For Renewal / change in address, please quote your subscription number


# 45ನೇ ಅಂತಾರಾಷ್ಟ್ರೀಯ ಚಿತ್ರೋತ್ಸವ





ಗೋವಾದಲ್ಲಿ ಇತ್ತೀಚೆಗೆ ನಡೆದ ಭಾರತದ 45ನೇ ಅಂತಾರಾಷ್ಟ್ರೀಯ ಚಿತ್ರೋತ್ಸವವನ್ನು ಮೇರು ನಟ ಶ್ರೀ ಅಮಿತಾಬ್ ಬಚ್ಚನ್ ಉದ್ಘಾಟಿಸಿದರು. ಚಿತ್ರದಲ್ಲಿ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಶ್ರೀ ಅರುಣ್ ಜೈಟ್ಲಿ, ಶತಮಾನದ ತಾರೆ ಪುರಸ್ಕೃತ ಶ್ರೀ ರಜನಿಕಾಂತ್ ಮೊದಲಾದವರನ್ನು ಚಿತ್ರದಲ್ಲಿ ಕಾಣಬಹುದು



# JEWELS FROM PUBLICATIONS DIVISION



**For further Details Please Contact:**
**Yojana (Kannada)**
**1st Floor, 'F' Wing, Kendriya Sadana, Koramangala,**
**BANGALORE - 560 034**
**Ph.: 080-25537244 E-mail : yojanakannada@yahoo.com**

PUBLICATIONS DIVISION
MINISTRY OF INFORMATION & BROADCASTING
GOVERNMENT OF INDIA

e-mail : dpd@sb.nic.in, dpd@hub.nic.in
website : publicationsdivision.nic.in

## ಜ್ಞಾನಾರ್ಜನೆಗಾಗಿ...
## ಯೋಜನಾ – ಕನ್ನಡ ಮಾಸ ಪತ್ರಿಕೆ
## ಚಂದಾದಾರರಾಗಿ




ವಿಳಾಸ

**ಯೋಜನಾ – ಕನ್ನಡ**

ಮೊದಲನೆ ಅಂತಸ್ತು,
'ಎಫ್' ವಿಂಗ್, ಕೇಂದ್ರೀಯ ಸದನ,
ಕೋರಮಂಗಲ, ಬೆಂಗಳೂರು – 560 034.

✆ : 25537244

e-mail : yojanakannada@yahoo.com

ಪತ್ರಿಕೆ ಸರಿಯಾಗಿ ತಲುಪಲು ಚಂದಾದಾರರು, ಅಂಚೆ ಪಿನ್‌ಕೋಡ್ ಒಳಗೊಂಡ ತಮ್ಮ ಪೂರ್ಣ ವಿಳಾಸ ಒದಗಿಸಬೇಕು.

### ಚಂದಾ ವಿವರ

| | |
|---|---|
| ಒಂದು ವರ್ಷಕ್ಕೆ | ರೂ. 100/- |
| ಎರಡು ವರ್ಷಗಳಿಗೆ | ರೂ. 180/- |
| ಮೂರು ವರ್ಷಗಳಿಗೆ | ರೂ. 250/- |

ಚಂದಾ ಹಣವನ್ನು ಮನಿ ಆರ್ಡರ್- ಎಂ ಓ ಮೂಲಕವೇ ನಮ್ಮ ವಿಳಾಸಕ್ಕೆ ಕಳಿಸಿದರೆ ಉತ್ತಮ. ಎಂ ಓ ಕಳಿಸಿದ ಒಂದು ವಾರದ ಒಳಗೆ ನಮ್ಮ ಕಚೇರಿಯನ್ನು ಸಂಪರ್ಕಿಸಿ ನಿಮ್ಮ ವಿಳಾಸ-ವಿವರಗಳನ್ನು ದೃಢೀಕರಿಸಿಕೊಳ್ಳಬೇಕಾಗಿ ಕೋರಲಾಗಿದೆ.